# ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ: 25-01-2024ರ ಗುರುವಾರ ಪೂರ್ವಾಹ್ನ 11-30 ಗಂಟೆಗೆ ನಡದ "ಸಿಂಡಿಕೇಟಿನ ಮೊದಲನೇ ಸಾಮಾನ್ಯ ಸಭೆ"ಯ ನಡಾವಳ.

ಉಪಸ್ಥಿತರು:

| | | |
|---|---|---|
| 1. | ಪ್ರೊ. ಎನ್.ಕೆ.ಲೋಕನಾಥ್ | ಕುಲಪತಿ ಹಾಗೂ ಅಧ್ಯಕ್ಷರು |
| 2. | ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ ಇವರ ಪರವಾಗಿ<br>ಪ್ರೊ. ಎ.ಹೆಚ್.ಎಂ.ವಿಜಯಲಕ್ಷ್ಮಿ, ಜಂಟಿ ನಿರ್ದೇಶಕರು<br>ಕಾಲೇಜು ಶಿಕ್ಷಣ ಇಲಾಖೆ | ಸದಸ್ಯರು |
| 3. | ಪ್ರೊ. ಸೋನೆರ್ ನಂದಪ್ಪ | ಸದಸ್ಯರು |
| 4. | ಪ್ರೊ. ಟಿ.ಆರ್.ಮಾರುತಿ | ಸದಸ್ಯರು |
| 5. | ಡಾ. ಟಿ.ಆರ್. ಚಂದ್ರಶೇಖರ್ ಬಿ.ಇ., ಎಂಐಇ., ಎಂ.ಎ., ಪಿಹೆಚ್.ಡಿ | ಸದಸ್ಯರು |
| 6. | ಶ್ರೀ ಗೋಕುಲ್ ಗೋವರ್ಧನ್ ಎಲ್ಎಲ್ ಬಿ., ಎಂ.ಬಿ.ಎ. | ಸದಸ್ಯರು |
| 7. | ಡಾ. ಸೌಮ್ಯ ಈರಪ್ಪ ಕೆ. | ಸದಸ್ಯರು |
| 8. | ಪ್ರೊ. ಯಜ್ಞಮೂರ್ತಿ ಶ್ರೀಕಾಂತ್ | ಸದಸ್ಯರು |
| 9. | ಡಾ. ಗಣೇಶ್ ಕೆ. | ಸದಸ್ಯರು |
| 10. | ಡಾ. ಮುಜೀದ ಬಾನು | ಸದಸ್ಯರು |
| 11. | ಶ್ರೀ ಮಹದೇಶು | ಸದಸ್ಯರು |
| 12. | ಶ್ರೀ ನಾಗರಾಜು ಸಿ | ಸದಸ್ಯರು |
| 13. | ಡಾ. ಬಸವರಾಜು ಸಿ | ಸದಸ್ಯರು |
| 14. | ಪ್ರೊ. ಶಬ್ಬೀರ್ ಮೊಹಮದ್ ಮುಸ್ತಫಾ | ಸದಸ್ಯರು |
| 15. | ಡಾ. ಶಿಲ್ಪ ಜೆ | ಸದಸ್ಯರು |
| 16. | ಶ್ರೀ ನಟರಾಜು ಹೆಚ್ ಎಸ್ | ಸದಸ್ಯರು |
| 17. | ಪ್ರೊ. ಕೆ.ಎಂ.ಮಹದೇವನ್, ಕುಲಸಚಿವರು (ಪರೀಕ್ಷಾಂಗ) | ಸದಸ್ಯರು |
| 18. | ಶ್ರೀಮತಿ ವಿ.ಆರ್. ಶೈಲಜ KAS | ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿ |
| 19. | ಶ್ರೀಮತಿ ರೇಖಾ ಕೆ.ಎಸ್., KSAS | ಹಣಕಾಸು ಅಧಿಕಾರಿಗಳು ವಿಶೇಷ ಆಹ್ವಾನಿತರು |

ಅನುಪಸ್ಥಿತರು:

1. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
2. ಶ್ರೀ ಸುರೇಶ್, ಕೆ.ಎ.ಎಸ್, ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
3. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
4. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.

ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಸಭೆಯಲ್ಲಿ ಉಪಸ್ಥಿತರಿದ್ದ ಅಧ್ಯಕ್ಷರು ಹಾಗೂ ಸದಸ್ಯರುಗಳನ್ನು ಸಭೆಗೆ ಹೃತ್ಪೂರ್ವಕವಾಗಿ ಸ್ವಾಗತಿಸಿದರು.

ನಂತರ, ಮಾನ್ಯ ಕುಲಪತಿಯವರ ಅನುಮತಿಯ ಮೇರೆಗೆ ಈ ಕೆಳಕಂಡ ಕಾರ್ಯಸೂಚಿಗಳನ್ನು ಕುಲಸಚಿವರು ಮಂಡಿಸಿದರು.

| ವಿಷಯ ಸಂಖ್ಯೆ | ವಿಷಯ ಸಂಕ್ಷಿಪ್ತವಾಗಿ |
|---|---|

ದಿನಾಂಕ : 22-12-2023ರಂದು ಜರುಗಿದ "ಸಿಂಡಿಕೇಟಿನ ಆರನೇ ಸಾಮಾನ್ಯ ಸಭೆ"ಯ ನಡವಳಿಯನ್ನು ದೃಢೀಕರಿಸುವ ಬಗ್ಗೆ.

ದಿನಾಂಕ : 03-01-2024ರಂದು ಜರುಗಿದ "ಸಿಂಡಿಕೇಟಿನ ವಿಶೇಷ ಸಭೆ"ಯ ನಡವಳಿಯನ್ನು ದೃಢೀಕರಿಸುವ ಬಗ್ಗೆ.

ಹಾಗೂ

ದಿನಾಂಕ : 10-01-2024ರಂದು ಜರುಗಿದ "ಸಿಂಡಿಕೇಟಿನ ವಿಶೇಷ ಸಭೆ"ಯ ನಡವಳಿಯನ್ನು ದೃಢೀಕರಿಸುವ ಬಗ್ಗೆ

ದಿನಾಂಕ : 22-12-2023ರಂದು ಜರುಗಿದ "ಸಿಂಡಿಕೇಟಿನ ಆರನೇ ಸಾಮಾನ್ಯ ಸಭೆ"ಯ ನಡವಳಿಯನ್ನು, ದಿನಾಂಕ : 03-01-2024ರಂದು ಜರುಗಿದ "ಸಿಂಡಿಕೇಟಿನ ವಿಶೇಷ ಸಭೆ"ಯ ನಡವಳಿಯನ್ನು ಮತ್ತು ದಿನಾಂಕ : 10-01-2024ರಂದು ಜರುಗಿದ "ಸಿಂಡಿಕೇಟಿನ ವಿಶೇಷ ಸಭೆ"ಯ ನಡವಳಿಯನ್ನು ದೃಢೀಕರಿಸಲಾಯಿತು.

| ಸಾಮಾನ್ಯ ಸಭೆ 2024/1.1 | 2021-22 ಮತ್ತು 2022-23ನೇ ಸಾಲಿನ ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕ ಪತ್ರಗಳು. |
|---|---|

ಮಾನ್ಯ ಕುಲಪತಿಗಳು ಮಾತನಾಡಿ ಇಂದು ನಡೆಯುತ್ತಿರುವುದು ಪ್ರಸ್ತುತ ವರ್ಷದ ಮೊದಲನೇ ಸಿಂಡಿಕೇಟ್ ಸಭೆ. ಈ ಸಭೆಯಲ್ಲಿ ಒಟ್ಟು 24 ವಿಷಯಗಳ ಕಾರ್ಯಸೂಚಿಯನ್ನು ತಮಗೆ ಈಗಾಗಲೇ ಕಳುಹಿಸಲಾಗಿದೆ. ವಿಷಯಗಳಿಗೆ ತಮ್ಮ ಸಲಹೆಗಳು ಹಾಗೂ ಮಾರ್ಪಾಟುಗಳೇನಾದರೂ ತಿಳಿಸಿದರೆ ಮಾರ್ಪಾಟುಗಳನ್ನು ಮಾಡಿಕೊಳ್ಳಲಾಗುವುದೆಂದು ಜೊತೆಗೆ ನಮ್ಮ ವಿಶ್ವವಿದ್ಯಾನಿಲಯದ ಎಲ್ಲಾ ಆಗು-ಹೋಗುಗಳನ್ನು ತಮ್ಮ ಗಮನಕ್ಕೆ ತರಲಾಗುತ್ತಿದೆ. ಆದ್ದರಿಂದ ತಮ್ಮಗಳ ಸಲಹೆ ಹಾಗೂ ಮಾರ್ಗದರ್ಶನಗಳನ್ನು ನೀಡಿ ಎಂದು ಸಭೆಯನ್ನು ಪ್ರಾರಂಭಿಸಿದರು.

ಕುಲಸಚಿವರು ಮಾತನಾಡಿ 2021-22 ಮತ್ತು 2022-23ನೇ ಸಾಲಿನ ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪತ್ರಗಳನ್ನು ಹಣಕಾಸು ಅಧಿಕಾರಿಗಳು ಮಂಡಿಸುವರು ಎಂದು ತಿಳಿಸಿದರು.

ಹಣಕಾಸು ಅಧಿಕಾರಿಗಳು 2021-22 ಮತ್ತು 2022-23ನೇ ಸಾಲಿನ ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪತ್ರಗಳನ್ನು ಸಭೆಗೆ ಮಂಡಿಸಿದರು. ಸದರಿ ವಿಷಯವನ್ನು ಎರಡು ಬಾರಿ ಮುಂದೂಡಲಾಗಿತ್ತು. ಹಾಗೂ ವಾರ್ಷಿಕ ಲೆಕ್ಕಪತ್ರವನ್ನು ಚಾರ್ಟರ್ಡ್ ಅಕೌಂಟೆಂಟ್ ಅವರು ತಯಾರಿಸಿದ್ದಾರೆ. ಈ ಹಿಂದೆ ವಾರ್ಷಿಕ ಲೆಕ್ಕಪತ್ರಗಳನ್ನು ಸಿ.ಎ. ಅವರಿಂದ ಮಾಡಿಸುತ್ತಿರಲಿಲ್ಲ. ಹಿಂದೆ ಇದ್ದಂತಹ ಹಣಕಾಸು ಅಧಿಕಾರಿಗಳು ಲೆಕ್ಕಪತ್ರಗಳು Stream line ಆಗಬೇಕೆಂಬ ಸದುದ್ದೇಶದಿಂದ ಚಾರ್ಟರ್ಡ್ ಅಕೌಂಟೆಂಟ್ ಅವರಿಂದ ವಾರ್ಷಿಕ ಲೆಕ್ಕಪತ್ರಗಳನ್ನು ತಯಾರಿಸಿದ್ದಾರೆ. 2021-22 ಮತ್ತು 2022-23ನೇ ಸಾಲಿನ ವಾರ್ಷಿಕ ಪತ್ರಗಳಿಗೆ ಹಣಕಾಸು ಸಮಿತಿ ಸಭೆಯಿಂದ ಅನುಮೋದನೆ ದೊರಕಿದೆ. ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ ಎಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ತಮಗೆ ತಿಳಿದ ಹಾಗೆ ತಾವು ವಿಶ್ವವಿದ್ಯಾನಿಲಯದಲ್ಲಿ ಹಣಕಾಸು ಅಧಿಕಾರಿಯಾಗಿ ಅಧಿಕಾರ ವಹಿಸಿರುವುದು ಕಳೆದ ವರ್ಷ. ಈ ಅವಧಿಯಲ್ಲಿ ತಮ್ಮ ಅನುಭವದ ಪ್ರಕಾರ ತಮ್ಮ ಹಣಕಾಸು ಇಲಾಖೆ ಸುಗಮವಾಗಿ, ನಿಯಮಾನುಸಾರವಾಗಿ ನಡೆಯುತ್ತಿರುವುದೇ? ಎಂದು ಕೇಳಿದರು.

ಹಣಕಾಸು ಅಧಿಕಾರಿಗಳು ಮಾತನಾಡಿ, ಹಣಕಾಸು ವಿಭಾಗವು ತೃಪ್ತಿಕರವಾಗಿ ಹಾಗೂ ಸುಲಲಿತವಾಗಿ ಕಾರ್ಯವನ್ನು ನಿರ್ವಹಿಸುತ್ತಿದೆ. ಆದರೆ ಹಣಕಾಸಿನ ವಿಷಯದ ಬಗ್ಗೆ ಜ್ಞಾನ ಕಡಿಮೆ ಇರುವುದರಿಂದ ಲೆಕ್ಕಪತ್ರಗಳಿಗೆ ಸಂಬಂಧಿಸಿದ ಹಾಗೆ ಅಂದರೆ ನಿಯಮಾನುಸಾರ ಆಗುತ್ತಿರಲಿಲ್ಲ. ಎಲ್ಲಿಯೂ ಹಣಕಾಸಿನ ದುರ್ಬಳಕೆ ಅಥವಾ ದುರುಪಯೋಗ ನಡೆಯುತ್ತಿಲ್ಲ. ಚಾರ್ಟರ್ಡ್ ಅಕೌಂಟೆಂಟ್ ಅವರು ತರಬೇತಿಯನ್ನು ನೀಡಿರುವುದರಿಂದ ಹಣಕಾಸಿನ ವಿಷಯದಲ್ಲಿ ಸರಳೀಕರಿಸಿದ್ದಾರೆ ಹಾಗೂ ಸುಗಮಗೊಳಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಿದ್ದರಿಂದ ಸ್ವಲ್ಪ ಸುಧಾರಣೆ ಕಂಡಿದೆ ಹಾಗೂ ಮುಂದಿನ ಎರಡು ವರ್ಷಗಳಲ್ಲಿ ಬಹುತೇಕ ಸುಧಾರಣೆಗೊಳ್ಳುವುದು ಎಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ಹಣಕಾಸು ವಿಭಾಗದಲ್ಲಿ ಇಂಟರ್‌ನಲ್ ಕಂಟ್ರೋಲ್

ವ್ಯವಸ್ಥೆ ಹೇಗಿದೆ? ಉದಾಹರಣೆಗೆ ಹಣಕಾಸು ಅಧಿಕಾರಿಗಳ ಅಧಿಕಾರದ ವ್ಯಾಪ್ತಿ, ಚೆಕ್ ಸಹಿ ಮಾಡುವ ಅಧಿಕಾರ ಮತ್ತು ಇತರೆ ಹಣಕಾಸಿನ ವಿಷಯವಾಗಿ. ಏಕೆಂದರೆ ನಮ್ಮ ವಿಶ್ವವಿದ್ಯಾನಿಲಯದಲ್ಲಿ ವಾರ್ಷಿಕ 300 ಕೋಟಿಗಳ ಹಣಕಾಸಿನ ವ್ಯವಹಾರ ಇರುವುದರಿಂದ ತಾವೊಬ್ಬರೇ ವ್ಯವಹಾರಗಳನ್ನು ನಿಭಾಹಿಸುತ್ತಿದ್ದೀರಾ? ಅಥವಾ ಇತರೇ ಅಧಿಕಾರಿಗಳಿಗೂ ಅಧಿಕಾರ ಹಂಚಿಕೆಯಾಗಿದೆಯಾ? ಎಂದು ಪ್ರಶ್ನಿಸಿದರು.

ಹಣಕಾಸು ಅಧಿಕಾರಿಗಳು ಮಾತನಾಡಿ 10 ಸಾವಿರಕ್ಕೆ ಮಿತಿಯಿರುವ ಸಾಧಿಲ್ವಾರು (contingency) ಹಣಕಾಸಿನ ವ್ಯವಹಾರಗಳನ್ನು ಆಯಾಯ ವಿಭಾಗದ ಅಧ್ಯಕ್ಷರುಗಳು ಹಾಗೂ ನಿರ್ದೇಶಕರುಗಳು ಅವರವರ ಕುಂದುಕೊರತೆಗಳಿಗೆ ಅನುಗುಣವಾಗಿ ಹಣ ಖರ್ಚು ಮಾಡುತ್ತಾರೆ. ರೂ. 50,000/-ಕ್ಕಿಂತ ಹೆಚ್ಚಿನ ಮೊತ್ತದ ಹಣಕಾಸಿನ ವ್ಯವಹಾರಗಳು ಕುಲಸಚಿವರು ಹಾಗೂ ಕುಲಪತಿಗಳ ಅನುಮೋದನೆ ನಂತರ ನಮ್ಮ ಹಣಕಾಸು ವಿಭಾಗಕ್ಕೆ ಬರುತ್ತದೆ. ರಶೀದಿ ಹಾಗೂ ಬಿಲ್ಲುಗಳೆಲ್ಲವನ್ನು ಗಮನಿಸಿ ನಾವು ಚೆಕ್ ಮುಖಾಂತರ ಹಣವನ್ನು ಬಿಡುಗಡೆಗೊಳಿಸಲಾಗುವುದೆಂದು ತಿಳಿಸಿದರು. ವಿಶ್ವವಿದ್ಯಾನಿಲಯದಲ್ಲಿ ತುರ್ತಾಗಿ ನಡೆಸುವ ಕಾರ್ಯಕ್ರಮಗಳಿಗೆ ವಿಶ್ವವಿದ್ಯಾನಿಲಯದ ವಿಭಾಗಗಳ ಅಧಿಕಾರಿಗಳು ತಮ್ಮ ಹಣದಿಂದ ವ್ಯಯ ಮಾಡಿ ಅದರ ರಸೀದಿಯನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದರೆ ಆ ಖರ್ಚಿನ ಹಣವನ್ನು ಪಾವತಿಸಲಾಗುತ್ತಿದೆ. ಯಾವುದೇ ಹಣಕಾಸಿನ ವಿಷಯವು ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳ ಹಾಗೂ ಕುಲಸಚಿವರ ಗಮನಕ್ಕೆ ತಂದು ಹಣಕಾಸಿನ ವ್ಯವಹಾರ ನಡೆಸಲಾಗುವುದು ಎಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ವಿಶ್ವವಿದ್ಯಾನಿಲಯದಲ್ಲಿ ಮೂರು ರೀತಿಯಲ್ಲಿ ಆಡಿಟ್ ಆಗುತ್ತದೆ ಎಂದು ತಿಳಿದಿರುತ್ತೇನೆ. ಇದನ್ನು ದಯಮಾಡಿ ಆಡಿಟ್ ಹೇಗೆ ನಡೆಯುತ್ತದೆ ಎಂದು ವಿವರವಾಗಿ ತಿಳಸುವಿರಾ ಎಂದು ಪ್ರಶ್ನಿಸಿದರು?

ಹಣಕಾಸು ಅಧಿಕಾರಿಗಳು ಮಾತನಾಡಿ, ಮೊದಲು ಚಾರ್ಟಡ್ ಆಕೌಂಟೆಂಟ್‌ರವರು ವಿಶ್ವವಿದ್ಯಾನಿಲಯದಲ್ಲಿ ನಡೆದಿರುವ ಎಲ್ಲಾ ವ್ಯವಹಾರಕ್ಕೆ ಸಂಬಂಧಿಸಿದ ರಸೀದಿಗಳ ಶೇಖರಣೆ ಮಾಡಿ ಬ್ಯಾಲೆನ್ಸ್ ಶೀಟ್‌ಗಳನ್ನು ತಯಾರು ಮಾಡಿಕೊಳ್ಳುತ್ತಾರೆ. ಇದಾದ ನಂತರ ರಾಜ್ಯ ಸರ್ಕಾರದ ಲೆಕ್ಕಪರಿಶೋಧಕರು ವಿಶ್ವವಿದ್ಯಾನಿಲಯದ ಚಾರ್ಟರ್ಡ್ ಅಕೌಂಟೆಂಟ್‌ರವರ ರಸೀದಿಗಳ ಶೇಖರಣೆ ಮಾಡಿ ಬ್ಯಾಲೆನ್ಸ್ ಶೀಟ್‌ಗಳನ್ನು ತಯಾರಿಸಿರುವ ಶೀಟ್‌ಅನ್ನು ಪರಿಶೀಲಿಸುತ್ತಾರೆ. ಇದು ವಿಶ್ವವಿದ್ಯಾನಿಲಯ ಮಟ್ಟಕ್ಕೆ ಅಂತಿಮ ಲೆಕ್ಕಪರಿಶೋಧನೆ ಎಂದು ಭಾವಿಸಬಹುದು. ನಂತರ ಎ.ಜಿ. ರವರು 4 ವರ್ಷಕ್ಕೊಮ್ಮೆ ಅಥವಾ 05 ವರ್ಷಕ್ಕೊಮ್ಮೆ ಬಂದು ಮತ್ತೊಂದು ಆಡಿಟ್ ನಡೆಯುತ್ತದೆ. ಇದು ವಿಶ್ವವಿದ್ಯಾನಿಲಯದ ಪ್ರಸ್ತುತ ನಿಯಮ.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಹಾಗಾದರೆ ಚಾರ್ಟಡ್ ಅಕೌಂಟೆಂಟ್‌ರವರು ತಯಾರಿಸಿರುವ ಬ್ಯಾಲೆನ್ಸ್ ಶೀಟ್‌ಗಳನ್ನು ಪಡೆದುಕೊಂಡು ಹಣಕಾಸಿನ ವ್ಯವಹಾರ ನಡೆಸಲಾಗುತ್ತಿದೆ. ತದನಂತರ ತಾವು ಇದನ್ನು ಸಿಂಡಿಕೇಟ್ ಸಭೆಯಲ್ಲಿ ತಂದು ಅನುಮೋದನೆ ಪಡೆಯುತ್ತಿದ್ದೀರಿ. ನಂತರ ಆಡಿಟ್ ಮಾಡಿದ ಪ್ರತಿಗಳನ್ನು ಸರ್ಕಾರಕ್ಕೆ ಸಲ್ಲಿಸಲಾಗುತ್ತಿದೆ ಎಂದು ತಿಳಿಸುತ್ತಿದ್ದೀರಿ. ಒಟ್ಟಾರೆ ಎಲ್ಲಾ ಹಣಕಾಸಿನ ವ್ಯವಹಾರಗಳು ಆಡಿಟ್ ನಿಯಮಗಳ ಪ್ರಕಾರ ನಡೆಯುತ್ತಿದೆ ಎಂದರು. ಹಾಗೂ ತಾವು ಮಂಡಿಸಿರುವ ಲೆಕ್ಕಪತ್ರಗಳನ್ನು ಸರ್ಕಾರಕ್ಕೆ ಸಲ್ಲಿಸಲು ಕಾಲಮಿತಿಯಿಲ್ಲವೇ ಎಂದು ಪ್ರಶ್ನಿಸಿದರು? ಈಗ ತಾವು ಮಂಡಿಸುತ್ತಿರುವ 2021-22 ಹಾಗೂ 2022-23ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ಯಾವುದೇ ಸಮಯದಲ್ಲಾದರೂ ಸರ್ಕಾರಕ್ಕೆ ಸಲ್ಲಿಸಬಹುದಾ? ಎಂದು ಪ್ರಶ್ನಿಸಿದರು.

ಹಣಕಾಸು ಅಧಿಕಾರಿಗಳು ಮಾತನಾಡಿ, ಕಳೆದ ಸಾಲಿನಲ್ಲಿ ಕೆಲವೊಂದು ತೊಂದರೆ ಆಗಿದ್ದರಿಂದ 2021-2022ರ ಹಾಗೂ 2022-23ರ ಆಡಿಟ್ ವಾರ್ಷಿಕ ಲೆಕ್ಕಪತ್ರಗಳು ತಯಾರಿರುವ ಕಾರಣ ಎರಡನ್ನು ಒಟ್ಟಿಗೆ ಪ್ರಸ್ತುತಪಡಿಸುತ್ತಿರುವುದಾಗಿ ತಿಳಿಸಿ, ಈಗಾಗಲೇ ವಾರ್ಷಿಕ ಪತ್ರಗಳ ಅನುಮೋದನೆಗಾಗಿ ಎರಡು ಬಾರಿ ಸಿಂಡಿಕೇಟ್ ಸಭೆಗೆ ವಿಷಯವನ್ನು ಮಂಡಿಸಿದಾಗ ವಿಷಯವು ಮುಂದೂಡಲ್ಪಟ್ಟಿದೆ ಮತ್ತು ಸಿಂಡಿಕೇಟ್ ಅನುಮೋದನೆಯ ನಂತರ ಶಿಕ್ಷಣ ಮಂಡಳಿ ಸಭೆಗೆ ಮಂಡಿಸಲಾಗುವುದು ಎಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ತಾವು ಈಗ ಸಲ್ಲಿಸಿರುವ ವಾರ್ಷಿಕ ಲೆಕ್ಕಪತ್ರಗಳಿಗೆ ಆಡಿಟ್ ಹಾಗೂ ರಾಜ್ಯ ಲೆಕ್ಕಪತ್ರ ಅಧಿಕಾರಗಳ ಆಕ್ಷೇಪಣೆ ಇಲ್ಲವೇ? ಎಂದು ಪ್ರಶ್ನಿಸಿದರು. ಹಾಗೂ ತಾವು ನೀಡಿರುವ ಇಷ್ಟೊಂದು ಗಾತ್ರದ ಖಾತೆಗಳ ನಿರ್ವಹಣೆಯ ಪುಸ್ತಕ ನೀಡಿರುತ್ತೀರಿ? ಇದರ ವಿವರ ನೀಡುವಿರಾ? ಹಾಗೂ ಎರಡು ಪುಸ್ತಕಗಳನ್ನು ನೀಡಿದ್ದೀರಿ ಅವು ಯಾವ ರೀತಿಯದ್ದು ಎಂದು ಕೇಳಿದರು.

ಹಣಕಾಸು ಅಧಿಕಾರಿಗಳು ಮಾತನಾಡಿ, ಒಂದು ಚಾರ್ಟಡ್ ಅಕೌಂಟೆಂಟ್‌ರವರು ತಯಾರಿಸಿರುವ ಪುಸ್ತಕ

ಹಾಗೂ ಇನ್ನೊಂದು ವಿಶ್ವವಿದ್ಯಾನಿಲಯದ ಹಣಕಾಸು ವಿಭಾಗದಲ್ಲಿ ತಯಾರಿಸಿರುವ ಸಂಪೂರ್ಣ ವಿವರಗಳ ಮಾಹಿತಿಯನ್ನು ಈ ಸಭೆಯ ಗಮನಕ್ಕೆ ತರಲಾಗಿದೆ ಎಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ತಾವು ನೀಡಿರುವ ಲೆಕ್ಕಪತ್ರಗಳ ನಿರ್ವಹಣೆಯ ಆಡಿಟ್ ಪುಸ್ತಕದಲ್ಲಿ ಮೊದಲನೇ ಪುಟದಲ್ಲಿ ಸಾಕಷ್ಟು ತಪ್ಪುಗಳು ಎದ್ದು ಕಾಣುತ್ತಿದೆ. ಆಂಗ್ಲ ಭಾಷೆಯಲ್ಲಿ ಅಕ್ಷರಗಳ ವ್ಯತ್ಯಾಸ, ಮಾತೃ ಭಾಷೆಯಲ್ಲಿ ಪದಗಳ ವ್ಯತ್ಯಾಸಗಳು ಇರುವುದಾಗಿ ಸಭೆಯ ಗಮನಕ್ಕೆ ತಂದರು ಹಾಗೂ ಇದು ಸ್ಥಳದಲ್ಲಿಯೇ ತಿದ್ದುಪಡಿ ಮಾಡಬಹುದಾ ಎಂದು ಅಧ್ಯಕ್ಷರಲ್ಲಿ ಮನವಿ ಮಾಡಿಕೊಂಡರು.

ಮಾನ್ಯ ಕುಲಪತಿಗಳು ಮಾತನಾಡಿ, ಒಂದೇ ವಿಷಯಕ್ಕೆ ಹೆಚ್ಚಿಗೆ ಕಾಲಾವಕಾಶವನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಎಲ್ಲಾ ವಿಷಯಗಳನ್ನು ಕುಲಪತಿಗಳೇ ಗಮನಿಸಿರುವುದಿಲ್ಲ. ಎಲ್ಲಾ ವಿಷಯವನ್ನು ಕುಲಪತಿಗಳೇ ಗಮನಿಸುವುದಾದರೆ ಬೇರೆ ಅಧಿಕಾರಿಗಳ ಅಗತ್ಯವೇನು? ತಾವು ಆಡಿಟ್ ಪುಸ್ತಕವನ್ನು ನೋಡಿ ನಮ್ಮ ತಪ್ಪುಗಳನ್ನು ತಿದ್ದುತ್ತಿರುವುದು ಒಳ್ಳೆಯದೇ. ಆದರೆ ತಮಗೆ ನನ್ನ ಒಂದು ಸಲಹೆ ಏನೆಂದರೆ ತಾವು ಆಡಿಟ್ ಪುಸ್ತಕವನ್ನು ಇಷ್ಟೊಂದು ಗಾಢವಾಗಿ ಪರಿಶೀಲಿಸಿದ ನಂತರ ನೇರವಾಗಿ ಹಣಕಾಸಿನ ಅಧಿಕಾರಿಗಳ ಬಳಬಂದು ಆಡಿಟ್ ಪುಸ್ತಕದಲ್ಲಿ ತಪ್ಪುಗಳಿರುವುದಾಗಿ ತಿಳಿಸುವುದು ಉತ್ತಮವಾಗುತಿತ್ತು. ಸಿಂಡಿಕೇಟ್ ಸಭೆಯಲ್ಲಿ ತಪ್ಪನ್ನು ಒತ್ತಿ ಹೇಳುತ್ತಿರುವುದು ಇದು ಸಮಂಜಸವೇ ಎಂದು ಪ್ರಶ್ನಿಸಿದರು. ಇದು ವಿಶ್ವವಿದ್ಯಾನಿಲಯದ ಘನತೆ ಗೌರವ ಕಾಪಾಡುವಂತಹ ಮನೋಭಾವನೆ ಸಿಂಡಿಕೇಟ್ ಸದಸ್ಯರಲ್ಲಿ ಇರಬೇಕೇ ವಿನಃ ತಪ್ಪುಗಳನ್ನು ಸಿಂಡಿಕೇಟ್ ಸಭೆಯಲ್ಲಿ ಪ್ರಸ್ತಾಪಿಸಿ ತಮ್ಮತನ ಹೆಚ್ಚಿಸಿಕೊಳ್ಳುವುದು ಒಳ್ಳೆಯ ಲಕ್ಷಣವಲ್ಲ ಎಂದು ತಿಳಿಸಿದರು.

ಹಣಕಾಸು ಅಧಿಕಾರಿಗಳು ಮಾತನಾಡಿ ಬೆರಳಚ್ಚು ಮಾಡುವ ಹಂತದಲ್ಲಿ ಕೆಲವು ತಪ್ಪುಗಳಾಗಿವೆ. ಅವುಗಳೆಲ್ಲವನ್ನು ತಿದ್ದುಪಡಿ ನಂತರ ಸರ್ಕಾರಕ್ಕೆ ಕಳುಹಿಸಲಾಗುವುದು ಎಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಮಾನ್ಯ ಹಣಕಾಸು ಅಧಿಕಾರಿಗಳಾದ ತಾವು ದಯಮಾಡಿ ಸಿದ್ಧಪಡಿಸಿರುವ ಆಡಿಟ್ ಪುಸ್ತಕದ ಮೊದಲನೇ ಪುಟದಲ್ಲಿ ಓಪನಿಂಗ್ ಬ್ಯಾಲೆನ್ಸ್‌ನಲ್ಲಿ reflect ಆಗಿರುವುದಿಲ್ಲ ಎಂದಿದೆ. A ಮತ್ತು B ಬಗೆಗೆ ಮಾಹಿತಿ ನೀಡಿ ಎಂದು ತಿಳಿಸಿದರು.

ಹಣಕಾಸು ಅಧಿಕಾರಿಗಳು ಮಾತನಾಡಿ, ಹಿಂದೆ ವಾರ್ಷಿಕ ಲೆಕ್ಕಪತ್ರಗಳನ್ನು ವಿಶ್ವವಿದ್ಯಾನಿಯದ ವತಿಯಿಂದಲೇ ತಯಾರಿಸಲಾಗುತ್ತಿತ್ತು. ಮೊದಲ ಬಾರಿಗೆ 2021-22ನ ವಾರ್ಷಿಕ ಲೆಕ್ಕಪತ್ರಗಳನ್ನು ಸಿ.ಎ. ಅವರು ಸಿದ್ಧಪಡಿಸುವಾಗ ವಿಶ್ವವಿದ್ಯಾನಿಲಯದಿಂದ ತಯಾರಿಸಿರುವ ವಾರ್ಷಿಕ ಲೆಕ್ಕಪತ್ರಗಳು ಅಧಿಕೃತವಾಗಿ ಅಂದರೆ ನಿಯಮಾನುಸಾರ ಪ್ರಸ್ತುತಪಡಿಸಿರುವುದಿಲ್ಲ ಎಂದು ತಿಳಿಸಿದ್ದಾರೆ ಎಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್‌ರವರು ಮಾತನಾಡಿ, ಪ್ರಾಪರ್ಟಿ ಬ್ಯಾಂಕ್ ಎಕ್ಯೂಪ್‌ಮೆಂಟ್‌ನಲ್ಲಿ ಏನಿರುವುದಾಗಿ ತಿಳಿಸುವಂತೆ ತಿಳಿಸಿದರು

ಹಣಕಾಸು ಅಧಿಕಾರಿಗಳು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯವು 100 ವರ್ಷಗಳನ್ನು ಪೂರೈಸಿದೆ. ಆಸ್ತಿಗಳ ಸಂಪೂರ್ಣ ಮಾಹಿತಿಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಲಾಗಿರುತ್ತದೆ. ಆದರೆ ಕೆಲವೊಂದು ಸಮಸ್ಯೆಗಳು ಇರುವುದಾಗಿ ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್‌ರವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದ PANನ ಅಡಿಯಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕ್‌ನಲ್ಲಿಯೇ 60 ಖಾತೆಗಳು ಇರುತ್ತದೆ. ಇದರಲ್ಲಿ ತಾವು ಆಡಿಟ್‌ಗೆ ಕೇವಲ 19 ಬ್ಯಾಂಕ್ ಖಾತೆಯನ್ನು ಮಾತ್ರ ಪ್ರಸ್ತುತ ಪಡಿಸಿರುತ್ತೀರಿ, ಉಳಿದ 41 ಖಾತೆಗಳ ಬಗ್ಗೆ Not declare ಎಂದಿದೆ. ಇದರ ಬಗ್ಗೆ ಮಾಹಿತಿಯನ್ನು ಕೋರಿದರು.

ಹಣಕಾಸು ಅಧಿಕಾರಿಗಳು ಮಾತನಾಡಿ, ತಾವು ತಿಳಿಸಿದ 19 ಬ್ಯಾಂಕ್ ಖಾತೆಗಳು ವಿಶ್ವವಿದ್ಯಾನಿಲಯದ ಹಣಕಾಸು ವಿಭಾಗದಲ್ಲಿ ನಿರ್ವಹಿಸುತ್ತಿರುವುದರಿಂದ ಇದನ್ನು ಆಡಿಟ್‌ನಲ್ಲಿ ಪ್ರಸ್ತುತ ಪಡಿಸಿರುತ್ತಾರೆ. ಕೆಲವೊಂದು ಹಣಗಳ ವ್ಯವಹಾರ ವಿಭಾಗಗಳ ಖಾತೆಯಲ್ಲಿ ಇರುವುದರಿಂದ ಇದರ ಮಾಹಿತಿ ನಮ್ಮಲ್ಲಿ ಅಸ್ಪಷ್ಟವಾಗಿರುತ್ತದೆ. ಕೂಡಲೆ ಇತರೆ ಖಾತೆಯ ವ್ಯವಹಾರಗಳ ಮಾಹಿತಿ ಪಡೆಯುವುದಾಗಿ ತಿಳಿಸಿದರು.

ಕುಸಚಿವರು ಮಾತನಾಡಿ, ಕಳೆದ ಸಾಲಿನ ಆಡಿಟ್ ಮಾಡಿಸುವಾಗ ಹಿಂದಿನ ಹಣಕಾಸು ಅಧಿಕಾರಿಗಳಾದ ಡಾ. ಸಂಗೀತಾ ಗಜಾನನ ಭಟ್ ಅವರು ವಿಶ್ವವಿದ್ಯಾನಿಲಯದ ಹಣಕಾಸು ವ್ಯವಸ್ಥೆಯು ಉತ್ತಮ ಹಾಗೂ

ನೈಪುಣ್ಯತೆಯಿಂದ ಕೂಡಿರಲಿ ಎಂಬ ಉದ್ದೇಶದಿಂದ ಚಾರ್ಟರ್ಡ್ ಅಕೌಂಟೆಂಟ್‌ರವರಿಂದ ಆಡಿಟ್ ಮಾಡಿಸಲಾಗಿರುತ್ತದೆ.

ಹಣಕಾಸು ಅಧಿಕಾರಿಗಳು ಮಾತನಾಡಿ, ವಿಭಾಗದಲ್ಲಿ ಎಲ್ಲಾ 60 ಖಾತೆಗಳಲ್ಲಿಯೂ ವ್ಯವಹಾರ ಮಾಡಿರುವುದಿಲ್ಲ ಮುಖ್ಯವಾಗಿ 19 ಖಾತೆಗಳಲ್ಲಿ ಮಾತ್ರ ವ್ಯವಹಾರ ಮಾಡಿರುತ್ತಾರೆ. ಉಳಿದ 41 ಖಾತೆಗಳು ಏನಿವೆ ಅವು 19 ಖಾತೆಗಳಿಂದ reflect ಆಗಿರುತ್ತದೆ. ಅಲ್ಲಿಂದ ಎಲ್ಲಾ ಖಾತೆಗಳ ಹಣವು ಡಿಸ್ಟ್ರಿಬ್ಯೂಟ್ ಆಗಿರುತ್ತದೆ. ಇದನ್ನು ಕರ್ನಾಟಕ ಸರ್ಕಾರದ ಲೆಕ್ಕ ತಪಾಸಣಾ ಅಧಿಕಾರಿಗಳು ಒತ್ತಿ ಹೇಳಿರುತ್ತಾರೆ ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, 60 ಖಾತೆಗಳಲ್ಲಿ 19 ಖಾತೆಗಳು ಮಾತ್ರ ನಮ್ಮ ಹಣಕಾಸು ವಿಭಾಗದಲ್ಲಿ ಬರುತ್ತವೆ. ಉಳಿಕೆ 41 ಖಾತೆಗಳು ವಿಶ್ವವಿದ್ಯಾನಿಲಯದ ಆಯಾಯ ವಿಭಾಗಗಳಲ್ಲಿ ಇರುತ್ತದೆ. ರಾಜ್ಯ ಲೆಕ್ಕಪತ್ರಗಳ ಅಧಿಕಾರಿಗಳು ಆಯಾಯ ವಿಭಾಗಕ್ಕೆ ಹೋಗಿ ಆಡಿಟ್ ಪ್ರಕ್ರಿಯೆ ನಡೆಸುವ ಸಂದರ್ಭದಲ್ಲಿ ಲೆಕ್ಕಪತ್ರಗಳನ್ನು ಪ್ರಸ್ತುತಪಡಿಸಿರುತ್ತಾರೆ. ವಿಭಾಗದಿಂದ ಯಾವುದಾದರೂ ಒಂದು ಉಪಕರಣವನ್ನು ತೆಗೆದುಕೊಳ್ಳುವಾಗ ಚೆಕ್‌ಅನ್ನು ನಾವು ಆಯಾಯ ವಿಭಾಗದ ಅಧ್ಯಕ್ಷರುಗಳ ಹೆಸರಿನಲ್ಲಿ ನೀಡಿರುತ್ತೇವೆ. ಆ ಉಪಕರಣದಲ್ಲಿ ಏನಾದರೂ ದುರಸ್ಥಿಗೊಳಪಟ್ಟರೆ ಆಯಾ ವಿಭಾಗದ ಅಧ್ಯಕ್ಷರುಗಳ ಹೊಣೆಯಾಗಿರುತ್ತದೆ. ಎಲ್ಲಾ ವಿಭಾಗಗಳಿಗೂ ಇಲ್ಲಿಂದ ಮಾತ್ರ ಹಣ ಹೋಗುತ್ತದೆ. ವಿಭಾಗಗಳಿಗೆ ಬೇರೆ ಕಡೆಯಿಂದ ಯಾವುದೇ ಹಣ ಬರುವುದಿಲ್ಲವೆಂದು ತಿಳಿಸಿದರು. ವಿಭಾಗಗಳಲ್ಲಿ ಸೆಮಿನಾರ್‌ಗಳಂತ ಕಾರ್ಯಕ್ರಮಗಳು ನಡೆದಾಗ ವಿಭಾಗಕ್ಕೆ ವಿಶ್ವವಿದ್ಯಾನಿಲಯದ ಖಾತೆಯಿಂದ ಹಣ ಬಿಡುಗಡೆಯಾಗಿ ವಿಭಾಗದ ಅಧ್ಯಕ್ಷರ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗುತ್ತದೆ. ವಿಭಾಗದ ಅಧ್ಯಕ್ಷರ ಬ್ಯಾಂಕ್ ಖಾತೆಯ ವಿವರವನ್ನು ವಿಶ್ವವಿದ್ಯಾನಿಲಯದ ಆಡಿಟ್‌ನಲ್ಲಿ ತೋರಿಸುವುದಿಲ್ಲ. ಹಾಗಾಗಿ ವಿಭಾಗಗಳಲ್ಲಿ ಅವರಿಗೆ ಹಣದ ವ್ಯವಹಾರಕ್ಕೆ ಅನುಕೂಲವಾಗುವಂತೆ ಬ್ಯಾಂಕ್ ಖಾತೆ ತೆರೆದುಕೊಂಡಿರುತ್ತಾರೆ. ಆಯಾಯ ವಿಭಾಗದವರು ಕೂಡ ಆಡಿಟ್ ಮಾಡಿಸಿರುತ್ತಾರೆ. ವಿಭಾಗದ ಆಡಿಟ್ ಹಾಗೂ ವಿಶ್ವವಿದ್ಯಾನಿಯದ ಆಡಿಟ್ ಬೇರೆ ಬೇರೆ ರೀತಿಯಲ್ಲಿ ಜರುಗುತ್ತದೆ. ಈ ಸಮಸ್ಯೆಗೆ ಮುಖ್ಯ ಕಾರಣವೇನೆಂದರೆ ರಾಜ್ಯ ಸರ್ಕಾರದ ಆಡಿಟರ್‌ನವರು 2 ಅಥವಾ 3 ವರ್ಷಕ್ಕೊಮ್ಮೆ ಆಡಿಟ್ ಮಾಡಲು ಬರುವುದರಿಂದ. ನಾವು ಆಯಾಯ ವರ್ಷದ ಆಡಿಟ್ ಮಾಡಿಸಲೇಬೇಕು ಇಲ್ಲವಾದರೆ ಸರ್ಕಾರದಿಂದ ಬರಬೇಕಾದ ಅನುದಾನಕ್ಕೆ ತೊಂದರೆಯಾಗುವ ಸಾಧ್ಯತೆಗಳು ಇರುವುದರಿಂದ ಆಡಿಟ್‌ನ ಸಮಸ್ಯೆಯಾಗುತ್ತದೆ ಎಂದು ಸಭೆಗೆ ಉತ್ತರಿಸಿದರು.

ಶ್ರೀ ನಟರಾಜ್ ಹೆಚ್.ಎಸ್. ಅವರು ಮಾತನಾಡಿ ಖಾಸಗಿಯವರಿಂದ ಆಡಿಟ್ ಮಾಡಿಸಲು ಸರ್ಕಾರದ ಒಪ್ಪಿಗೆಯನ್ನು ಪಡೆಯಲಾಗಿದೆಯೇ ಎಂದು ಕೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ ವಿಶ್ವವಿದ್ಯಾನಿಲಯದ ಕಾಯ್ದೆಯ ಪ್ರಕಾರ ನಾವು ಸರ್ಕಾರದ ಲೆಕ್ಕಪರಿಶೋಧಕರಿಂದ 2022-23ನೇ ಸಾಲಿನ ಲೆಕ್ಕಪರಿಶೋಧನೆ ಮಾಡಿಸಬೇಕಾದಲ್ಲಿ ಸರ್ಕಾರದವರು ನಮಗೆ 2026-27ನೇ ಸಾಲಿಗೆ ಬರುತ್ತಾರೆ. ಆದ್ದರಿಂದ ಯುಸಿ ನೀಡಿ ನಾವು ಸರ್ಕಾರದ ಅನುದಾನವನ್ನು ಪಡೆಯಲು ಸಾಧ್ಯವಾಗುವುದಿಲ್ಲ. ಆದ್ದರಿಂದ ನಾವು ವಿಶ್ವವಿದ್ಯಾನಿಲಯದ ಕಾಯ್ದೆಯನ್ವಯ ಚಾರ್ಟರ್ಡ್ ಅಕೌಂಟೆಂಟ್ ಅವರಿಂದ ಲೆಕ್ಕಪರಿಶೋಧನೆ ಮಾಡಿಸಲಾಗುತ್ತಿದೆ ಎಂದು ಸಭೆಯ ಗಮನಕ್ಕೆ ತಿಳಿಸಿದರು.

ಡಾ. ಗಣೇಶ್ ಕೆ. ಅವರು ಮಾತನಾಡಿ 2021-22 ನೇ ಸಾಲಿನಿಂದ ಆಯ-ವ್ಯಯವನ್ನು ಗಮನಿಸಿದಾಗ ಆದಾಯ ಕಡಿಮೆಯಾಗಿ ಖರ್ಚು ಹೆಚ್ಚಾಗುತ್ತಿರುವುದು ಕಂಡು ಬರುತ್ತಿದೆ ಇದಕ್ಕೆ ಕಾರಣವೇನು ಎಂದು ಕೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಮೊದಲಿನಿಂದಲೂ ಈ ವಿಷಯಕ್ಕೆ ಸಂಬಂಧಿಸಿದಂತೆ ಬಜೆಟ್‌ನ ಕೊರತೆಯಿದೆ ಅಂದರೆ ವಿಶ್ವವಿದ್ಯಾನಿಲಯದಲ್ಲಿ ಆದಾಯಕ್ಕಿಂತ ಹೆಚ್ಚು ವ್ಯಯವಾಗುತ್ತಿರುವುದನ್ನು ಈ ಮೊದಲಿನಿಂದಲೂ ಸಿಂಡಿಕೇಟ್ ಗಮನಕ್ಕೆ ತರಲಾಗಿದೆ ಎಂದು ತಿಳಿಸಿದರು.

ಮಾನ್ಯ ಕುಲಸಚಿವರು ಮಾತನಾಡಿ, ಅವಶ್ಯಕತೆಯಿರದ ಖರ್ಚುಗಳನ್ನು ಕಡಿತಗೊಳಿಸಿದ್ದರೂ ಸಹ ಹಣದ ಅಭಾವ ಉಂಟಾಗುತ್ತಿದೆ. ಇದರಲ್ಲಿ ಅನೇಕ ಅನಾವಶ್ಯಕ 400 ದೂರವಾಣಿಗಳ ಸಂಪರ್ಕಗಳನ್ನು ಕಡಿತಗೊಳಿಸಿರುತ್ತೇವೆ. ಅನಾವಶ್ಯಕ ಕಟ್ಟಡಗಳ ನಿರ್ಮಾಣ, ಸಾಧಿಲ್ವಾರು (Contingency) ಕೂಡ ಕಡಿಮೆ ಮಾಡುತ್ತಿದ್ದೇವೆ, ಜಯಂತಿ ಕಾರ್ಯಕ್ರಮಗಳನ್ನು ಆಯೋಜಿಸಲು ಬರುವ ಅಧ್ಯಕ್ಷರುಗಳಿಗೆ ಬೇಡಿಕೆಗಿಂತ ಕಡಿಮೆ ಹಣ ನೀಡಿ ಸಮಜಾಯಿಸಿ ಉತ್ತರ ನೀಡಿ ಅಧ್ಯಕ್ಷರನ್ನು ಕಳುಹಿಸಲಾಗುತ್ತಿದೆ. ಹೀಗ್ಗೆ ಅನೇಕ ರೀತಿಯ

ಅನಾವಶ್ಯಕ ವ್ಯಯಕ್ಕೆ ಕಡಿವಾಣ ಹಾಕಲಾಗುತ್ತಿದೆ. ಆದರೆ ಇಂತಹ ದೊಡ್ಡ ಸಂಸ್ಥೆಗೆ ತಿಂಗಳಿಗೆ ಅಂದಾಜು 15 ಕೋಟಿ ಅನುದಾನ ಕಡ್ಡಾಯವಾಗಿ ಬೇಕಾಗುತ್ತದೆ. ವೇತನ, ಪಿಂಚಣಿ, ಹಾಸ್ಟೆಲ್‌ಗಳನ್ನು ಹಾಗೂ ಇತರೆ ಖರ್ಚುವೆಚ್ಚಗಳನ್ನು ಭರಿಸಲು ಹಣ ಖರ್ಚಾಗುತ್ತಿದೆ. ರೂ.7.50 ಕೋಟಿವರೆಗೆ ಮಾಹೆಯಾನ ಪಿಂಚಣಿದಾರರಿಗೆ ನೀಡಬೇಕಾಗುತ್ತದೆ. ಮಾಸಿಕ ಖರ್ಚಿನ ಸಿಂಹಪಾಲು ಪಿಂಚಣಿಗೆ ಹೋಗುತ್ತಿದೆ ಎಂದು ಹಾಗೂ ಸರ್ಕಾರದ ಗಮನ ಸೆಳೆದು ಅನುದಾನವನ್ನು ಪಡೆಯಬೇಕಾಗಿದೆ ಎಂದು ಸಭೆಗೆ ತಿಳಿಸಿದರು.

ಶ್ರೀ ನಾಗರಾಜು ಸಿ. ಅವರು ಮಾತನಾಡಿ ಕಟ್ಟಡ ನಿರ್ಮಾಣವನ್ನು ಕಡಿಮೆ ಮಾಡಿದರೆ ಎಲ್ಲಾ ಹಣವನ್ನು ತುಂಬಬಹುದು ಎಂದು ತಿಳಿಸಿದರು.

ಕುಲಸಚಿವರು ಮಾತನಾಡಿ ಪ್ರಸ್ತುತ ಯಾವುದೇ ಹೊಸ ಕಟ್ಟಡ ಕಾಮಗಾರಿಯನ್ನು ಕೈಗೊಂಡಿಲ್ಲವೆಂದು ತಿಳಿಸಿದರು.

ಶ್ರೀ ಎಚ್.ಎಸ್. ನಟರಾಜುರವರು ಮಾತನಾಡಿ ಏಕೆ ಕಾರ್ಪಸ್ ಫಂಡ್ ಉಪಯೋಗಿಸಬಹುದಲ್ಲವೇ ಎಂದು ತಿಳಿಸಿದರು.

ಹಣಕಾಸು ಅಧಿಕಾರಿಯವರು ಮಾತನಾಡಿ ಕಾರ್ಪಸ್ ಫಂಡ್‌ಅನ್ನು ಯಾವುದೇ ಖರ್ಚಿಗೆ ಉಪಯೋಗಿಸುವಂತಿಲ್ಲ ಎಂದು ಸ್ಪಷ್ಟೀಕರಿಸಿದರು. ಅದರಿಂದ ಬಡ್ಡಿ ಹಣವನ್ನು ಮಾತ್ರ ಉಪಯೋಗಿಸಲಾಗುತ್ತಿದೆ ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ ಬಜೆಟ್‌ನಲ್ಲಿ 179.00 ಕೋಟಿ ಇದೆ ಎಂದು ತೋರಿಸುತ್ತಿದೆ. ಅದರಲ್ಲಿ ರೂ. 153.00 ಕೋಟಿ ಕಾರ್ಫಸ್ ಫಂಡ್. ಕಾರ್ಫಸ್ ಫಂಡ್‌ಅನ್ನು ಉಪಯೋಗಿಸುವಂತಿಲ್ಲ. ಈ ಕಾರ್ಪಸ್ ಫಂಡ್‌ಅನ್ನು ಆದಾಯ ಎಂದು ತೋರಿಸುತ್ತಿದ್ದಾರೆ. ನಮ್ಮ ಆಯವ್ಯಯ ಲೆಕ್ಕದಲ್ಲಿ ತೋರಿಸಿದ್ದರಿಂದ ಕಳೆದ ಬಾರಿ ಇಷ್ಟೊಂದು ಹಣ ಇದೆಯಲ್ಲಾ ಎಂದು ಕರ್ನಾಟಕ ಸರ್ಕಾರದ ಹಣಕಾಸು ಇಲಾಖೆ ತಿಳಿಸಿರುತ್ತದೆ. ವಿಶ್ವವಿದ್ಯಾನಿಲಯದ ಕಾರ್ಫಸ್‌ಫಂಡ್ ಹಾಗೂ ನಮ್ಮ ಆಯವ್ಯಯ ಎರಡನ್ನೂ ಸೇರಿಸಿ ಎಂದು ಸ್ಪಷ್ಟೀಕರಿಸಿರುವುದಾಗಿ ತಿಳಿಸಿ, ಕರ್ನಾಟಕ ಸರ್ಕಾರದ ಹಣಕಾಸು ಇಲಾಖೆ ಕಾರ್ಫಸ್‌ಫಂಡ್ ಪ್ರತ್ಯೇಕವಾಗಿ ತೋರಿಸುವಂತೆ ಸೂಚಿಸಿರುವ ಹಿನ್ನೆಲೆಯಲ್ಲಿ ವಿಭಾಗಿಸಲಾಗಿದೆ ಎಂದು ಮಾನ್ಯ ಕುಲಪತಿಗಳು ಕಾರ್ಫಸ್ ಫಂಡ್‌ನ ಬಗ್ಗೆ ಮಾಹಿತಿ ನೀಡಿದರು.

ಶ್ರೀ ಮಹದೇಶು ಅವರು ಮಾತನಾಡಿ 2021ರಲ್ಲಿ ರೂ.200.00 ಕೋಟಿ ಹಣವನ್ನು ಎಲ್‌ಐಸಿನಲ್ಲಿ ಹೂಡಿಕೆ ಮಾಡಲಾಗಿದೆ. ಯಾವ ನಿಯಮದ ಪ್ರಕಾರ ಹೂಡಿಕೆ ಮಾಡಲಾಗಿದೆ. ಯಾವ ಉದ್ದೇಶಕ್ಕಾಗಿ ಎಲ್‌ಐಸಿ ನಲ್ಲೇ ಹೂಡಿಕೆ ಮಾಡಲಾಗಿದೆ. 2022ರಲ್ಲಿ ರೂ. 170.00 ಕೋಟಿ ಎಂದು ನಮೂದಾಗಿದ್ದು, 2023ರಲ್ಲಿ ರೂ. 117.00 ಕೋಟಿಗೆ ಇಳಿಕೆಯಾಗಿದೆ ಇದಕ್ಕೆ ಕಾರಣವನ್ನು ನೀಡಬೇಕಾಗಿ, ಹಾಗೂ ಇಳಿಕೆಯಾಗಿರುವ ಮೊತ್ತದಲ್ಲಿ ಯಾವುದಾದರೂ ಪ್ರಾಜೆಕ್ಟ್ ಅಥವಾ ಬೇರೆ ಯಾವುದಕ್ಕಾದರೂ ಹೂಡಿಕೆ ಮಾಡಲಾಗಿದೆಯೇ ಎಂದು ಕೇಳಿದರು.

ಹಣಕಾಸು ಅಧಿಕಾರಿಗಳು ಮಾತನಾಡಿ ವಿಶ್ವವಿದ್ಯಾನಿಲಯದಲ್ಲಿ 1850 ಮಂದಿ ಪಿಂಚಣಿದಾರರು ಇದ್ದಾರೆ. ಪ್ರತಿ ತಿಂಗಳು ರೂ. 7 ರಿಂದ 8 ಕೋಟಿ ಪಿಂಚಣಿದಾರರಿಗೆ ಹೋಗುತ್ತದೆ. ಸರ್ಕಾರದಿಂದ ಪಿಂಚಣಿದಾರರಿಗೆ ರೂ. 50.00 ಕೋಟಿ ಮಾತ್ರ ಬಂದಿರುತ್ತದೆ. ಉಳಿಕೆ ಮೊತ್ತವನ್ನು ನೀಡಿರುವುದಿಲ್ಲ ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ ಪಿಂಚಣಿದಾರರಿಗೆ ಪಿಂಚಣಿ ನೀಡಲು ನಮಗೆ ರೂ. 123.00 ಕೋಟಿಗಳು ಬೇಕಾಗಿರುತ್ತದೆ. ಆದರೆ ಸರ್ಕಾರವು ನಮಗೆ ರೂ. 50.00 ಕೋಟಿಗಳನ್ನು ಮಾತ್ರ ನೀಡಿರುತ್ತದೆ. ಪಿಂಚಣಿ ಹಣವನ್ನು ಸರಿದೂಗಿಸಲು ಎಲ್‌ಐಸಿ ಹಣವನ್ನು ಬಳಕೆ ಮಾಡಿಕೊಳ್ಳಲಾಗುತ್ತಿದೆ. ಸರ್ಕಾರದಿಂದ ಅನುದಾನ ಬಂದ ನಂತರ ಆ ಹಣವನ್ನು ಎಲ್‌ಐಸಿ ಮ್ಯೂಚುಯಲ್ ಫಂಡ್‌ಗೆ ವರ್ಗಾಯಿಸಲಾಗುವುದೆಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ 2021-22ನೇ ಸಾಲಿನ ಲೆಕ್ಕಪರಿಶೋಧನೆ ಮಾಡಲು ಪ್ರೈವೇಟ್‌ನವರಿಗೆ ನೀಡಿದ ನಂತರ ಸರ್ಕಾರಿ ಲೆಕ್ಕಪರಿಶೋಧಕರು ಹಾಗೂ ಲೆಕ್ಕಪತ್ರ ಇಲಾಖೆಯವರು ಲೆಕ್ಕಪರಿಶೋಧನೆ ಮಾಡಿರುವ ಪ್ರತಿ ನಮಗೆ ನೀಡಿದ್ದೀರಿ. ಈಗಾಗಲೇ ಲೆಕ್ಕಪರಿಶೋಧನೆ ಮಾಡಿರುವಂತಹ ಲೆಕ್ಕಪತ್ರವನ್ನು ಈಗ ಸಿಂಡಿಕೇಟ್ ಸಭೆಗೆ ಏಕೆ ತಂದಿದ್ದೀರಿ ಎಂದು ಕೇಳಿದರು. ತಾವು ಮೊದಲೇ ತಿಳಿಸಿದಂತೆ ಸಿಂಡಿಕೇಟ್ ಸಭೆಯ ಅನುಮೋದನೆಯ ನಂತರ ಸರ್ಕಾರಕ್ಕೆ ಕಳುಹಿಸುವುದೆಂದು. ಆದರೆ ಎಲ್ಲಾ ಪ್ರಕ್ರಿಯೆಗಳು

ನಡೆದ ಮೇಲೆ ಸಿಂಡಿಕೇಟ್‌ನ ಅನುಮೋದನೆಗೆ ಮಂಡಿಸಿರುವುದಕ್ಕೆ ಕಾರಣವೇನು ಎಂದು ಕೇಳಿದರು. ನಿಮ್ಮ ಜಮಾ-ಖರ್ಚ(Receipt and Payment)ನಲ್ಲಿ ರೂ.331.00 ಕೋಟಿ ಎಂದಿದೆ, ಸರ್ಕಾರದ ಆಡಿಟ್‌ನಲ್ಲಿ ರೂ. 278.00 ಕೋಟಿ ಎಂದಿದೆ. ಮತ್ತೆ ಇನ್ನೊಂದು ಆಡಿಟ್‌ನಲ್ಲಿ ರೂ. 38.00 ಕೋಟಿಗಳ ವ್ಯತ್ಯಾಸವಿದೆ ಎಂದು ಸರ್ಕಾರದ ಆಡಿಟ್‌ನವರು ಹೇಳಿದ್ದಾರೆ ಇದು ಹೇಗೆ ಸಾಧ್ಯ? ನೀವು ನೀಡಿರುವಂತಹ ಬ್ಯಾಲೆನ್ಸ್ ಶೀಟ್‌ನಲ್ಲಿ ಮೂರು ಅಂಕಿಗಳು ಮ್ಯಾಚ್ ಆಗುತ್ತಿಲ್ಲ ಎಂದು ತಿಳಿಸಿದರು.

ಹಣಕಾಸು ಅಧಿಕಾರಿಗಳು ಬ್ಯಾಲೆನ್ಸ್ ಶೀಟ್‌ನ್ನು ಗಮನಿಸಿ ಹೇಳುವುದಾಗಿ ಹಾಗೂ ಮೊದಲ ಬಾರಿಗೆ ಚಾರ್ಟರ್ಡ್ ಅಕೌಂಟೆಂಟ್ ಅವರಿಂದ ವಾರ್ಷಿಕ ಲೆಕ್ಕಪತ್ರಗಳನ್ನು ಸಮಗ್ರವಾಗಿ ಪರಿಶೀಲನೆ ಮಾಡಿಸುತ್ತಿರುವುದು ಹಾಗೂ ಹಂತ ಹಂತವಾಗಿ ಎಲ್ಲವನ್ನು ಸುಧಾರಣೆ ಮಾಡುವುದಾಗಿ ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ ಚಾರ್ಟರ್ಡ್ ಅಕೌಂಟೆಂಟ್ ಅವರು ಲೆಕ್ಕಪತ್ರಗಳನ್ನು ಸ್ಥೂಲವಾಗಿ ಪರಿಶೀಲಿಸಿ ಹೋಗಿರುತ್ತಾರೆ. ಆದರೆ ಆಡಿಟ್‌ರವರು ಸಮಗ್ರವಾಗಿ ಎಲ್ಲವನ್ನು ಪರಿಶೀಲಿಸುತ್ತಾರೆ ಎಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ಪ್ರತಿ ವರ್ಷ ಕೊರತೆ ರೂ. 80.00 ಕೋಟಿ ಬರುತ್ತಿದೆ? ಇದಕ್ಕೆ ಏನು ಕಾರಣ ಎಂದು ಕೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ ಅದು ನಷ್ಟ ಅಂತ ಹೇಳಲಿಕ್ಕೆ ಬರುವುದಿಲ್ಲ, ಪಿಂಚಣಿದಾರರಿಗೆ ಸರ್ಕಾರದಿಂದ ಬರುತ್ತಿರುವ ಅನುದಾನವು ತುಂಬಾ ಕಡಿಮೆಯಾಗಿದೆ. ಕಳೆದ ಬಾರಿ ರೂ. 50.000 ಕೋಟಿಗಳನ್ನು ನೀಡಿದ್ದಾರೆ. ಪಿಂಚಣಿಯನ್ನು ಸರಿದೂಗಿಸಲು ಎಲ್‌ಐಸಿ ಫಂಡ್‌ನಿಂದ ಹಣವನ್ನು ಪಡೆದು, ನಂತರ ಸರ್ಕಾರದಿಂದ ಅನುದಾನ ಬಂದನಂತರ ಎಲ್‌ಐಸಿ ಪೆನ್ಷನ್ ಫಂಡ್‌ಗೆ ತೊಡಗಿಸುವುದಾಗಿ, ಜೊತೆಗೆ ಎಲ್‌ಐಸಿ ಪೆನ್ಷನ್ ಫಂಡ್‌ನ ಹಣವನ್ನು ಬೇರೆ ಯಾವುದಕ್ಕೂ ಬಳಸುವಂತೆಯೂ ಇಲ್ಲವೆಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ಟೆಲಿಫೋನ್‌ಗಾಗಿ 2021-22ನೇ ಸಾಲಿನಲ್ಲಿ ರೂ. 80.00 ಲಕ್ಷಗಳನ್ನು ಬಳಸಿದೆ ಎಂದಿದೆ. ಆದರೆ ಇಂದಿನ ಕಾಲದಲ್ಲಿ ಯಾರು ಟೆಲಿಫೋನ್ ಅನ್ನು ಬಳಸುತ್ತಾರೆ. ಇಷ್ಟೊಂದು ಹಣವನ್ನು ಟೆಲಿಫೋನ್‌ಗೆ ಬಳಸುವ ಅವಶ್ಯಕತೆ ಇದೆಯೇ? ಆದ್ದರಿಂದ ಅಗತ್ಯಕ್ಕಿಂತ ಹೆಚ್ಚಿರುವ ಟೆಲಿಫೋನ್‌ಗಳನ್ನು ರದ್ದುಮಾಡಬಹುದಲ್ಲವೇ ಎಂದು ಕೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ ನಾನು ಅಧಿಕಾರಕ್ಕೆ ಬಂದ ನಂತರ ಅಗತ್ಯಕ್ಕಿಂತ ಹೆಚ್ಚಿರುವ ದೂರವಾಣಿಗಳನ್ನು ರದ್ದುಗೊಳಿಸಿರುವುದಾಗಿ ಹಾಗೂ ಎಲ್ಲಾ ಅಧ್ಯಯನ ವಿಭಾಗಗಳಿಗೂ ಒಂದೊಂದು ದೂರವಾಣಿಗಳನ್ನು ನೀಡಿರುವುದಾಗಿ, ಒಟ್ಟು 100 ದೂರವಾಣಿಗಳು ಇರಬಹುದು ಎಂದು ತಿಳಿಸಿದರು. ದೂರವಾಣಿಗಳನ್ನು ಕೇವಲ ಕಛೇರಿಗೆ ಹಾಗೂ ಅಧ್ಯಕ್ಷರಿಗೆ ಮಾತ್ರ ನೀಡಲಾಗಿದೆ, ಈಗ ದೂರವಾಣಿಯ ಬಿಲ್ಲು ಕಡಿಮೆಯಾಗಿದೆ ಎಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ವಿದ್ಯುತ್ ಶುಲ್ಕ ರೂ. 4.17 ಲಕ್ಷ ಬಂದಿದೆ. ಆದ್ದರಿಂದ ನನ್ನ ಸಲಹೆ ಏನೆಂದರೆ ವರ್ಷಕ್ಕೆ ನಾವು ರೂ. 4.00 ಕೋಟಿ ಕೊಡುವ ಬದಲಾಗಿ ಕೇಂದ್ರ ಸರ್ಕಾರ ಸೋಲಾರ್‌ಗೆ ದೊಡ್ಡ ಮಟ್ಟದ ಸಬ್ಸಿಡಿ ಕೊಡುತ್ತಾ ಇದೆ. ಆದ್ದರಿಂದ ಸೋಲಾರ್ ಬಳಕೆಯನ್ನು ಮಾಡಿಕೊಳ್ಳಬಹುದಲ್ಲವೇ ಹಾಗೂ ಲೋನ್ ಸೌಲಭ್ಯವನ್ನು ಸಹ ಪಡೆಯಬಹುದು ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ ಕ್ರಾಫರ್ಡ್ ಹಾಲ್ ಬಿಲ್ಡಿಂಗ್‌ನ ವಿದ್ಯುತ್ ಶುಲ್ಕ ರೂ. 2-3 ಲಕ್ಷದ ವರೆಗೆ ಬರುತ್ತದೆ. ಆದರೆ ಸೋಲಾರ್‌ಗೆ ನಾವು ಇನ್‌ವೆಸ್ಟ್ ಮಾಡಲು ಹಣ ಎಲ್ಲಿಂದ ತರುವುದು ಎಂದು ಕೇಳಿದರು. ಮತ್ತೆ ಸರ್ಕಾರಿ ಕಛೇರಿಗಳಿಗೆ ಯಾರು ಸಾಲ ಸೌಲಭ್ಯವನ್ನು ನೀಡುವುದಿಲ್ಲ ಎಂದು ತಿಳಿಸಿದರು.

ಶ್ರೀ ನಟರಾಜ್ ಹೆಚ್.ಎಸ್. ಅವರು ಮಾತನಾಡಿ ಹಾಸ್ಟೆಲ್‌ಗಳಿಗೆ ಸೋಲಾರ್‌ಅನ್ನು ಅಳವಡಿಸಲಾಗಿತ್ತು. ಅವುಗಳು ಹಾಳಾದ್ದರಿಂದ ಗೀಸರ್‌ಗೆ ಬದಲಾಯಿಸಿ ಹಾಕಲಾಗಿದೆ. ಇದರಿಂದನೂ ಸಹ ವಿದ್ಯುತ್ ಶುಲ್ಕ ಜಾಸ್ತಿಯಾಗಿದೆ ಎಂದು ತಿಳಿಸಿದರು.

ಡಾ. ಯಜ್ಞಮೂರ್ತಿ ಶ್ರೀಕಾಂತ್ ಅವರು ಮಾತನಾಡಿ corporate social responsibility ಅನುದಾನದಡಿ ಅಂದರೆ Infosys ಅಂತಹವರ ಜೊತೆಗೆ ಅನುಸಂಧಾನ (Approach) ಮಾಡಿಕೊಳ್ಳಬಹುದಲ್ಲವೇ ಎಂದು ತಮ್ಮ ಸಲಹೆಯನ್ನು ನೀಡಿದರು.

ಮಾನ್ಯ ಕುಲಪತಿಗಳು ಮಾತನಾಡಿ ಈ ನಿಟ್ಟಿನಲ್ಲಿ ನಾವು ಈಗಾಗಲೇ ಕ್ರಮವಹಿಸುತ್ತಿದ್ದೇವೆ. ಉದಾ.: ನಮ್ಮ Physics ಅಧ್ಯಯನ ವಿಭಾಗದಲ್ಲಿ ಮಾಡಿಕೊಂಡಿದ್ದೇವೆ. ಹಾಗೆ ಎಲ್ಲಾ ಅಧ್ಯಯನ ವಿಭಾಗಗಳಲ್ಲಿ ಕಛೇರಿಗಳಲ್ಲಿ ಹಂತ ಹಂತವಾಗಿ ಮಾಡಿಕೊಳ್ಳಬೇಕಾಗುತ್ತದೆ, ಒಟ್ಟಿಗೆ ಮಾಡಲು ಸಾಧ್ಯವಾಗುವುದಿಲ್ಲ, ಗಣಕವಿಜ್ಞಾನ ವಿಭಾಗದಲ್ಲಿಯೂ ಮಾಡಲಾಗಿದೆ. ಹಾಸ್ಟೆಲ್‌ನಲ್ಲು ಮಾಡಲಾಗಿತ್ತು ಹಾರ್ಡ್ ವಾಟರ್‌ನಿಂದ ಸಮಸ್ಯೆ ಉಂಟಾಯಿತು. ನೀರಿನ ಸಮಸ್ಯೆಯೂ ಸಹ ಇದೆ ಎಂದು ತಿಳಿಸಿದರು.

ಡಾ. ಬಸವರಾಜು ಸಿ. ಅವರು ಮಾತನಾಡಿ ಹಾರ್ಡ್ ವಾಟರ್‌ನಿಂದ ಎಂತಹ ನಲ್ಲಿಗಳನ್ನು ಅಳವಡಿಸಿದರು ಒಂದೆರಡು ತಿಂಗಳಲ್ಲಿ ಹಾಳಾಗುವ ಸಾಧ್ಯತೆ ಇದೆ ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ ಕಾವೇರಿ ನೀರನ್ನು ತರುವ ಪ್ರಯತ್ನದಲ್ಲಿ ಜಿಲ್ಲಾಧಿಕಾರಿಗಳೊಂದಿಗೆ ಮಾತನಾಡಲಾಗಿದೆ. ಅವರು ಸಹ ಆಶ್ವಾಸನೆಯನ್ನು ನೀಡಿದ್ದಾರೆ. ಇದು ನನ್ನ ಕನಸು ಸಹ ಆಗಿದೆ ಎಂದು ತಿಳಿಸಿದರು. ಜೊತೆಗೆ ನಾನು ಕೂಡ ಬೇರೆ Corporateಗಳ ಹತ್ತಿರ ಮಾತನಾಡಿದ್ದೇನೆ. ಜಯಲಕ್ಷ್ಮೀವಿಲಾಸ್‌ನ ನವೀಕೃತಗೊಳಿಸುವ ಕ್ರಮದಂತೆ ಪ್ರಯತ್ನಿಸುತ್ತಿದ್ದೇನೆ ಎಂದು ತಿಳಿಸಿದರು. CSR ನಡಿ ಒಂದು ಬಾರಿ ಅಳವಡಿಸಿಕೊಡುತ್ತಾರೆ. ತದನಂತರ ಅದನ್ನು ಉಸ್ತುವಾರಿ ಮಾಡಲು ನಮ್ಮ ಬಳಿ ಬಂಡವಾಳ ಬೇಕಾಗುತ್ತದೆ. ಈ ರೀತಿಯಾಗಿ ನಮ್ಮಲ್ಲಿ ಹಲವು ಸಮಸ್ಯೆಗಳಿವೆ. ಆದ್ದರಿಂದ ಇದನ್ನು ಒಂದೇ ಬಾರಿ ಮಾಡುವುದಕ್ಕೆ ಆಗುವುದಿಲ್ಲ. ಹಂತ ಹಂತವಾಗಿ ಕ್ರಮಕೈಗೊಳ್ಳಬೇಕಾಗುತ್ತದೆ ಎಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ಸೋಲಾರ್‌ನ ಪ್ರಾಜೆಕ್ಟ್ ವರದಿಯನ್ನು ನೀಡಿದರೆ ಟೆಕ್ನಿಕಲ್ ಎಕ್ಸ್‌ಫರ್ಟ್ ಅವರಿಗೆ ನೀಡಿ, ಅದರಲ್ಲಿ ಎಷ್ಟು ಖರ್ಚು-ವೆಚ್ಚಗಳಾಗಬಹುದು ಮತ್ತು ಎಷ್ಟು ವಿದ್ಯುತ್ ಬಳಕೆ (Consumption) ಆಗುತ್ತೆ ಎಂದು ತಿಳಿದುಕೊಳ್ಳಬಹುದು ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಸೋಲಾರ್ ಬಗೆಗಿನ ವರದಿ ನಮ್ಮಲ್ಲಾಗಲೇ ಇದೆ. ಅದನ್ನು ಕೊಡುವುದಾಗಿ ತಿಳಿಸಿದರು. ಇತ್ತೀಚೆಗೆ ಸೋಲಾರ್‌ನ ಬೆಲೆ ದುಬಾರಿ ಆಗಿದೆ. ಮನೆಗಾದರೆ ಲಕ್ಷದವರೆಗೆ ಆಗುತ್ತದೆ. ಆದರೆ ಈ ಒಂದು ಸಂಸ್ಥೆಗೆ ಕೋಟಿಗಳಷ್ಟು ಹಣವನ್ನು ನಾವು ಹೂಡಿಕೆ ಮಾಡಬೇಕಾಗುತ್ತದೆ. ಅಷ್ಟೊಂದು ಹಣವನ್ನು ಎಲ್ಲಿಂದ ತರುವುದು ಎಂಬುದೇ ಸಮಸ್ಯೆಯಾಗಿದೆ ಎಂದು ತಿಳಿಸಿದರು.

ಶ್ರೀ ಮಹದೇಶು ಅವರು ಮಾತನಾಡಿ 2021-22ನೇ ಸಾಲಿನಲ್ಲಿ ಪರೀಕ್ಷೆ ಹಾಗೂ ಘಟಿಕೋತ್ಸವಕ್ಕೆ ಎಂದು ರೂ. 2.00 ಕೋಟಿ 85.00 ಲಕ್ಷ ಇದೆ. 2022-23ನೇ ಸಾಲಿನಲ್ಲಿ ರೂ. 7.00 ಕೋಟಿ ಇದೆ. ಇದು ಹೇಗೆ ಯಾವ ರೀತಿ ಖರ್ಚಾಗಿದೆ ಎಂದು ಕೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ ಕೋವಿಡ್-19 ಸಾಂಕ್ರಾಮಿಕ ಪಿಡುಗು ಇದ್ದಿದ್ದರಿಂದ ಸರ್ಕಾರವು ಎಲ್ಲಾ ವಿದ್ಯಾರ್ಥಿಗಳಿಗೂ ತೇರ್ಗಡೆಯಾಗಿದ್ದಾರೆ ಎಂದು ಘೋಷಣೆ ಮಾಡಿ ಎಂದಿದ್ದರಿಂದ ಆ ವರ್ಷ ಪರೀಕ್ಷಾ ಖರ್ಚು ಕಡಿಮೆಯಾಗಿದೆ. ಜೊತೆಗೆ ಸರ್ಕಾರವು ಘೋಷಣೆ ಮಾಡಿದ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯವು ಪ್ರಶ್ನೆ ಪತ್ರಿಕೆ ಹಾಗೂ ಉತ್ತರ ಪತ್ರಿಕೆಗಳೆಲ್ಲವನ್ನು ತಯಾರಿಸಿದ್ದಕ್ಕೆ ಆಗಿದ್ದಂತ ಖರ್ಚಾಗಿರುತ್ತದೆ ಎಂದು ತಿಳಿಸಿದರು.

ಕುಲಸಚಿವ (ಪರೀಕ್ಷಾಂಗ) ಅವರು ಮಾತನಾಡಿ ಪರೀಕ್ಷಾ ಕಾರ್ಯಗಳಿಗೆ ಸಂಬಂಧಿಸಿದಂತೆ ಹೊರಗುತ್ತಿಗೆಯಲ್ಲಿ ಪ್ರಶ್ನೆ ಪತ್ರಿಕೆ ಹಾಗೂ ಉತ್ತರ ಪತ್ರಿಕೆಗಳನ್ನು ತಯಾರಿಸುವಂತಹ ಪ್ರಕ್ರಿಯೆಗಳು ನಡೆಯುತ್ತಿರುತ್ತದೆ. 2021-22ನೇ ಸಾಲಿನಲ್ಲಿ ಪರೀಕ್ಷಾ ಕಾರ್ಯದ ಹಣವನ್ನು ಪಾವತಿ ಮಾಡುವುದು ನಿದಾನವಾಗಿದ್ದರಿಂದ ಮುಂದಿನ ವರ್ಷ ಅಂದರೆ 2022-23ನೇ ಸಾಲಿಗೆ ನೀಡಿರುವುದರಿಂದ ಆ ಸಾಲಿನಲ್ಲಿ ಈ ಹಣವು ಸೇರಿಕೊಂಡಿದೆ ಎಂದು ತಿಳಿಸಿದರು.

ಶ್ರೀ ಮಹದೇಶು ಅವರು ಮಾತನಾಡಿ ಪರೀಕ್ಷಾ ಕಾರ್ಯದಲ್ಲಿ ತೊಡಗಿರುವವರಿಗೆ Remuneration ಬರುವುದಿಲ್ಲವೇ? ಹಾಗೂ 2021-22 ನೇ ಸಾಲಿನಲ್ಲಿ ರೂ. 2.00 ಕೋಟಿಗಳಿಂದ ಇದ್ದದ್ದು ರೂ. 6.00 ಕೋಟಿಗಳಿಗೆ ಏರಿಕೆಯಾಗಿದೆ ಹೇಗೆ ಎಂದು ಕೇಳಿದರು.

ಕುಲಸಚಿವ (ಪರೀಕ್ಷಾಂಗ) ಅವರು ಮಾತನಾಡಿ ಕೋವಿಡ್-19 ಇದ್ದಿದ್ದರಿಂದ ನವೆಂಬರ್ ಮಾಹೆಯಲ್ಲಿ ನಡೆಸಬೇಕಾದಂತಹ ಪರೀಕ್ಷೆಗಳು ನಡೆದಿರುವುದಿಲ್ಲ ಎಂದು ತಿಳಿಸಿದರು.

ಕುಲಸಚಿವರು ಮಾತನಾಡಿ ಪರೀಕ್ಷಾ ಕಾರ್ಯದಲ್ಲಿ ತೊಡಗಿರುವಂತಹವರಿಗೆ Remuneration ನೀಡಿರುವುದಕ್ಕೆ ಸರ್ಕಾರದಿಂದ ಆಕ್ಷೇಪಣೆ ವ್ಯಕ್ತವಾಗಿತ್ತು. ನಂತರ ಅಧ್ಯಾಪಕ ವೃಂದದವರೆಲ್ಲಾ ಉತ್ತರ

ಪತ್ರಿಕೆಗಳನ್ನು ಮೌಲ್ಯಮಾಪನ ಮಾಡುವುದಿಲ್ಲವೆಂದು ಮುಷ್ಕರ ಹೂಡಿದ್ದರಿಂದ, ಟೀಚರ್ಸ್‌ನೆಲ್ಲಾ ಕರೆದು ಸಭೆ ನಡೆಸಿ, ತದನಂತರ ಅವರಿಗೆ remuneration ನೀಡಲು ಆದೇಶ ನೀಡಿದ ನಂತರ ಹಣಕಾಸು ಅಧಿಕಾರಿಗಳು remuneration ಅನ್ನು ಪಾವತಿಸಿದ್ದಾರೆ ಹಾಗೂ ನಮ್ಮಲ್ಲಿ ಇರುವ ಶೆ. 70 ರಷ್ಟು ಅಧ್ಯಾಪಕರುಗಳು ಅತಿಥಿ ಉಪನ್ಯಾಸಕರುಗಳೇ ಇದ್ದಾರೆ. ಉಳಿಕೆ ಶೇ. 30 ರಷ್ಟು ಖಾಯಂ ಪ್ರಾಧ್ಯಾಪಕರಿದ್ದಾರೆ. ಆದ್ದರಿಂದ ಇವರುಗಳಿಗೆ ಗೌರವ ಸಂಭಾವನೆಯನ್ನು ನೀಡಬೇಕಾಗುತ್ತದೆ ಎಂದು ಸಭೆಯ ಗಮನಕ್ಕೆ ತಂದರು.

ಶ್ರೀ ಮಹದೇಶು ಅವರು ಮಾತನಾಡಿ 2021-22ನೇ ಸಾಲಿನಲ್ಲಿ ಹಾಸ್ಟೆಲ್ ಎಕ್ಸ್‌ಪೆನ್ಸಸ್‌ಗೆ ಎಂದು ಹಣ ಖರ್ಚಾಗಿರುವ ಬಗ್ಗೆ ಯಾವ ಮಾಹಿತಿಯೂ ಇಲ್ಲ, ಆದರೆ 2022-23ನೇ ಸಾಲಿನಲ್ಲಿ ಹಾಸ್ಟೆಲ್ ಎಕ್ಸ್‌ಪೆನ್ಸಸ್‌ಗೆ ರೂ. 6.00 ಕೋಟಿಗಿಂತ ಹೆಚ್ಚು ಹಣ ವ್ಯಯವಾಗಿರುತ್ತದೆ ಎಂದು ಸಭೆಯ ಗಮನಕ್ಕೆ ತಂದರು.

ಕುಲಸಚಿವರು ಮಾತನಾಡಿ 2021-22ನೇ ಸಾಲಿನಲ್ಲಿ ಆಗಿದ್ದಂತಹ ಖರ್ಚುಗಳಿಗೆ ಆ ವರ್ಷದಲ್ಲಿ ಹಣವನ್ನು ಪಾವತಿ ಮಾಡಲು ಸಾಧ್ಯವಾಗದೆ ಇದ್ದುದರಿಂದ ಈ ಹಣವನ್ನು 2022-23ನೇ ಸಾಲಿನಲ್ಲಿ ಪಾವತಿ ಮಾಡಲಾಗಿರುವುದರಿಂದ ಹಣದ ಮೊತ್ತವು ಹೆಚ್ಚಾಗಿ ಕಂಡಿದೆ. ನಮ್ಮ ಹಾಸ್ಟೆಲ್‌ನ ಅಡುಗೆಗೆ ಸಂಬಂಧಿಸಿದಂತೆ ಜೂನ್ ಮಾಹೆಯ ಬಿಲ್‌ಅನ್ನು ಇನ್ನೂ ಪಾವತಿ ಮಾಡಲಾಗಿಲ್ಲ. ತರಕಾರಿ ಹಾಗೂ ದಿನಸಿ ಸರಬರಾಜು ಮಾಡುವವರ ಅವಧಿ ಮುಗಿದಿದೆ, ಆದರೂ ಅವರಿಗೆ ಷರತ್ತು ವಿಧಿಸಿ ಅವರನ್ನು ಮುಂದುವರೆಸಲಾಗಿದೆ. ಟೆಂಡರ್‌ನ್ನು ಕರೆಯುವಲ್ಲಿ ಟೆಕ್ನಿಕಲ್ ಸಮಿತಿಯಲ್ಲಿಯು ಪ್ರಕ್ರಿಯೆಗಳು ನಡೆಯುತ್ತಿವೆ ಎಂದು ಜೊತೆಗೆ ಪ್ರತಿ ತಿಂಗಳು ಅವರುಗಳಿಗೆ ಹಣವನ್ನು ಪಾವತಿ ಮಾಡಬೇಕಾಗುತ್ತದೆ ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ ಹಾಸ್ಟೆಲ್‌ನ ಅಡುಗೆಗೆ ಸಂಬಂಧಿಸಿದಂತಹ ಬಿಲ್ಲುಗಳು ಒಂದೂವರೆ ವರ್ಷಗಳಿಂದ ಹಾಗೆ ಉಳಿದಿತ್ತು. ಆ ಎಲ್ಲಾ ಬಿಲ್ಲುಗಳಿಗೂ ಪಾವತಿ ಮಾಡಿಕೊಂಡು ಈಗ ಅಕ್ಟೋಬರ್ ನವೆಂಬರ್ ಮಾಹೆಯ ಬಿಲ್ಲುಗಳನ್ನು ಪಾವತಿಸುತ್ತಿದ್ದೇವೆ ಎಂದು ತಿಳಿಸಿದರು.

ಶ್ರೀ ನಟರಾಜ ಹೆಚ್.ಎಸ್. ಅವರು ಮಾತನಾಡಿ Social Welfare ಇಲಾಖೆಯಿಂದ ಹಾಸ್ಟೆಲ್‌ಗಳ ನಿರ್ವಹಣೆಗಾಗಿ ಹಾಗೂ ಆಹಾರ ಭತ್ಯೆಗಾಗಿ ಎಂದು ಅನುದಾನ ಬರುತ್ತಿಲ್ಲವೇ ಎಂದು ಕೇಳಿದರು.

ಶ್ರೀ ನಾಗರಾಜು ಸಿ. ಅವರು ಮಾತನಾಡಿ ವಿಶ್ವವಿದ್ಯಾನಿಲಯದ ಒಳಗೆ ಇದ್ದರೆ ಬರುವುದಿಲ್ಲ. ಹೊರಗಿನ ಹಾಸ್ಟೆಲ್‌ಗಳಿಗೆ ಬರುತ್ತದೆ ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ ಹಾಸ್ಟೆಲ್‌ಗಳ ನಿರ್ವಹಣೆಗಾಗಿ ಸಮಾಜ ಕಲ್ಯಾಣ ಇಲಾಖೆಯಿಂದ ಯಾವುದೇ ಅನುದಾನವು ವಿಶ್ವವಿದ್ಯಾನಿಲಯಕ್ಕೆ ಬರುತ್ತಿಲ್ಲವೆಂದು ತಿಳಿಸಿದರು.

ಶ್ರೀ ಮಹದೇಶು ಅವರು ಮಾತನಾಡಿ 2021-22ನೇ ಸಾಲಿನಲ್ಲಿ ಸೆಮಿನಾರ್, ಕಾನ್ಫರೆನ್ಸ್ ಮತ್ತು ಅವಾರ್ಡ್ ಎಕ್ಸ್‌ಪೆನ್ಸಸ್‌ನಲ್ಲಿ ರೂ. 31.45 ಲಕ್ಷಗಳು ಇದೆ. ಆದರೆ 2022-23ನೇ ಸಾಲಿನಲ್ಲಿ ರೂ. 3.00 ಕೋಟಿಗಿಂತ ಹೆಚ್ಚಾಗಿರುವುದಕ್ಕೆ ಕಾರಣವೇನೆಂದು ಕೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ ಕೆಲವು ಅಧ್ಯಯನ ವಿಭಾಗಗಳ ಪ್ರಾಜೆಕ್ಟ್ ಫಂಡ್‌ನಡಿಯಲ್ಲಿ ಸೆಮಿನಾರ್, ಕಾನ್ಫರೆನ್ಸ್ ಹಾಗೂ ಅವಾರ್ಡ್ ಕಾರ್ಯಕ್ರಮಗಳನ್ನು ಆಯೋಜಿಸಿರುತ್ತಾರೆ. ಆಯಾಯ ವಿಭಾಗಗಳಿಗೆ ದೊರೆಯುವ ಅನುದಾನದ ಆಧಾರದ ಮೇಲೆ ಖರ್ಚಾಗಿರುತ್ತದೆ ಎಂದು ತಿಳಿಸಿದರು.

ಕುಲಸಚಿವರು ಮಾತನಾಡಿ ಯಾವುದಾದರೂ ಒಂದು ವಿಭಾಗಕ್ಕೆ ಪ್ರಾಜೆಕ್ಟ್‌ಗೆಂದು ಅನುದಾನ ಅಂದಾಜು ರೂ. 50.00 ಲಕ್ಷಗಳನ್ನು ನೀಡಿದ್ದಾಗ, ಆ ವರ್ಷದಲ್ಲಿ ಅವರುಗಳು ತೆಗೆದುಕೊಂಡಿರುವಂತಹ ಸಂಶೋಧನಾ ವಿಚಾರಕ್ಕಾಗಿ ಹಾಗೂ ಸಂಬಳಕ್ಕಾಗಿ ಮಾತ್ರ ವ್ಯಯ ಮಾಡಿರುತ್ತಾರೆ. ಆದರೆ 2ನೇ ವರ್ಷದಲ್ಲಿ ಅವರು ಪ್ರಾಜೆಕ್ಟ್

ಕಂಪ್ಲೀಟ್ ಮಾಡಿ, ಯುಸಿಯನ್ನು ನೀಡಬೇಕಾಗಿರುವುದರಿಂದ ಆ ವರ್ಷದಲ್ಲಿ ಹೆಚ್ಚು ಖರ್ಚಾಗಿರುವ ಸಾಧ್ಯತೆ ಇರುತ್ತದೆ ಎಂದು ತಿಳಿಸಿದರು.

ಹಣಕಾಸು ಅಧಿಕಾರಿಗಳು ಮಾತನಾಡಿ 2023-24ನೇ ಸಾಲಿನ ವಾರ್ಷಿಕ ಲೆಕ್ಕಪತ್ರವನ್ನು ತಯಾರು ಮಾಡುವಾಗ ನೀವು ನೀಡಿರುವಂತಹ ಅಷ್ಟು ಮಾಹಿತಿಗಳನ್ನು ಕ್ರೂಢೀಕರಿಸಿ ತಯಾರಿಸುವ ನಿಟ್ಟಿನಲ್ಲಿ ಮಾಡುವುದಾಗಿ ತಿಳಿಸಿದರು.

ಹಣಕಾಸು ಅಧಿಕಾರಿಗಳು ಮಾತನಾಡಿ 2022ನಲ್ಲಿ ಈ ತರಹದ ಖರ್ಚಾಗಿದೆ. ಪ್ರಸ್ತುತ ವರ್ಷದಲ್ಲಿ ಇಂತಹ ಖರ್ಚುಗಳೆಲ್ಲವನ್ನು ಕಡಿಮೆಗೊಳಿಸಲಾಗಿದೆ ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ ಲೆಕ್ಕಪರಿಶೋಧನೆ ಮಾಡಿ ಲೆಕ್ಕಪತ್ರವನ್ನು ತಯಾರಿಸುವ ಹಂತದಲ್ಲಿ ಲೆಕ್ಕಪರಿಶೋಧಕರು 2021ನೇ ಸಾಲಿನಲ್ಲಿ ವ್ಯಯವಾಗಿರುವಂತಹ ಖರ್ಚನ್ನು ನಮೂದಿಸಿಲ್ಲ. ಆದ್ದರಿಂದ 2021 ಹಾಗೂ 2022 ವರ್ಷಗಳದ್ದು ಸೇರಿ ಖರ್ಚಾಗಿರಬಹುದೆಂದು ತಿಳಿಸಿದರು.

ಕುಲಸಚಿವರು ಮಾತನಾಡಿ ಹಣಕಾಸು ಅಧಿಕಾರಿಗಳಿಗೆ ನಿಮ್ಮಲ್ಲಿ ಎಲ್ಲಾ ಮಾಹಿತಿಗಳು ಹಾಗೂ ವಿಶ್ವವಿದ್ಯಾನಿಲಯದಿಂದ ಹೊರಡಿಸಿರುವಂತಹ ಆದೇಶಗಳೆಲ್ಲವು ನಿಮ್ಮ ವಿಭಾಗದಲ್ಲಿರುತ್ತದೆ ಎಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ಅನುಮೋದನೆ ನೀಡಬೇಕಾದರೆ ಇದರ ಬಗ್ಗೆ ಮಾಹಿತಿಯನ್ನು ನೀಡಬೇಕಾಗುತ್ತದೆ ಎಂದು ಹಣಕಾಸು ಅಧಿಕಾರಿಗಳಿಗೆ ತಿಳಿಸಿದರು.

ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ ರೊಟೇಷನ್ ಬೇಸಿಸ್ ಮೇಲೆ ಕಛೇರಿಯ ಅಧಿಕಾರಿಗಳು/ಸಿಬ್ಬಂದಿಗಳು ಬದಲಾವಣೆಯಾಗುತ್ತಿರುತ್ತಾರೆ. ಆದರೆ ನೀವು 2021-22ರಲ್ಲಿ ನಾನಿರಲಿಲ್ಲ, ಬೇರೆಯವರು ಇದ್ದರು ಎಂದು ಹೇಳುವುದು ಸರಿಯಾದ ಕ್ರಮವಲ್ಲ. ಇದರ ಬಗ್ಗೆ ಕಛೇರಿಯಲ್ಲಿ ಮಾಹಿತಿಯಿರಬೇಕಾಗುತ್ತದೆ ಎಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ಒಂದು ವೇಳೆ ಹಣವು ದುರ್ಬಳಕೆಯಾಗಿದ್ದರೆ ವಸೂಲಾತಿ ಮಾಡಬೇಕಾಗುತ್ತದೆ ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ ಪುಟ ಸಂಖ್ಯೆ 115ರಲ್ಲಿ ಕ್ರಮ.ಸಂಖ್ಯೆ 35 ಹಾಗೂ 36ರಲ್ಲಿಯೂ ಸಹ 2021ನೇ ಸಾಲಿನಲ್ಲಿ ಖರ್ಚಾಗಿರುವ ಬಗ್ಗೆ ಮಾಹಿತಿ ನೀಡಿರುವುದಿಲ್ಲ. ಆದರೆ ಪ್ರತಿ ವರ್ಷವು ಪ್ರಯೋಗಾಲಯಕ್ಕೆ Consumbales ಮತ್ತು ಪೀಠೋಪಕರಣಗಳನ್ನು ಖರೀದಿಸಲು ಹಾಗೂ ಪ್ರಯಾಣಕ್ಕೆ ಸಂಬಂಧಿಸಿದ ಖರ್ಚುಗಳು ಇದ್ದೇ ಇರುತ್ತವೆ. ಆದರೆ ಆಡಿಟ್ ಮಾಡುವ ಸಂದರ್ಭದಲ್ಲಿ 2021ನೇ ಸಾಲಿನಲ್ಲಿ ಖರ್ಚಾಗಿರುವ ಹಣವನ್ನು ಏಕೆ ನಮೂದಿಸಿಲ್ಲವೆಂದು ತಿಳಿದುಬರುತ್ತಿಲ್ಲವೆಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ನಾವು ಹೇಳಿರುವಂತಹ ಮಾಹಿತಿಗಳ ಬಗ್ಗೆ ಮಾಹಿತಿಯನ್ನು ನೀಡಬೇಕಾಗಿಯೂ ಹಾಗೂ ಎಲ್ಐಸಿ ಮ್ಯೂಚಯಲ್ ಫಂಡ್‌ನಿಂದ ಕೇವಲ ಪಿಂಚಣಿಗಾಗಿ ಮಾತ್ರ ಹಣವನ್ನು ಬಳಸುತ್ತಿರುವುದರ ಬಗ್ಗೆ ನಿಖರತೆಯಿದೆಯೇ ಎಂದು ಜೊತೆಗೆ ವಿದ್ಯಾರ್ಥಿಗಳಿಂದ ಪಡೆಯುತ್ತಿರುವ ಪ್ರವೇಶಾತಿ ಶುಲ್ಕ ಹಾಗೂ ಇತರೆ ಶುಲ್ಕಗಳನ್ನು ಅವುಗಳಿಗೆ ಮಾತ್ರ ಖರ್ಚು ಮಾಡಲಾಗುತ್ತಿದೆಯೇ ಎಂದು ಕೇಳಿದರು.

ಕುಲಸಚಿವರು ಮಾತನಾಡಿ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿಗಾಗಿ ಸಭೆಯಲ್ಲಿ ಸಾಂಸ್ಕೃತಿಕ ಚಟುವಟಿಕೆಗೆ ರೂ. 5.00 ಲಕ್ಷಗಳಿಗೆ ಅನುಮೋದನೆ ನೀಡಿದ್ದೀರಿ. ಹಾಗೆಯೇ ಎನ್‌ಎಸ್‌ಎಸ್, ವಿದ್ಯಾರ್ಥಿಗಳ ಸಾಂಸ್ಕೃತಿಕ ಚಟುವಟಿಕೆಗಳಿಗೆ, ಶಿಷ್ಯವೇತನಕ್ಕಾಗಿಯೇ ಕಳೆದ ಮೂರು ವರ್ಷದಿಂದ ರೂ.8.00 ಕೋಟಿಗಳವರೆಗೂ ಖರ್ಚು ಮಾಡಲಾಗುತ್ತಿದೆ. ಹೀಗೆ ಹಲವು ಚಟುವಟಿಕೆಗಳಿಗೆ ಖರ್ಚು ಮಾಡಲಾಗುತ್ತಿದೆ. ಈ ಹಣವನ್ನು ಸರ್ಕಾರದಿಂದ ಭರಿಸಲಾಗುತ್ತಿಲ್ಲ. ವಿಶ್ವವಿದ್ಯಾನಿಲಯದ ಹಣವೇ ಆಗಿರುತ್ತದೆ. ಅದು ವಿದ್ಯಾರ್ಥಿಗಳಿಂದ ಪ್ರವೇಶಾತಿ, ಪರೀಕ್ಷಾ ಶುಲ್ಕ ಹಾಗೂ ಇತರೆ ಶುಲ್ಕಗಳಿಂದ ಭರಿಸಿರುವಂತಹ ಹಣವಾಗಿರುತ್ತದೆ ಎಂದು ತಿಳಿಸಿದರು.

ಹಣಕಾಸು ಅಧಿಕಾರಿಗಳು ಮಾತನಾಡಿ ವಿದ್ಯಾರ್ಥಿಗಳ ಅಂತರ ಕಾಲೇಜುಗಳ ಸಾಂಸ್ಕೃತಿಕ ಚಟುವಟಿಕೆಗಳು, ಪರಿಶಿಷ್ಟಜಾತಿ/ವರ್ಗದವರ ಉತ್ತಮೀಕರಣ, ಉತ್ತಮ ಕ್ರೀಡಾಪಟುಗಳಿಗೆ ವಿದ್ಯಾರ್ಥಿವೇತನ, ವಿಶ್ವವಿದ್ಯಾನಿಲಯದ ಶಿಷ್ಯವೇತನ, ವಿಶೇಷ ವಿಕಲ ಚೇತನ ವಿದ್ಯಾರ್ಥಿಗಳಿಗೆ, ಕ್ರೀಡಾ ಸೌಲಭ್ಯಗಳಿಗೆ ಹಾಗೂ ಇನ್ನಿತರೆ ಸೌಲಭ್ಯಗಳಿಗಾಗಿ ಖರ್ಚು ಮಾಡಲಾಗುತ್ತಿದೆ ಎಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ಪರೀಕ್ಷಾ ಶುಲ್ಕವನ್ನು ರೂ. 40.00 ಕೋಟಿ ಸಂಗ್ರಹಿಸಲಾಗಿದೆ. ಆದರೆ ಈ ವರ್ಷ ರೂ. 25.00 ಕೋಟಿ ಸಂಗ್ರಹಿಸಲಾಗಿದೆ. ಹಾಗಾದರೆ ಈ ವರ್ಷದಲ್ಲಿ ವಿದ್ಯಾರ್ಥಿಗಳ ಪ್ರವೇಶಾತಿ ಕಡಿಮೆ ಆಗಿದೆ ಎಂದು ಅರ್ಥವೇ ಎಂದು ಕೇಳಿದರು.

ಹಣಕಾಸು ಅಧಿಕಾರಿಗಳು ಮಾತನಾಡಿ ಆ ವರ್ಷದಲ್ಲಿ ಪರೀಕ್ಷಾ ಶುಲ್ಕವನ್ನು ಪಡೆದಿರುವುದಿಲ್ಲವೆಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ಪರೀಕ್ಷಾ ಕಾರ್ಯವನ್ನು ನಡೆಸದೆ ಹೋದರೂ ವಿದ್ಯುತ್ ಶುಲ್ಕವು ಹೆಚ್ಚಾಗಿ ಬರುತ್ತಿದೆ. ಇದಕ್ಕೆ ಕಾರಣವೇನೆಂದು ಕೇಳಿದರು. ಏನೋ ತೊಂದರೆ ಇರಬಹುದು. ಇಷ್ಟೊಂದು ವಿದ್ಯುತ್ ಶುಲ್ಕ ಬರಲು ಸಾಧ್ಯವೇ? ಅದನ್ನು ಗಮನಿಸಬೇಕೆಂದು ತಿಳಿಸಿದರು.

ಡಾ. ಬಸವರಾಜು ಸಿ. ಹಾಗೂ ಶ್ರೀ ನಟರಾಜು ಹೆಚ್.ಎಸ್. ಅವರುಗಳು ಮಾತನಾಡಿ ನಮ್ಮ ಗಂಗೋತ್ರಿ ಆವರಣದಲ್ಲಿ ಸೋಲಾರ್ ಸ್ಟ್ರೀಟ್ ಲೈಟ್‌ಗಳನ್ನು ಹಾಕಲಾಗಿತ್ತು. ಅವುಗಳ ನಿರ್ವಹಣೆ ಸರಿಯಾಗಿ ಆಗದೆ ಎಲ್ಲವೂ ಹಾಳಾಗಿದೆ ಎಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ವಿಶ್ವವಿದ್ಯಾನಿಲಯದಲ್ಲಿ ಇಂಜಿನಿಯರಿಂಗ್ ವಿಭಾಗವಿದ್ದು, ಅವುಗಳ ನಿರ್ವಹಣೆಯ ಹೊಣೆ ಅವರದ್ದಾಗಿರುತ್ತದೆ. ಹಾಗಾದರೆ ಅವರುಗಳು ಏನು ಕೆಲಸ ಮಾಡುತ್ತಿದ್ದಾರೆ ಎಂದು ಸಭೆಯಲ್ಲಿ ಕೇಳಿದರು.

ಶ್ರೀ ಮಹದೇಶು ಅವರು ಮಾತನಾಡಿ ಹೈಸ್ಕೂಲ್‌ಗಳಲ್ಲಿ ವಿದ್ಯಾರ್ಥಿಗಳಿಂದ ಇಂತಿಷ್ಟು ಸಣ್ಣ ಮೊತ್ತದ ಹಣವನ್ನು ಸಂಗ್ರಹ ಮಾಡುತ್ತಾರೆ. ಕಾರಣ ವಿದ್ಯಾರ್ಥಿ ಯಾವುದೇ ಸಂದರ್ಭದಲ್ಲಿ ಅಕಾಲಿಕ ಮರಣಕ್ಕೆ ತುತ್ತಾದಲ್ಲಿ ಅವರ ಪೋಷಕರಿಗೆ ರೂ. 1.25 ಲಕ್ಷದಷ್ಟು ಮೊತ್ತ ಅವರಿಗೆ ಸಿಗುತ್ತದೆ. ಇದು ಪ್ರಸ್ತುತ ಪ್ರೌಢಶಿಕ್ಷಣದಲ್ಲಿ ಚಾಲ್ತಿಯಲ್ಲಿದೆ. ನಮ್ಮ ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಕಾಲೇಜುಗಳಲ್ಲಿ ಬಡ ಮಕ್ಕಳಿರುತ್ತಾರೆ. ಆದ್ದರಿಂದ ಇಂತಹ ವ್ಯವಸ್ಥೆಯನ್ನು ಮಾಡಲಾಗಿದೆಯೆ ಎಂದು ಕೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ ವಿಶ್ವವಿದ್ಯಾನಿಲಯವು ವಿದ್ಯಾರ್ಥಿ ಸಹಾಯ ನಿಧಿ ಹಣವನ್ನು ಸಂಗ್ರಹಿಸಲಿಕ್ಕೆ ಬರುವುದಿಲ್ಲ. ಆಯಾಯ ಕಾಲೇಜಿನವರು ಹಣವನ್ನು ಸಂಗ್ರಹಿಸಬಹುದು. ವಿಶ್ವವಿದ್ಯಾನಿಲಯದಲ್ಲಿ ಪ್ರವೇಶಾತಿ ಶುಲ್ಕ, ಪರೀಕ್ಷಾ ಶುಲ್ಕ, ಪಠ್ಯಕ್ಕೆ ಹಾಗೂ ಇತರೆ ಶುಲ್ಕಗಳನ್ನು ಮಾತ್ರ ಸಂಗ್ರಹಿಸಲಾಗುತ್ತಿದೆ. ಆದರೆ ಅಕಾಲಿಕ ಮರಣಕ್ಕೆ ತುತ್ತಾದಂತವರಿಗೆ ನೀಡಲು ಹಣವನ್ನು ಸಂಗ್ರಹಿಸಲಾಗುತ್ತಿಲ್ಲ, ಇದು ಕಾಲೇಜಿನ ಮಟ್ಟದಲ್ಲಿ ಮಾತ್ರ ಸಂಗ್ರಹಿಸಬೇಕಾಗುತ್ತದೆ ಎಂದು ತಿಳಿಸಿದರು.

ಶ್ರೀ ಮಹದೇಶು ಅವರು ಮಾತನಾಡಿ  ಅಕಾಲಿಕ ಮರಣಕ್ಕೆ ತುತ್ತಾದಂತವರಿಗೆ ಹಣವನ್ನು ನೀಡುವ ನಿಟ್ಟಿನಲ್ಲಿ ಶುಲ್ಕವನ್ನು ಪಡೆಯಲು ವಿಶ್ವವಿದ್ಯಾನಿಲಯದಿಂದ ಒಂದು ಸುತ್ತೋಲೆಯನ್ನು ಹೊರಡಿಸಲು ಸಾಧ್ಯವೇ? ಇದರಿಂದ ಬಡವರಿಗೆ ಸಹಾಯವಾಗುತ್ತದೆ ಎಂದು ಕೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ ಸುತ್ತೋಲೆಯನ್ನು ಹೊರಡಿಸಲು ಕ್ರಮಕೈಗೊಳ್ಳುವುದಾಗಿ ತಿಳಿಸಿದರು.

ಡಾ. ಶಿಲ್ಪಾ ಜೆ. ಅವರು ಮಾತನಾಡಿ ವಿದ್ಯಾರ್ಥಿ ಸಹಾಯ ನಿಧಿಗೆ ಎಂದು ರೂ. 100/-ಗಳನ್ನು ಸಂಗ್ರಹ ಮಾಡಲಾಗುತ್ತಿದೆ ಎಂದು ತಿಳಿಸಿದ್ದಾರೆ ಎಂದು ಹೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ ವಿದ್ಯಾರ್ಥಿ ಸಹಾಯ ನಿಧಿ ಹಾಗೂ ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ನಿಧಿ ಒಳಗಡೆ ಬರುತ್ತದೆ ಎಂದು ಹಣಕಾಸು ಅಧಿಕಾರಿಗಳು ತಿಳಿಸಿದಂತಹ ಚಟುವಟಿಕೆಗಳಿಗೆ ಮಾತ್ರ ಉಪಯೋಗಿಸಬಹುದಾಗಿದೆ ಎಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ತಾವು ಏನು ವಿದ್ಯಾರ್ಥಿ ಕ್ಷೇಮಾಭಿವೃದ್ಧಿಗಾಗಿ ಶುಲ್ಕವನ್ನು ಸಂಗ್ರಹಿಸುತ್ತಿದ್ದೀರೋ ಅದರಲ್ಲಿ ಅಕಾಲಿಕ ಮರಣಕ್ಕೆ ತುತ್ತಾದಂತವರಿಗೆ ಹಣವನ್ನು ನೀಡಲು

ಸಂಗ್ರಹಮಾಡಲಾಗುತ್ತಿದೆ ಎಂದು ತಿಳಿಸಿದರು. ಏಕೆಂದರೆ ಸರ್ಕಾರದ ನಿಯಮಗಳಡಿಯಲ್ಲಿಯೇ ಬರುತ್ತದೆ ಎಂದು ಸರ್ಕಾರದ ಸುತ್ತೋಲೆಯನ್ನು ನೀಡಿದ್ದಾರೆ ಎಂದು ಸಭೆಗೆ ತಿಳಿಸಿದರು.

ಶ್ರೀ ನಾಗರಾಜು ಸಿ. ಅವರು ಮಾತನಾಡಿ ಒಂದನೇ ತರಗತಿಯಿಂದ ದ್ವಿತೀಯ ಪಿಯುಸಿವರೆಗೆ ನೀಡಲು ಇಲಾಖೆಯು ಅವಕಾಶವನ್ನು ನೀಡಿದೆ. 4ನೇ ತರಗತಿಯಲ್ಲಿ ಓದುತ್ತಿದ್ದಂತಹ ಒಬ್ಬ ವಿದ್ಯಾರ್ಥಿಯ ಅಪ್ಪ-ಅಮ್ಮ ನಿಧನ ಹೊಂದಿದ್ದರು. ಆ ವಿದ್ಯಾರ್ಥಿಯ ಕಣ್ಣಿಗೆ ತೊಂದರೆಯಾಗಿದ್ದರಿಂದ BEO ಬಂದು ರೂ.1.20 ಲಕ್ಷಗಳನ್ನು ಚಿಕಿತ್ಸೆಗಾಗಿ ನೀಡಿದ್ದರು ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ ಅವರು ಯಾವ ನಿಧಿಯಿಂದ ಚಿಕಿತ್ಸೆಗಾಗಿ ಹಣವನ್ನು ಭರಿಸಿದ್ದರೆಂದು ತಿಳಿಸಿದರೆ ಕ್ರಮವನ್ನು ತೆಗೆದುಕೊಳ್ಳುವುದಾಗಿ ತಿಳಿಸಿ, ಜಿಲ್ಲಾಧಿಕಾರಿಗಳಿಗೆ ಹಾಗೂ ತಹಶೀಲ್ದಾರ್‌ರವರಿಗೆ ವಿಶೇಷ ಅಧಿಕಾರವಿರುತ್ತದೆ. ನಾನು ಕುಲಪತಿಯಾಗಿ ರೂ. 5/-ಗಳನ್ನು ಖರ್ಚು ಮಾಡಿದರು ಸಿಂಡಿಕೇಟ್ ಗಮನಕ್ಕೆ ತರಬೇಕಾಗುತ್ತದೆ ಎಂದು ತಿಳಿಸಿದರು.

ಶ್ರೀ ಮಹದೇಶು ಅವರು ಮಾತನಾಡಿ ವಿದ್ಯಾರ್ಥಿ ಸಹಾಯ ನಿಧಿಯೆಂದು ಬಡ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ರೂ. 100/-ಗಳನ್ನು ಸಂಗ್ರಹ ಮಾಡಲು ಸುತ್ತೋಲೆಯನ್ನು ಹೊರಡಿಸಿ ಎಂದು ಕೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ ರೂ.100/-ಗಳನ್ನು ವಿದ್ಯಾರ್ಥಿಗಳ ಸಹಾಯ ನಿಧಿಗೆ ಸಂಗ್ರಹಿಸಲು ಸಮ್ಮತಿಸಿದರು.

ಪ್ರೊ. ಶಬೀರ್ ಮೊಹಮ್ಮದ್ ಮುಸ್ತಾಫಾ ಅವರು ಮಾತನಾಡಿ 2021-22 ಹಾಗೂ 2022-23ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳ ಅನುಮೋದನೆಯ ವಿಷಯವನ್ನು ಅನಿವಾರ್ಯ ಕಾರಣಗಳಿಂದ ಮುಂದೂಡಲಾಗಿದೆ ಎಂದು ತಿಳಿಸಿದ್ದೀರಿ. ಯಾವ ಕಾರಣಕ್ಕಾಗಿ ಮುಂದೂಡಲಾಗಿತ್ತು ಎಂಬ ವಿಷಯವನ್ನು ತಿಳಿಸಬೇಕಾಗಿ ಕೇಳಿದರು.

ಹಣಕಾಸು ಅಧಿಕಾರಿಗಳು ಮಾತನಾಡಿ ಆಡಿಟ್ ಮತ್ತು ಅಕೌಂಟ್ಸ್ ಸಿಎ ಯಿಂದ ದೃಢೀಕರಣವಾಗಬೇಕೆಂಬ ಉದ್ದೇಶದಿಂದ 2021-22 ಮತ್ತು 2022-23 ಸಾಲಿನದು ಒಟ್ಟಾಗಿ ಆಡಿಟ್ ಮಾಡಿಸಲಾಗಿದೆ. ಆಡಿಟ್ ಸಿಎ ಯಿಂದ ಆಗುತ್ತಿರಲಿಲ್ಲ. ಎಜಿ ಮತ್ತು ಸ್ಟೇಟ್ ಅಕೌಂಟೆಂಟ್ ಅವರುಗಳಿಂದ ಮಾಡಿಸಲಾಗುತ್ತಿತ್ತು. ಈ ಸಲ ಮೊದಲ ಬಾರಿಗೆ ಸಿಎ ಯಿಂದ ಮಾಡಿಸಲಾಗಿರುತ್ತದೆ ಎಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ಮೊದಲು ಸಿಂಡಿಕೇಟ್ ಸಭೆಯ ಮುಂದೆ ಈ ಲೆಕ್ಕಾಚಾರಗಳನ್ನು ಅನುಮೋದನೆ ಪಡೆಯಬೇಕೆಂದರು.

ಹಣಕಾಸು ಅಧಿಕಾರಿಗಳು ಮಾತನಾಡಿ, ಸಿಂಡಿಕೇಟ್ ಸಭೆಯ ಅನುಮೋದನೆ ಪಡೆದ ನಂತರ ವಾರ್ಷಿಕ ಲೆಕ್ಕಪತ್ರಗಳು ಮತ್ತು ಪ್ರತಿ ವ್ಯವಹಾರಗಳನ್ನು ಸಹ ಹಣಕಾಸು ಸಮಿತಿಗೆ ಮಂಡಿಸಲಾಗುತ್ತಿತ್ತು. ಎಂದರು.

ಜಂಟಿ ನಿರ್ದೇಶಕರು ಮಾತನಾಡಿ, 2021-22 ಮತ್ತು 2022-23ನೇ ಸಾಲಿನ ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕ ಪತ್ರಗಳ ಬಗ್ಗೆ ಇದುವರೆವಿಗೂ ಏಕೆ ತೀರ್ಮಾನ ತೆಗೆದುಕೊಂಡಿರುವುದಿಲ್ಲ ಎಂದು ಸಭೆಯಲ್ಲಿ ಕೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಕುಲಪತಿಯಾಗಿ ಅಧಿಕಾರಿ ವಹಿಸಿಕೊಂಡ ಅವಧಿಯಲ್ಲಿ pending ಇತ್ತು. ಹಿಂದಿನ ಎರಡು ಸಿಂಡಿಕೇಟ್ ಸಭೆಯಲ್ಲಿ ಈ ವಿಷಯವನ್ನು ಮಂಡಿಸಲಾಗಿತ್ತು. ಇದನ್ನು ಅಧ್ಯಯನ ಮಾಡಲು ಕಾಲಾವಕಾಶ ನೀಡಬೇಕೆಂದು ಸಭೆಯಲ್ಲಿ ಪ್ರಸ್ತಾಪಿಸಿದ ಹಿನ್ನೆಲೆಯಲ್ಲಿ ಮುಂದೂಡಲಾಯಿತು. ತಡವಾಗಿರುವುದಕ್ಕೆ ಕಾರಣವೇನೆಂದರೆ, ಆಡಿಟ್ ಮತ್ತು ಅಕೌಂಟ್ಸ್ ನಿಗದಿತ ಅವಧಿಯಲ್ಲಿ ಪೂರ್ಣಗೊಳ್ಳುವುದಿಲ್ಲ. ಅಂದಾಜು ವೆಚ್ಚ ಮತ್ತು ಬಜೆಟ್ ಮಾಡಬಹುದು. ಇದು streamlilne ಆಗಲು ಎರಡು ವರ್ಷ ಬೇಕಾಗುತ್ತದೆ ಅದನ್ನು ಮಾಡುತ್ತಾರೆ. ಅವರು ಈಗ 2022-2023 ಪೂರ್ಣಗೊಂಡಿದೆ. 2023-2024 ಪ್ರಾರಂಭವಾಗಿದೆ. ಅವರು ಇನ್ನು ತೆಗೆದುಕೊಳ್ಳುವುದಿಲ್ಲ. ಮುಂದಿನ ವರ್ಷಕ್ಕೆ ತೆಗೆದುಕೊಳ್ಳುತ್ತಾರೆ. ಈ ರೀತಿ ಒಂದೊಂದು ಸಾಲಿನ ಲೆಕ್ಕಪರಿಶೋಧನೆಯನ್ನು ಮಾಡಿಕೊಂಡು ಬರುತ್ತಾರೆ. ಅದೇ ರೀತಿ ಹಣಕಾಸು ಶಾಖೆಯಲ್ಲಿ ಪ್ರತಿಕ್ರಿಯೆ ಕೂಡ ತಡವಾದಾಗ ಆಡಿಟ್‌ನವರು ಕೂಡ ವಿಳಂಬ ಮಾಡುತ್ತಾರೆ. ಆಡಿಟ್ ಆಗುತ್ತಿರುವಾಗ ಲೆಕ್ಕಾಚಾರದ ಮಾಹಿತಿ ಕೋರಿದಾಗ ಹಣಕಾಸು ಶಾಖೆಯವರು ತಡವಾಗಿ ನೀಡಿದ್ದಾಗ, ಆಡಿಟ್ ಸಹ ತಡವಾಗಿ ಆಗುತ್ತದೆ ಎಂದು ತಿಳಿಸಿದರು.

ಶ್ರೀ ನಾಗರಾಜು.ಹೆಚ್.ಎಸ್ ಮಾತನಾಡಿ, ಪ್ರತಿ ವರ್ಷವೂ ಆಡಿಟ್ ಮಾಡಿಸಬೇಕೆಂದರು.

ಹಣಕಾಸು ಅಧಿಕಾರಿಗಳು ಮಾತನಾಡಿ, ಪ್ರತಿ ವರ್ಷವೂ ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕ ಪತ್ರಗಳನ್ನು ಸ್ಟೇಟ್ ಅಕೌಂಟೆಂಟ್ ಅವರಿಂದ ಮಾಡಿಸಲಾಗುತ್ತದೆ. ಸಿಎ ಅವರಿಂದ ಹೊಸದಾಗಿ ಪರಿಶೀಲನೆ ಮಾಡಿಸುತ್ತಿರುವುದರಿಂದ ತಡವಾಗಿದೆ. ಮುಂದಿನ ಸಾಲಿನಿಂದ ನಿಗದಿತ ಅವಧಿಯಲ್ಲಿ ಪೂರ್ಣಗೊಳ್ಳುವುದು ಎಂದು ತಿಳಿಸಿದರು.

ಪ್ರೊ. ಶಬ್ಬೀರ್ ಮೊಹಮದ್ ಮುಸ್ತಾಫ ಮಾತನಾಡಿ, ವಾರ್ಷಿಕ ಲೆಕ್ಕಪತ್ರದಲ್ಲಿ ಚೈನೀಸ್ ಪ್ರೋಗ್ರಾಂ ಎಂದು ನಮೂದಾಗಿದೆ. ಅದರ ಬಗ್ಗೆ ವಿವರಣೆ ನೀಡಬೇಕಂದು ಕೋರಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಮೈವಿವಿ ಯಲ್ಲಿ ಚೈನೀಸ್ ಜಾಯಿಂಟ್ ಪ್ರೋಗ್ರಾಂ ಇದ್ದು, ಇದು ಗಣಕ ವಿಜ್ಞಾನದಲ್ಲಿ ಬಿ.ಟೆಕ್ ಮಾಡುವಂತಹದು. ಈ ಪ್ರೋಗ್ರಾಂ ತುಂಬಾ ಚೆನ್ನಾಗಿ ನಡೆಯುತ್ತಿತ್ತು. ಕೋವಿಡ್-19 ಬಂದ ನಂತರ ವಿದ್ಯಾರ್ಥಿಗಳನ್ನು ಒಂದು ವರ್ಷ ಪೂರ್ಣಗೊಳಿಸಿದ ನಂತರ ಅವರವರ ದೇಶಕ್ಕೆ ಕಳುಹಿಸಲಾಯಿತು. ತದನಂತರ ಆ ವಿದ್ಯಾರ್ಥಿಗಳಿಗೆ ಆನ್‌ಲೈನ್ ಮುಖಾಂತರ ಬೋಧನಾ ತರಗತಿಗಳನ್ನು ತೆಗೆದುಕೊಳ್ಳಲಾಯಿತು. ವೀಸಾ ತೊಂದರೆ ಮತ್ತು ಚೀನಾ ದೇಶದಲ್ಲೂ ಕೋವಿಡ್‌ವಿದ್ದ ಕಾರಣದಿಂದ ಈ ಪ್ರೋಗ್ರಾಂ ಅನ್ನು ನಿಲ್ಲಿಸಲಾಯಿತು. ಮೊನ್ನೆ ಅಂದರೆ 15 ದಿನಗಳ ಹಿಂದೆ china delegates ಭೇಟಿ ಮಾಡಿ, ಈ ಪ್ರೋಗ್ರಾ ಪುನಃ ಪ್ರಾರಂಭಿಸಬೇಕೆಂದು ಕೋರಿರುತ್ತಾರೆ. ವಿದ್ಯಾರ್ಥಿಗಳಿಗೆ ವೀಸಾ ನೀಡಿದ್ದರೆ ಮತ್ತೆ ಪ್ರಾರಂಭಿಸಬಹುದು. ಆ ವಿದ್ಯಾರ್ಥಿಗಳು ಎರಡು ವರ್ಷ ಇಲ್ಲಿ ಅಧ್ಯಯನ ಮಾಡುತ್ತಾರೆ. ಇನ್ನುಳಿದ ಎರಡು ವರ್ಷ ಅವರುಗಳ ವಿಶ್ವವಿದ್ಯಾನಿಲಯದಲ್ಲಿ ಅಧ್ಯಯನ ಮಾಡುತ್ತಾರೆ. ಇದು Exchange Programme ಆಗಿದೆ. ಪ್ರಸ್ತುತ 06 ಸಂಶೋಧನಾ ಆಭ್ಯರ್ಥಿಗಳು ಮಾತ್ರ ವಿದ್ಯಾರ್ಥಿನಿಲಯದಲ್ಲಿದ್ದಾರೆ ಎಂದು ಮಾಹಿತಿ ನೀಡಿದರು.

ಡಾ. ಬಸವರಾಜು.ಸಿ ಮಾತನಾಡಿ, 06 ಆಭ್ಯರ್ಥಿಗಳಿಂದನೇ ವಿದ್ಯಾರ್ಥಿನಿಲಯ run ಆಗುತ್ತಿದೆಯೇ ಎಂದು ಕೇಳಿದರು.

ಕುಲಸಚಿವರು ಮಾತನಾಡಿ, ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿಗಳು ಇದ್ದಾರೆ. ಬೇರೆ ದೇಶದ ವಿದೇಶಿ ವಿದ್ಯಾರ್ಥಿಗಳು ಸಹ ಇದ್ದಾರೆ. ವೆಸ್ಟ್ ಏಷಿಯನ್ ಅವರು ಇದ್ದಾರೆ. Linguistics ನಲ್ಲೂ ವಿದೇಶಿ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆಂದು ತಿಳಿಸಿದರು.

ಡಾ. ಬಸವರಾಜು.ಸಿ ಮಾತನಾಡಿ, ಒಟ್ಟಿನಲ್ಲಿ ವಿದ್ಯಾರ್ಥಿನಿಲಯ run ಆದರೆ ಸಾಕೆಂದು ತಿಳಿಸಿದರು.

ಶ್ರೀ ನಾಗರಾಜು.ಸಿ ಮಾತನಾಡಿ, Linguistics ನಲ್ಲಿ ವಿದೇಶಿ ವಿದ್ಯಾರ್ಥಿಗಳ ಪ್ರವೇಶಾತಿಯು ಕಡಿಮೆಯಾಗಿದೆ ಎಂದರು.

ಕುಲಸಚಿವರು ಮಾತನಾಡಿ, ವಿದ್ಯಾರ್ಥಿನಿಲಯದಲ್ಲಿ ಮಹಿಳೆಯರ ಮತ್ತು ಪುರುಷರ ಬ್ಲಾಕ್‌ಗಳು ಪ್ರತ್ಯೇಕವಾಗಿದೆ. ಪ್ರಸ್ತುತ Linguistics ನಲ್ಲಿ 04 ವಿದೇಶಿ ವಿದ್ಯಾರ್ಥಿಗಳಿರುತ್ತಾರೆ. ಇದರಲ್ಲಿ ವಿಶೇಷ ಪ್ರಕರಣವೆಂದು ವಿದೇಶ ವಿದ್ಯಾರ್ಥಿಗಳಿಗೆ ಪ್ರವೇಶಾತಿ ಪಡೆಯಲು ಮಾನ್ಯ ಕುಲಪತಿಗಳು ಅನುಮೋದನೆ ನೀಡಿರುತ್ತಾರೆ. ಆ ವಿದ್ಯಾರ್ಥಿಯು ವೀಸಾ ಪಡೆದು ತರಗತಿಗೆ ಹಾಜರಾಗಲು ಕನಿಷ್ಠ 02 ತಿಂಗಳು ತಡವಾಗಿದೆ ಎಂದು ತಿಳಿಸಿದರು.

ಶ್ರೀ ನಾಗರಾಜು.ಸಿ ಮಾತನಾಡಿ, ವಿದೇಶಿ ವಿದ್ಯಾರ್ಥಿಗಳ ಪ್ರವೇಶಾತಿ ಪ್ರಮಾಣವು ಕಡಿಮೆಯಾದರೆ, ವಿಶ್ವವಿದ್ಯಾನಿಲಯದ ಆದಾಯವು ಕಡಿಮೆಯಾಗುತ್ತದೆಯಲ್ಲವೇ ಎಂದರು.

ಕುಲಸಚಿವರು ಮಾತನಾಡಿ, ಮೊದಲು 300 ರಷ್ಟು ವಿದೇಶಿ ವಿದ್ಯಾರ್ಥಿಗಳಿದ್ದರು. ಪ್ರಸ್ತುತ 60 ವಿದ್ಯಾರ್ಥಿಗಳು ಮಾತ್ರ ಇದ್ದಾರೆ. ಪ್ರವೇಶಾತಿ ಪ್ರಮಾಣದ ಕಡಿಮೆಗೆ ಕೋವಿಡ್ ಮತ್ತು ಆನ್‌ಲೈನ್ ಕೋರ್ಸುಗಳು ಪ್ರಾರಂಭವಾಗಿರುವುದು ಕಾರಣವಾಗಿದೆ ಎಂದರು.

ಮಾನ್ಯ ಕುಲಪತಿಗಳು ಮಾತನಾಡಿ, ಮೊನ್ನೆ Home Affairs ನಮ್ಮಲ್ಲಿ ಬಂದಿದ್ದರು. ವ್ಯಾಸಂಗ ಮಾಡುವ ವಿದೇಶಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯದಲ್ಲಿ ಪ್ರವೇಶಾತಿ ನೀಡುತ್ತೇವೆ ಹೊರತು ರಾತ್ರಿ ಹೊತ್ತು ಎಲ್ಲಿ ಹೋಗುತ್ತಾರೆ. ಏನು ಮಾಡುತ್ತಾರೆ ಎಂಬುದು ಗೊತ್ತಿರುವುದಿಲ್ಲ. ಪ್ರತಿ ಮಾಹಿತಿಯು ಪೋಲೀಸ್ ಅವರಿಗೆ

ತಿಳಿದಿರುತ್ತದೆ. ಪರೀಕ್ಷೆ ನಡೆಯುತ್ತಿರುವಾಗ ಕಾರಣಾಂತರಗಳಿಂದ ಪರೀಕ್ಷೆಯನ್ನು ಮುಂದೂಡಲಾಗುತ್ತದೆ. ವೀಸಾದ ಅವಧಿಯು ಸಹ ಪರೀಕ್ಷೆ ಮುಗಿಯುವವರೆಗೆ ಮಾತ್ರ ಇರುತ್ತದೆ. ಪರೀಕ್ಷೆ ಮುಂದೂಡಿದಾಗ ಪೋಲೀಸ್ ನಮ್ಮನ್ನು ವಿಚಾರಣೆ ಮಾಡುತ್ತಾರೆ. ವಿದೇಶಿ ವಿದ್ಯಾರ್ಥಿಗಳಿಗೆ ಒಂದು ತಿಂಗಳು ಸಹ ಮುಖ್ಯವಾಗಿರುತ್ತದೆ. ಒಂದೊಂದು ಬಾರಿ ನಿಗದಿತ ಅವಧಿಯಲ್ಲಿ ಅಂಕಪಟ್ಟಿ ಮತ್ತು Transcript ನೀಡಲಾಗುವುದಿಲ್ಲ. ಇವೆಲ್ಲ ತೊಂದರೆಗಳನ್ನು ವಿದೇಶಿ ವಿದ್ಯಾರ್ಥಿಗಳು ಅನುಭವಿಸುತ್ತಾರೆ. ಈ ಹಿನ್ನೆಲೆಯಲ್ಲಿ ವಿದೇಶಿ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸಿಂಡಿಕೇಟ್ ಸಭೆಯ ನಿರ್ಣಯವನ್ನು ಕಾಯ್ದಿರಿಸಿ ಅಂಕಪಟ್ಟಿಯನ್ನು ವಿತರಿಸಲಾಯಿತು. ನಂತರ ಸಿಂಡಿಕೇಟ್ ಸಭೆಯ ಅನುಮೋದನೆ ಪಡೆಯಲಾಯಿತು. ಮೊದಲು ವಿಶ್ವವಿದ್ಯಾನಿಲಯಗಳ ಸಂಖ್ಯೆ ಕಡಿಮೆಯಿತ್ತು. ಈಗ ಸುಮಾರು ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸಲಾಗಿದೆ. ಅವರುಗಳಿಗೆ ಅನುಕೂಲವಾಗುವ ವಿಶ್ವವಿದ್ಯಾನಿಲಯವನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಆನ್‌ಲೈನ್ ಕೋರ್ಸುಗಳ ಮುಖಾಂತರ ವ್ಯಾಸಂಗ ಮಾಡುತ್ತಾರೆ. ಇಂತಹ ಕೆಲವು ಕಾರಣಗಳಿಂದ ವಿದೇಶಿ ವಿದ್ಯಾರ್ಥಿಗಳ ಪ್ರವೇಶಾತಿ ಪ್ರಮಾಣವು ಕಡಿಮೆಯಾಗಿದೆ. ಆದರೂ ICSR Fellowship ನ ವಿದ್ಯದಾರ್ಥಿಗಳಿದ್ದಾರೆಂದು ತಿಳಿಸಿದರು.

ಡಾ. ಟಿ.ಆರ್.ಚಂದ್ರಶೇಖರ್ ಮಾತನಾಡಿ, ಎಲ್‌ಐಸಿ ಯಲ್ಲಿ 200 ಕೋಟಿ ಇತ್ತು. 200 ರಿಂದ 170 ಕೋಟಿಯಾಯ್ತು. 170 ರಿಂದ 117 ಕೋಟಿಗೆ ಬಂತು. 117 ರಿಂದ 80 ಅಥವಾ 90 ಕೋಟಿಗೆ ಬರಬಹುದು. ಈ ರೀತಿಯಾದರೆ ಮುಂದಿನ ಭವಿಷ್ಯವೇನು ಎಂದು ಕೇಳುತ್ತಾ, ಮುಂದಿನ ದಿನಗಳಲ್ಲಿ ಮತ್ತೆ ಎಲ್‌ಐಸಿ ಗೆ ಹಣ ಡಿಪಾಸಿಟ್ ಮಾಡಬಹುದೇ ಎಂದರು.

ಮಾನ್ಯ ಕುಲಪತಿಗಳು ಮಾತನಾಡಿ, ಮೊದಲು ಒಟ್ಟು 500 ಕೋಟಿ ಇತ್ತು. ಈ ಮೊಬಲಗನ್ನು ಸಹ ಆದಾಯವೆಂದು ತೋರಿಸಲಾಗಿತ್ತು. ನಂತರ ಇದು ಆದಾಯವಲ್ಲ ಎಂದು declare ಮಾಡಿ, ಈ ಮಾಹಿತಿಯನ್ನು ಶ್ರೀ ಜಾಫರ್, ಆರ್ಥಿಕ ಇಲಾಖೆರವರ ಗಮನಕ್ಕೂ ತರಲಾಯಿತು. ನಂತರ ಈ ಮೊಬಲಗನ್ನು ಬದಿಗಿಡಲಾಗಿದೆ. ಆದರೂ ಸಹ ನಿಮ್ಮ ಹತ್ತಿರ ಇರುವ ಹಣವನ್ನು ಮೊದಲು ಉಪಯೋಗಿಸಿಕೊಳ್ಳಿ ಎಂದು ಹೇಳುತ್ತಾರೆ.

ಶ್ರೀ ನಾಗರಾಜು ಹೆಚ್.ಎಸ್ ಮಾತನಾಡಿ, ಮುಂದಿನ ದಿನಗಳಲ್ಲಿ ಎಲ್‌ಐಸಿ ಮೊತ್ತವು zero ಆಗಬಹುದೇ ಎಂದರು.

ಮಾನ್ಯ ಕುಲಪತಿಗಳು ಮಾತನಾಡಿ, zero ಆದರೆ, ಎಲ್ಲರಿಗೂ ಪಿಂಚಣಿ ಪಾವತಿಸಲು ತೊಂದರೆಯಾಗುತ್ತದೆ.

ಶ್ರೀ ನಾಗರಾಜು ಹೆಚ್.ಎಸ್ ಮಾತನಾಡಿ, ಎಲ್‌ಐಸಿ ಡೆಪಾಸಿಟ್ ಮೊತ್ತವನ್ನು ಹೆಚ್ಚಿಗೆ ಮಾಡಲು ಆಗುವುದಿಲ್ಲವೇ ಎಂದರು.

ಮಾನ್ಯ ಕುಲಪತಿಗಳು ಮಾತನಾಡಿ, ಯಾವುದೇ ರೀತಿಯ ಆದಾಯವಿರುವುದಿಲ್ಲವೆಂದರು.

ಶ್ರೀ ಗೋಕುಲ್ ಗೋವರ್ಧನ್ ಮಾತನಾಡಿ, ಸರ್ಕಾರದಿಂದ ನಿವೃತ್ತಿ ಅನುದಾನ ಬರುತ್ತಿಲ್ಲವೆ, ಸುಮಾರು ಎಷ್ಟು ವರ್ಷದಿಂದ ಅನುದಾನ ಬರುತ್ತಿಲ್ಲ ಎಂದರು.

ಮಾನ್ಯ ಕುಲಪತಿಗಳು ಮಾತನಾಡಿ, ಪ್ರತಿ ವರ್ಷ ನಿವೃತ್ತಿ ಹೊಂದಿದ್ದವರಿಗೆ ಪಿಂಚಣಿ ಮೊತ್ತ ಪಾವತಿಸಲು 127 ಕೋಟಿ ಬೇಕಾಗುತ್ತದೆ. ಆದರೆ, ಸರ್ಕಾರದಿಂದ 50 ಕೋಟಿಗಳನ್ನು ಮಾತ್ರ ನೀಡುತ್ತಿದ್ದಾರೆ ಎಂದು ಸ್ಪಷ್ಟ ಮಾಹಿತಿ ತಿಳಿಸಿದರು.

ಡಾ. ಬಸವರಾಜು.ಸಿ ಮಾತನಾಡಿ, ಸರ್ಕಾರವು ನಿವೃತ್ತಿ ಅನುದಾನ ನೀಡುತ್ತಿದೆ. ಆದರೆ ಅರ್ಧಕ್ಕರ್ಧ ಮಾತ್ರ ನೀಡುತ್ತಿದೆ ಎಂದರು.

ಮಾನ್ಯ ಕುಲಪತಿಗಳು ಮಾತನಾಡಿ, ಮೊದಲು ಸರ್ಕಾರದಿಂದ ಪಿಂಚಣಿ, ಬ್ಲಾಕ್ ಗ್ರ್ಯಾಂಟ್‌ಗೆ ಎಲ್ಲಾ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿತ್ತು. ಯಾವಾಗ ಹೆಚ್.ಆರ್.ಎಂ.ಎಸ್. ಅನುಷ್ಠಾನಗೊಳಿಸಲಾಯಿತು, ಆಗ ಖಾಯಂ ಆಗಿ ಕಾರ್ಯನಿರ್ವಹಿಸುತ್ತಿರುವ ಉದ್ಯೋಗಿಗಳಿಗೆ ಮಾತ್ರ ಅನುದಾನ ನೀಡುತ್ತಿದೆ ಹೊರತು ಪಿಂಚಣಿದಾರರಿಗೆ ಅನುದಾನ ನೀಡುತ್ತಿಲ್ಲ. ನಮ್ಮ ವಿಶ್ವವಿದ್ಯಾನಿಲಯದ ವತಿಯಿಂದ ಸರ್ಕಾರಕ್ಕೆ 2-3 ಬಾರಿ ನಿಯೋಗವು ಭೇಟಿ ನೀಡಿ, ಪಿಂಚಣಿ ಮೊತ್ತವನ್ನು ವ್ಯವಸ್ಥೆ

ಮಾಡಿಕೊಡಬೇಕೆಂದು ಕೋರಲಾಗಿದೆ. ಸರ್ಕಾರವು ಇದಕ್ಕೆ ಒಪ್ಪಿಗೆ ಸೂಚಿಸಿದೆ. ಆದರೆ ಇದುವರೆವಿಗೂ ಪಿಂಚಣಿ ಅನುದಾನ ಬಿಡುಗಡೆಯಾಗಿರುವುದಿಲ್ಲ.

ಶ್ರೀ ಗೋಕುಲ್ ಗೋವರ್ಧನ್ ಮಾತನಾಡಿ, ಸರ್ಕಾರದಿಂದ ಪಿಂಚಣಿ ಅನುದಾನ ಬಿಡುಗಡೆಯಾದರೆ streamline ಆಗುತ್ತದೆಯೆಂದರು.

ಡಾ ಟಿ.ಆರ್.ಚಂದ್ರಶೇಖರ್ ಮಾತನಾಡಿ, ಬಜೆಟ್ ಮಂಡನೆ ಆಗುವ ಮೊದಲು ಕುಲಪತಿಯವರ ಅಧ್ಯಕ್ಷತೆಯಲ್ಲಿ ವಿಶ್ವವಿದ್ಯಾನಿಲಯದಿಂದ ನಿಯೋಗವೊಂದು ಮಾನ್ಯ ಮುಖ್ಯ ಮಂತ್ರಿಯವರನ್ನು ಭೇಟಿ ಮಾಡುವುದು ಸೂಕ್ತವೆಂದರು.

ಮಾನ್ಯ ಕುಲಪತಿಗಳು ಮಾತನಾಡಿ, ಹಿಂದಿನ ಸಿಂಡಿಕೇಟ್ ಸಭೆಯಲ್ಲೂ ಪ್ರಸ್ತಾಪಿಸಲಾಗಿ, ಸರ್ಕಾರದಿಂದ ನಾಮನಿರ್ದೇಶನಗೊಂಡ ಸಿಂಡಿಕೇಟ್ ಸದಸ್ಯರುಗಳನ್ನೊಳಗೊಂಡಂತೆ ನಿಯೋಗ ರಚಿಸಿಕೊಂಡು ಮಾನ್ಯ ಮುಖ್ಯ ಮಂತ್ರಿಯವರನ್ನು ಭೇಟಿ ಮಾಡೋಣವೆಂದು ತಿಳಿಸಿದೆ ಎಂದರು.

ಡಾ. ಬಸವರಾಜು.ಸಿ ಮಾತನಾಡಿ, ಈ ಸಂಬಂಧ ಮಾನ್ಯ ಮುಖ್ಯ ಮಂತ್ರಿಯವರಿಂದ ದಿನಾಂಕ ಮತ್ತು ಸಮಯವನ್ನು ನಿಗದಿಪಡಿಸಿಕೊಂಡು ಎಲ್ಲಾ ಸಿಂಡಿಕೇಟ್ ಸದಸ್ಯರುಗಳು ಒಟ್ಟಾಗಿ ಭೇಟಿ ಮಾಡೋಣವೆಂದರು.

ಮಾನ್ಯ ಕುಲಪತಿಗಳು ಮಾತನಾಡಿ, ತಾವುಗಳು ಮಾನ್ಯ ಮುಖ್ಯ ಮಂತ್ರಿಯವರಿಂದ ದಿನಾಂಕ ಮತ್ತು ಸಮಯವನ್ನು ನಿಗದಿಪಡಿಸಿಕೊಂಡು ತಿಳಿಸಿದೊಡನೆ ಭೇಟಿ ನೀಡಲು ಸಿದ್ಧವಿರುತ್ತೇವೆಂದು ತಿಳಿಸಿದರು.

ಡಾ.ಟಿ.ಆರ್.ಚಂದ್ರಶೇಖರ್ ಮಾತನಾಡಿ, ಬಜೆಟ್ ಮಂಡನೆ ಮುನ್ನವೇ ಭೇಟಿ ಮಾಡಿ, ಪ್ರಸ್ತಾವನೆ ಸಲ್ಲಿಸೋಣವೆಂದರು.

ಮಾನ್ಯ ಕುಲಪತಿಗಳು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ 1784 ಮಂದಿ ಪಿಂಚಣಿದಾರರಿದ್ದಾರೆ. ಇವರುಗಳಿಗೆ ಪ್ರತಿ ತಿಂಗಳು ಏಳುವರೆ ಕೋಟಿ ಬೇಕಾಗುತ್ತದೆ. ಈ ಅನುದಾನವನ್ನು ಸರ್ಕಾರವು ಬಿಡುಗಡೆ ಮಾಡಿದರೆ, ಅರ್ಧ ಸಮಸ್ಯೆ ಬಗೆಹರಿಯುತ್ತದೆ ಎಂದರು.

ಡಾ. ಬಸವರಾಜು.ಸಿ ಮಾತನಾಡಿ, ಪ್ರಸ್ತಾವನೆಯೊಂದಿಗೆ ಪ್ರಸ್ತುತ ಆರ್ಥಿಕ ಸ್ಥಿತಿ-ಗತಿಗಳ ಬಗ್ಗೆ ಮನವರಿಕೆ ಸಹ ಮಾಡಿಕೊಡಬೇಕೆಂದರು.

ಡಾ.ಟಿ.ಆರ್.ಚಂದ್ರಶೇಖರ್ ಮಾತನಾಡಿ, ದೂರ ಶಿಕ್ಷಣವು 15 ಲಕ್ಷದಿಂದ 11 ಲಕ್ಷಕ್ಕೆ ಇಳಿಮುಖವಾಗಿದೆ. ಏಕೆ ಕಡಿಮೆಯಾಗಿದೆ. ಇದರ ಮೇಲೆ ಯಾರದಾದರೂ ನಿಯಂತ್ರಣ/ಮಾನಿಟರಿಂಗ್ ಇದೆಯೇ ತಿಳಿಸಬೇಕೆಂದರು.

ಕುಲಸಚಿವ (ಪರೀಕ್ಷಾಂಗ) ಮಾತನಾಡಿ, ದೂರ ಶಿಕ್ಷಣವನ್ನು 2019-2020 ರಲ್ಲಿ ಪ್ರಾರಂಭಿಸಲಾಯಿತು. ಸರ್ಕಾರದ ಆದೇಶದ ಮೇರೆಗೆ 2020-2021 ರಲ್ಲಿ ದೂರ ಶಿಕ್ಷಣಕ್ಕೆ ಪ್ರವೇಶಾತಿ ಮಾಡಿಕೊಳ್ಳುವುದನ್ನು ನಿಲ್ಲಿಸಲಾಯಿತು. ಒಟ್ಟು 506 ವಿದ್ಯಾರ್ಥಿಗಳು ಪ್ರವೇಶಾತಿ ಪಡೆದಿದ್ದರು. ಈಗ 14 ವಿದ್ಯಾರ್ಥಿಗಳಿದ್ದು, ಈ ವಿದ್ಯಾರ್ಥಿಗಳಿಗೆ ಮಾತ್ರ ರಿಪೀಟರ್ ಆಗಿ ಪರೀಕ್ಷೆ ತೆಗೆದುಕೊಳ್ಳಲು ಅವಕಾಶ ನೀಡಲಾಗಿದೆ ಎಂದರು.

ಡಾ.ಟಿ.ಆರ್.ಚಂದ್ರಶೇಖರ್ ಮಾತನಾಡಿ, 26 ಕೋಟಿಯಿರುವುದು 7 ಕೋಟಿಗೆ ಅಂದರೆ ಮೂರುವರೆ ಪಟ್ಟು ಅಂದರೆ 19 ಕೋಟಿ ಕಡಿಮೆಯಾಗಿದೆ. ಇದು ಯಾವ ಮೊತ್ತವೆಂದು ಕೇಳಿದರು.

ಹಣಕಾಸು ಅಧಿಕಾರಿಗಳು ಮಾತನಾಡಿ, ಇದು ಎಲ್‌ಐಸಿಯಲಿದ್ದ ಪಿಂಚಣಿಯ ಮೊತ್ತವೆಂದು ಸ್ಪಷ್ಟೀಕರಿಸಿದರು.

ಡಾ.ಟಿ.ಆರ್.ಚಂದ್ರಶೇಖರ್ ಮಾತನಾಡಿ, ಪುಟ ಸಂಖ್ಯೆ 112 ರಲ್ಲಿ ಸೆಕ್ಯೂರಿಟಿ ವೇತನಕ್ಕೆ ಸಂಬಂಧಿಸಿದಂತೆ previous 4 ಕೋಟಿ 40 ಲಕ್ಷ ಇತ್ತು. ಅದರ ನಂತರ 5 ಕೋಟಿ 55 ಲಕ್ಷ ಆಗಿದೆ. ಅದು ಹೇಗೆಂದು ಪ್ರಶ್ನಿಸಿದರು.

ಹಣಕಾಸು ಅಧಿಕಾರಿಗಳು ಮಾತನಾಡಿ, ಅವರುಗಳಿಗೆ ವಿಡಿಎ ಜಾಸ್ತಿಯಾಗುತ್ತಾ, ವೇತನ ಹೆಚ್ಚಾಗುತ್ತದೆ ಮತ್ತು ಇವರುಗಳಿಗೆ ಕಾರ್ಮಿಕ ಇಲಾಖೆಯು ಕನಿಷ್ಠ ವೇತನವನ್ನು ನಿಗದಿಪಡಿಸಿರುತ್ತದೆ. ಕೆಲವೊಂದು ಸಂದರ್ಭದಲ್ಲಿ ಸೆಕ್ಯೂರಿಟಿ ಸಂಖ್ಯೆಯಲ್ಲೂ ವ್ಯತ್ಯಾಸವಾಗುತ್ತದೆ.

ಡಾ.ಟಿ.ಆರ್.ಚಂದ್ರಶೇಖರ್ ಮಾತನಾಡಿ, 200 ಸೆಕ್ಯೂರಿಟಿಯವರನ್ನು ತೆಗೆದುಕೊಂಡಿರುತ್ತೀರಿ. ಅಲ್ಲಿ ವಾಸ್ತವವಾಗಿ 100 ಸೆಕ್ಯೂರಿಟಿಗಳು ಇರುವುದಿಲ್ಲ. ಆದರೆ, ಆ 200 ಮಂದಿ ಸೆಕ್ಯೂರಿಟಿಯವರ ಸಹಿಯಿರುತ್ತದೆ ಎಂದು ಗಮನಕ್ಕೆ ಬಂದಿದೆ. ಅದರ ನಿಯಂತ್ರಣ ಹೇಗೆ ಎಂದು ಕೇಳಿದರು.

ಹಣಕಾಸು ಅಧಿಕಾರಿಗಳು ಮಾತನಾಡಿ, ಸೆಕ್ಯೂರಿಟಿಗಳ ಹಾಜರಾತಿಯ ಉಸ್ತುವಾರಿಯನ್ನು ಇಂಜಿನಿಯರಿಂಗ್ ವಿಭಾಗಕ್ಕೆ ವಹಿಸಲಾಗಿದೆ ಹಾಗೂ ಸೆಕ್ಯೂರಿಟಿ ಸೂಪರ್‌ವೈಸರ್ ಸಹ ಇದ್ದಾರೆ ಎಂದರು.

ಡಾ.ಟಿ.ಆರ್.ಚಂದ್ರಶೇಖರ್ ಮಾತನಾಡಿ, ಇಂತಹ ನಿಯಂತ್ರಣಗಳಿಗೆ ಹಿಂದಿನ ಸಭೆಯಲ್ಲಿ ಚರ್ಚಿಸಿದಂತೆ ಸಿಸಿ ಕ್ಯಾಮರ ಅಳವಡಿಸುವುದು ಮತ್ತು ಬಯೋಮೆಟ್ರಿಕ್ ಕಡ್ಡಾಯ ಮಾಡಿದ್ದರೆ, ಎಲ್ಲವೂ streamline ಆಗುತ್ತದೆ ಎಂದರು.

ಡಾ. ಸಿ.ಬಸವರಾಜು ಮಾತನಾಡಿ, ಬಯೋಮೆಟ್ರಿಕ್ ಕಡ್ಡಾಯಗೊಳಿಸುವುದು ಒಳ್ಳೆಯದು ಎಂದರು.

ಶ್ರೀ ಗೋಕುಲ್ ಗೋವರ್ಧನ್ ಮಾತನಾಡಿ, ಬಯೋಮೆಟ್ರಿಕ್‌ನೊಂದಿಗೆ ಸಿಸಿ ಕ್ಯಾಮರವನ್ನು ಸಹ ಅಳವಡಿಸಬೇಕೆಂದರು.

ಡಾ. ಸಿ.ಬಸವರಾಜು ಮಾತನಾಡಿ, ಸಿಸಿ ಕ್ಯಾಮರವನ್ನು ಎಲ್ಲಾ ವಿಭಾಗಗಳಲ್ಲೂ ಅಳವಡಿಸಲಾಗಿದೆ. ಆದರೆ ಕಾರ್ಯನಿರ್ವಹಿಸುತ್ತಿಲ್ಲ. ಇವುಗಳನ್ನು ಚಾಲ್ತಿಗೊಳಿಸಬೇಕು ಎಂದರು.

ಡಾ.ಟಿ.ಆರ್.ಚಂದ್ರಶೇಖರ್ ಮಾತನಾಡಿ, ಬಯೋಮೆಟ್ರಿಕ್ ಮಾಡುವುದರಿಂದ, ಹಾಜರಾತಿ ವಿವರ ಪಡೆಯಬಹುದು ಮತ್ತು ವೇತನ ಮಾಡುವುದಕ್ಕೂ ಸಹಾಯಕವಾಗುತ್ತದೆ ಎಂದರು.

ಮಾನ್ಯ ಕುಲಪತಿಗಳು ಮಾತನಾಡಿ, ಎಲ್ಲರೂ ಸಹಕಾರ ನೀಡಿದರೆ ಕಾರ್ಯಗತಗೊಳಿಸುತ್ತೇನೆ ಎಂದು ತಿಳಿಸುತ್ತಾ, ಕೆಲವೊಂದು ವಿಭಾಗದಲ್ಲಿ ವಿದ್ಯಾರ್ಥಿಗಳು ಹಾಜರಾತಿ ಪುಸ್ತಕದಲ್ಲಿ ಸಹಿ ಮಾಡಿರುವುದಿಲ್ಲ. ಆದ್ದರಿಂದ ಬಯೋಮೆಟ್ರಿಕ್ ಹಾಜರಾತಿಯನ್ನು ವಿದ್ಯಾರ್ಥಿಗಳಿಗೆ, ಅಧ್ಯಾಪಕರುಗಳಿಗೆ ಮತ್ತು ಅಧ್ಯಾಪಕೇತರ ಉದ್ಯೋಗಿಗಳಿಗೆ ಮತ್ತು ಸಂಶೋಧನಾ ವಿದ್ಯಾರ್ಥಿಗಳಿಗೂ ಕಡ್ಡಾಯಗೊಳಿಸಬೇಕು. ಅಂದರೆ ಪ್ರತಿಯೊಬ್ಬರಿಗೂ ಬಯೋಮೆಟ್ರಿಕ್ ಹಾಜರಾತಿಯನ್ನು ಕಡ್ಡಾಯಗೊಳಿಸಬೇಕೆಂದರು.

ಡಾ. ಸಿ.ಬಸವರಾಜು ಮಾತನಾಡಿ, ಹಾಜರಾಗದ ಒಬ್ಬ ಸಂಶೋಧನಾ ಅಭ್ಯರ್ಥಿಯ ಸಹಿಯನ್ನು ಮತ್ತೊಬ್ಬರು ಸಹಿ ಮಾಡುತ್ತಿರುವುದು ಕೆಲವೊಂದು ವಿಭಾಗದಲ್ಲಿ ನಿರಂತರವಾಗಿ ನಡೆದು ಬಂದಿದೆಯೆಂದರು.

ಡಾ.ಟಿ.ಆರ್.ಚಂದ್ರಶೇಖರ್ ಮಾತನಾಡಿ, ಬಯೋಮೆಟ್ರಿಕ್‌ನಲ್ಲಿ face identification ಇದ್ದರೆ ಸೂಕ್ತವೆಂದರು.

ಡಾ. ಬಸವರಾಜು.ಸಿ ಮಾತನಾಡಿ, ಕುಲಪತಿಗಳು ಮತ್ತು ಕುಲಸಚಿವರು strict ಆಗಿ ನಿಗದಿತ ಅವಧಿಯೊಳಗೆ ಕಛೇರಿಗೆ ಹಾಜರಾಗಬೇಕೆಂದು ಆದೇಶ ಮಾಡಿಸಬೇಕು. ಆದೇಶದ ನಂತರ ಕುಲಪತಿಗಳು ಮತ್ತು ಕುಲಸಚಿವರು ವಾರದಲ್ಲಿ ಒಂದೆರೆಡು ವಿಭಾಗಕ್ಕಾದರೂ ಹಠಾತ್ ಭೇಟಿ ನೀಡಬೇಕು. ಇಂತಹ ಅನಿವಾರ್ಯತೆ ಗಂಗೋತ್ರಿಯಲ್ಲಿದೆ. ಇಂತಹವುಗಳಿಗೆ ಒಂದು team ಮಾಡಿಕೊಂಡು ಹೋಗಬೇಕು. ಯಾರು ಕಛೇರಿಯಲ್ಲಿ ಉಪಸ್ಥಿತರಿರುವುದಿಲ್ಲವೋ, ಅಂತಹವರಿಗೆ ಮೆಮೋ ನೀಡಬೇಕು ಎಂದರು.

ಮಾನ್ಯ ಕುಲಪತಿಗಳು ಮಾತನಾಡಿ, ಹಲವಾರು ವಿಭಾಗಗಳಿಗೆ ಅನಿರೀಕ್ಷಿತವಾಗಿ ಭೇಟಿ ನೀಡಿದ್ದು, ಇಂತಹ ಸಮಸ್ಯೆಗಳ ಬಗ್ಗೆ ಅರಿವಿದೆ. ಆದರೆ ಇದುವರೆವಿಗೂ ಯಾರಿಗೂ ಕ್ರಮ ತೆಗೆದುಕೊಂಡಿರುವುದಿಲ್ಲ. ಒಂದು ಬಾರಿ ಎಲ್ಲರಿಗೂ excuse ನೀಡಲಾಗಿದೆ. ಮುಂದಿನ ದಿನಗಳಲ್ಲಿ ನಿಯಮಾನುಸಾರ ಕ್ರಮ ತೆಗೆದುಕೊಳ್ಳಲಾಗುವುದು ಎಂದರು. ಹಾಗೂ ಸುತ್ತೋಲೆ ಹೊರಡಿಸಲಾಗುವುದೆಂದರು.

ಡಾ.ಟಿ.ಆರ್.ಚಂದ್ರಶೇಖರ್ ಮಾತನಾಡಿ, ಎಲ್ಲಾ ವಿಭಾಗಗಳಿಗೂ ಕುಲಪತಿಗಳು ಮತ್ತು ಕುಲಸಚಿವರು ಭೇಟಿ ನೀಡುವುದಕ್ಕೆ ಸಾಧ್ಯವಾಗುವುದಿಲ್ಲ. ಇದಕ್ಕೆ ಏನು ಮಾಡಬೇಕು? ಎಂದು ಕೇಳಿದರು.

ಶ್ರೀ ನಟರಾಜು.ಹೆಚ್.ಎಸ್ ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದ ಇಂಜಿನಿಯರಿಂಗ್ ಕಾಲೇಜಿನಲ್ಲಿ ಅನೇಕ ವಿದ್ಯಾರ್ಥಿಗಳು ತರಗತಿಗಳಿಗೆ ಹಾಜರಾಗುವುದಿಲ್ಲ. ಆದರೆ, ಆ ವಿದ್ಯಾರ್ಥಿಗಳಿಗೆ ಪೂರ್ಣ ಪ್ರಮಾಣದ ಹಾಜರಾತಿಯಿರುವುದು ದುರಂತವೆಂದರು.

ಮಾನ್ಯ ಕುಲಪತಿಗಳು ಮಾತನಾಡಿ, ಇಂಜಿನಿಯರಿಂಗ್ ಕಾಲೇಜಿನಲ್ಲಿಯೂ ಮೊದಲು ಸಿಸಿ ಕ್ಯಾಮರ ಅಳವಡಿಸಿ, ಬಯೋಮೆಟ್ರಿಕ್ ಜಾರಿಗೊಳಿಸಬೇಕೆಂದು ಈಗಾಗಲೇ ನಿರ್ಧರಿಸಲಾಗಿದ್ದು, ಇದನ್ನು ಕೂಡಲೇ ಕಾರ್ಯಗತಗೊಳಿಸಲಾಗುವುದು ಎಂದರು.

ಕುಲಸಚಿವರು ಮಾತನಾಡಿ, ಇಲ್ಲಿನ ಸಮಸ್ಯೆಗಳ ಬಗ್ಗೆ ವಿದ್ಯಾರ್ಥಿಗಳು ಮತ್ತು ಸಂಶೋಧಕರುಗಳು ಸಿಂಡಿಕೇಟ್ ಸದಸ್ಯರುಗಳಿಗೆ ಮನವಿ ಸಲ್ಲಿಸುತ್ತಾರೆ. ಇಲ್ಲಿ ವ್ಯಾಸಂಗ ಮಾಡಿರುವವರಿಗೆ ಇಲ್ಲಿನ ಪರಿಸ್ಥಿತಿಯ ಬಗ್ಗೆ ಅರಿವಿರುತ್ತದೆ. ಹೊಸ ಸಿಂಡಿಕೇಟ್ ಸದಸ್ಯರುಗಳಿಗೆ ಇಲ್ಲಿನ ವಾಸ್ತವ ಪರಿಸ್ಥಿತಿಯನ್ನು ತಿಳಿಸದೇ ಆ ಉದ್ಯೋಗಿಗಳು, ವಿದ್ಯಾರ್ಥಿಗಳು ಮತ್ತು ಸಂಶೋಧಕರುಗಳು ದೂರು ಮತ್ತು ಮನವಿ ಸಲ್ಲಿಸುತ್ತಾರೆಂದು ಸಭೆಯ ಗಮನಕ್ಕೆ ತಂದರು.

ಡಾ.ಟಿ.ಆರ್. ಚಂದ್ರಶೇಖರ್ ಮಾತನಾಡಿ, ಜಿಎಸ್‌ಟಿ ಗೆ ಸಂಬಂಧಿಸಿದಂತೆ ಸ್ಪಷ್ಟ ಮಾಹಿತಿಯನ್ನು ನೀಡಬೇಕೆಂದರು.

ಹಣಕಾಸು ಅಧಿಕಾರಿಗಳು ಮಾತನಾಡಿ, ವಿಶ್ವವಿದ್ಯಾನಿಲಯದ ಕೆಲವೊಂದು ಕಟ್ಟಡಗಳನ್ನು ಬಾಡಿಗೆಗೆ ನೀಡಿದಾಗ ಜಿಎಸ್‌ಟಿ ಅನ್ನು ಸೇರಿಸಲಾಗುತ್ತದೆ ಎಂದರು.

| | |
|---|---|
| **ತೀರ್ಮಾನ** | **ವಿಶ್ವವಿದ್ಯಾನಿಲಯದ ಕಾಯ್ದೆ ಸೆಕ್ಷನ್ 32(3)(i) ರನ್ವಯ 2021-22 ಮತ್ತು 2022-23ನೇ ಸಾಲಿನ ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕ ಪತ್ರಗಳನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| **ಸಾಮಾನ್ಯ ಸಭೆ 2024/1.2** | ಮೈಸೂರು ವಿಶ್ವವಿದ್ಯಾನಿಲಯದಲ್ಲಿ "ಕುವೆಂಪು ಕಾವ್ಯಾಧ್ಯಯನ ಪೀಠಕ್ಕೆ" ಸಂದರ್ಶಕ ಪ್ರಾಧ್ಯಾಪಕರನ್ನು ಆಹ್ವಾನಿಸುವ ಬಗೆಗೆ. |

ಕುಲಸಚಿವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಸ್ಥಾಪಿಸಲಾಗಿರುವ "ಕುವೆಂಪು ಕಾವ್ಯಾಧ್ಯಯನ ಪೀಠ"ದಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದ ಡಾ. ಪ್ರೀತಿ ಶ್ರೀಮಂಧರ್‌ಕುಮಾರ್ ಇವರ ಅವಧಿಯು ಮುಕ್ತಾಯಗೊಂಡಿರುತ್ತದೆ. ಈ ಸಂಬಂಧ ವಿಭಾಗ ಮಂಡಳಿ ಸಭೆಯಲ್ಲಿ ನಿರ್ಣಯಿಸಿದಂತೆ ಮೂವರು ತಜ್ಞರ ಪಟ್ಟಿಯನ್ನು ಸಲ್ಲಿಸಿದ್ದು, ಇದರಲ್ಲಿ ಒಬ್ಬರನ್ನು ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಆಹ್ವಾನಿಸಲು ವಿಷಯವನ್ನು ಸಭೆಯಲ್ಲಿ ಮಂಡಿಸಿರುತ್ತಾರೆ. ಈ ಮೂವರು ತಜ್ಞರ ಪಟ್ಟಿಯನ್ನು ಪರಿಶೀಲಿಸಲಾಗಿ, ಪ್ರೊ. ಎನ್.ಎಸ್.ತಾರಾನಾಥ ಅವರಿಗೆ 70 ವರ್ಷ ಪೂರ್ಣಗೊಂಡಿರುತ್ತದೆ. ವಿಶ್ವವಿದ್ಯಾನಿಲಯದ ರೆಗ್ಯುಲೇಷನ್ ಪ್ರಕಾರ 70 ವರ್ಷ ಪೂರ್ಣಗೊಂಡಿರುವ ತಜ್ಞರನ್ನು ಪರಿಗಣಿಸಲು ಅವಕಾಶವಿರುವುದಿಲ್ಲ. ಹಾಗಾಗಿ ಪ್ರೊ. ರಾಮಕೃಷ್ಣ ಮತ್ತು ಡಾ. ವಿಜಯಶ್ರೀ ಸಬರದ ಇವರುಗಳಿಗೆ ಸಂದರ್ಶಕ ಪ್ರಾಧ್ಯಾಪರನ್ನಾಗಿ ಆಹ್ವಾನಿಸಲು ಅವಕಾಶವಿದೆ. ಸಿಂಡಿಕೇಟ್ ಸಭೆಯು ಅನುಮೋದಿಸುವ ತಜ್ಞರನ್ನು "ಕುವೆಂಪು ಕಾವ್ಯಾಧ್ಯಯನ ಪೀಠಕ್ಕೆ" ಸಂದರ್ಶಕ ಪ್ರಾಧ್ಯಾಪಕರಾಗಿ ಆಹ್ವಾನಿಸಲಾಗುವುದೆಂದು ತಿಳಿಸಿದರು.

ಪ್ರೊ. ಶಬ್ಬೀರ್ ಮೊಹಮದ್ ಮುಸ್ತಫಾರವರು ಮಾತನಾಡಿ, ಮೂವರು ತಜ್ಞರಲ್ಲಿ ಪ್ರೊ. ರಾಮಕೃಷ್ಣ ಹೆಸರನ್ನು ಶಿಫಾರಸ್ಸು ಮಾಡಲು ಇಚ್ಚಿಸುತ್ತೇನೆ. ಏಕೆಂದರೆ ಪ್ರೊ. ಎನ್.ಎಸ್.ತಾರಾನಾಥ ಇವರಿಗೆ 70 ವರ್ಷ ಪೂರ್ಣಗೊಂಡಿರುತ್ತಾರೆ. ಡಾ. ವಿಜಯಶ್ರೀ ಸಬರದ ಇವರು ಬೇರೆ ವಿಶ್ವವಿದ್ಯಾನಿಲಯದವರಾಗಿರುತ್ತಾರೆ ಮತ್ತು ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿಯೇ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸಿ ನಿವೃತ್ತರಾಗಿರುವ ಪ್ರೊ. ರಾಮಕೃಷ್ಣ ಅವರನ್ನು "ಕುವೆಂಪು ಕಾವ್ಯಾಧ್ಯಯನ ಪೀಠಕ್ಕೆ" ಸಂದರ್ಶಕ ಪ್ರಾಧ್ಯಾಪಕರಾಗಿ ಆಹ್ವಾನಿಸಲು ಶಿಫಾರಸ್ಸು ಮಾಡುತ್ತೇನೆಂದರು.

ಡಾ. ಬಸವರಾಜು .ಸಿ ಅವರು ಮಾತನಾಡಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಸ್ಥಾಪಿಸಲಾಗಿರುವ "ಕುವೆಂಪು ಕಾವ್ಯಾಧ್ಯಯನ ಪೀಠ"ದಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಆಹ್ವಾನಿಸಲು ಪ್ರೊ. ರಾಮಕೃಷ್ಣ ಅವರು ಸೂಕ್ತವೆನಿಸುತ್ತದೆ. ಎಂದರು.

ಶ್ರೀ ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಪ್ರೊ. ರಾಮಕೃಷ್ಣ ಅವರಿಗೆ 70 ವರ್ಷ ಪೂರ್ಣಗೊಳ್ಳಲು ಇನ್ನು ಒಂದು ವರ್ಷ ಮಾತ್ರವಿರುವ ಹಿನ್ನೆಲೆಯಲ್ಲಿ, ಸದರಿ ತಜ್ಞರನ್ನು ಸಂದರ್ಶಕ ಪ್ರಾಧ್ಯಾಪಕರಾಗಿ ಆಹ್ವಾನಿಸಬಹುದೆಂದು ಸಲಹೆ ನೀಡಿದರು.

ಡಾ. ಟಿ.ಆರ್. ಚಂದ್ರಶೇಖರ್ ರವರು ಮಾತನಾಡಿ, ರಾಷ್ಟ್ರಕವಿ ಶ್ರೀ ಕುವೆಂಪು ಅವರ ಜನ್ಮ ಸ್ಥಳದಿಂದ ಬಂದಿರುವ ಸಿಂಡಿಕೇಟ್ ಸಭೆಯ ಅಧ್ಯಕ್ಷರವರ ವಿವೇಚಾನುಸಾರ ಆಹ್ವಾನಿಸಲು ಬಿಡುವುದು ಸೂಕ್ತ. ಏಕೆಂದರೆ

ಅತ್ಯಂತ ಸೂಕ್ತ ವ್ಯಕ್ತಿಯನ್ನು ಆಯ್ಕೆ ಮಾಡುತ್ತಾರೆ ಎಂದೆನಿಸುತ್ತದೆ. ಹಾಗೂ ಪ್ರೊ. ರಾಮಕೃಷ್ಣ ಅವರಿಗೆ ಒಂದು ವರ್ಷ ಮಾತ್ರ ಸಂದರ್ಶಕ ಪ್ರಾಧ್ಯಾಪಕರಾಗಿ ಆಹ್ವಾನಿಸಲು ಅವಕಾಶವಿರುವುದರಿಂದ ಪ್ರೊ. ರಾಮಕೃಷ್ಣ ಅವರನ್ನು ಸಭೆಯು ಆಯ್ಕೆ ಮಾಡಬಹುದೆಂದು ತಿಳಿಸಿದರು.

ಅಂತಿಮವಾಗಿ ಪ್ರೊ. ರಾಮಕೃಷ್ಣ ಅವರನ್ನು "ಕುವೆಂಪು ಕಾವ್ಯಾಧ್ಯಯನ ಪೀಠಕ್ಕೆ" ಸಂದರ್ಶಕ ಪ್ರಾಧ್ಯಾಪಕರಾಗಿ ಆಹ್ವಾನಿಸಲು ಸಭೆಯು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿತು.

| | |
|---|---|
| ತೀರ್ಮಾನ | **ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಸ್ಥಾಪಿಸಲಾಗಿರುವ "ಕುವೆಂಪು ಕಾವ್ಯಾಧ್ಯಯನ ಪೀಠ"ಕ್ಕೆ ಪ್ರೊ. ರಾಮಕೃಷ್ಣ ಇವರನ್ನು ಒಂದು ವರ್ಷದ ಅವಧಿಗೆ ಮಾಹೆಯಾನ ರೂ.8,000/-ಗಳ ಗೌರವ ಸಂಭಾವನೆಯೊಂದಿಗೆ ಸಂದರ್ಶಕ ಪ್ರಾಧ್ಯಾಪಕರಾಗಿ ಆಹ್ವಾನಿಸಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು.** |
| **ಸಾಮಾನ್ಯ ಸಭೆ 2024/1.3** | ವಿಶ್ವವಿದ್ಯಾನಿಲಯದ ತಾಂತ್ರಿಕ ಶಾಲೆಯ ಅಧಿನಿಯಮ ರಚನಾ ಸಮಿತಿಯು ಸಿದ್ಧಪಡಿಸಿರುವ ಕರಡು ಅಧಿನಿಯಮಕ್ಕೆ ಅನುಮೋದನೆ ಪಡೆಯುವುದರ ಬಗ್ಗೆ. |

ಡಾ. ಟಿ.ಆರ್. ಚಂದ್ರಶೇಖರ್‌ರವರು ಮಾತನಾಡಿ, ಈ ಅಧಿನಿಯಮ ತುಂಬಾ ಮೊದಲೇ ಆಗಬೇಕಿತ್ತು. ಈಗ ತುಂಬಾ ತಡವಾಗಿದೆ. ಏಕೆಂದರೆ ಹಲವಾರು ಬಾರಿ ನೆನಪೋಲೆ ಕೊಟ್ಟಿದ್ದಾರೆ. ಆದ್ದರಿಂದ ತಡಮಾಡದೇ ಸಭೆಯ ಒಪ್ಪಿಗೆ ತೆಗೆದುಕೊಂಡು ಸರ್ಕಾರಕ್ಕೆ ಕಳುಹಿಸುವುದು ಹಾಗೂ ಆದಷ್ಟು ಬೇಗ ಸರ್ಕಾರದಿಂದ ಅಂಕಿತ ದೊರಕಿಸಿಕೊಳ್ಳಲು ಸಹ ವಿಶ್ವವಿದ್ಯಾನಿಲಯ ಮುಂದಾಗಬೇಕು. ಇದರೊಂದಿಗೆ ಈ ಸಂಬಂಧ ಈಗಾಗಲೇ ಉಪಪ್ರಶ್ನೆಗಳು ಕಳುಹಿಸಿಕೊಡಲಾಗಿದೆ. ವಿಶ್ವವಿದ್ಯಾನಿಲಯದ ತಾಂತ್ರಿಕ ಶಾಲೆಯು ಪ್ರಾರಂಭವಾಗಿ ಎರಡು ವರ್ಷ ಪೂರ್ಣಗೊಂಡಿದ್ದು, ಮೂರನೇ ವರ್ಷಕ್ಕೆ ಪಾದಾರ್ಪಣೆ ಮಾಡಿದೆ. ವಿಶ್ವವಿದ್ಯಾನಿಲಯದ ತಾಂತ್ರಿಕ ಶಾಲೆಯು AICTE ಯಿಂದ ಅನುಮೋದನೆ ಪಡೆದಿದೆ. ಈ ಸಂಸ್ಥೆಯನ್ನು ರಾಷ್ಟ್ರಮಟ್ಟದಲ್ಲಿ ಅಭಿವೃದ್ಧಿಪಡಿಸಬೇಕು. ನಾವು ದೊಡ್ಡ ಮಟ್ಟದ ಕಾಳಜಿಯನ್ನು/ ಗಮನವನ್ನು / ಆದ್ಯತೆಯನ್ನು ಕೊಟ್ಟು ಇದನ್ನು streamline ಮಾಡಬೇಕು. ಜೊತೆಗೆ ಇವತ್ತು ಯಾರೇ ಆಗಲೀ, ಯಾವ ವಿದ್ಯಾರ್ಥಿಯಾಗಲೀ ಒಂದು ಪ್ರತಿಷ್ಠಿತ ಮತ್ತು ಎಲ್ಲಾ ಗೌರವಗಳನ್ನು ಮೈಸೂರು ವಿಶ್ವವಿದ್ಯಾನಿಲಯಕ್ಕೆ ನೀಡುತ್ತಾರೆ. ಇವತ್ತು ಎಷ್ಟೋ ಇಂಜಿನಿಯರಿಂಗ್ ಕಾಲೇಜುಗಳು ಮುಚ್ಚಿಹೋಗುತ್ತಿದೆ. ಏಕೆಂದರೆ ಪ್ರವೇಶಾತಿಯನ್ನು ಯಾವುದು Top Priority ಇರುತ್ತದೆಯೋ ಅದಕ್ಕೆ ನೂಕುನುಗ್ಗಲು ಇದೆ. ಎಷ್ಟೇ ಹಣ ಖರ್ಚಾದರೂ ಪ್ರವೇಶಾತಿ ಪಡೆಯುವಂತಹ ವಾತಾವರಣವಿದೆ. ನಮ್ಮದ್ದು ಪ್ರತಿಷ್ಠಿತ ವಿಶ್ವವಿದ್ಯಾನಿಲಯವಾಗಿರುವುದರಿಂದ ನಾವು ಅದೇ ಒಂದು ಎತ್ತರಕ್ಕೆ ಬೆಳೆಯುವ ಜವಾಬ್ದಾರಿಯಿರುವುದರಿಂದ, AICTE Norms ನಲ್ಲಿ ಏನೇನು ಸೌಲಭ್ಯಗಳು ಅಂದರೆ AICTE Norms ನಲ್ಲಿ ಬಹಳ ಮುಖ್ಯವಾಗಿ ಪ್ರಾಯೋಗಾಲಯ ನೀಡಬೇಕು ಮತ್ತು ತರಗತಿಗಳಲ್ಲಿ ಪೀಠೋಪಕರಣಗಳನ್ನು ಕೊಡಬೇಕಾಗಿದೆ. ಇವುಗಳ ಬಗ್ಗೆ ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ನಿರ್ಣಯವಾಗಿದೆ. ಈ ಸಂಬಂಧ status ತಿಳಿಸಬೇಕೆಂದರು.

ಮಾನ್ಯ ಕುಲಪತಿಗಳು ಮಾತನಾಡಿ, ಪೀಠೋಪಕರಣಗಳನ್ನು ಖರೀದಿಸಲು ಟೆಂಡರ್ ಕರೆಯಲಾಗಿದೆ. ವಿಶ್ವವಿದ್ಯಾನಿಲಯದ ತಾಂತ್ರಿಕ ಶಾಲೆಯನ್ನು ಹಂತ ಹಂತವಾಗಿ ಅಭಿವೃದ್ಧಿಪಡಿಸಲಾಗುವುದೆಂದರು.

ಶ್ರೀ ಗೋಕುಲ್ ಗೋವರ್ಧನ್ ರವರು ಮಾತನಾಡಿ, ವಿದ್ಯಾರ್ಥಿಗಳ ಒಂದಿಬ್ಬರು ಪೋಷಕರು ನನಗೆ ಕರೆ ಮಾಡಿದ್ದು, ಅಧಿನಿಯಮವು ಅಂಕಿತ ಪಡೆದಿಲ್ಲದಿರುವುದರಿಂದ ವಿಶ್ವವಿದ್ಯಾನಿಲಯದ ತಾಂತ್ರಿಕ ಶಾಲೆಯ ಮಾನ್ಯತೆ ರದ್ದಾಗಬಹುದೆಂದು ಭಾವಿಸಿ, ಮಕ್ಕಳ ಭವಿಷ್ಯವೇನೆಂದು ಆತಂಕ ವ್ಯಕ್ತಪಡಿಸುತ್ತಾ, ಇಲ್ಲಿ ಕಾರ್ಯನಿರ್ವಹಿಸುತ್ತಿರುವ ಉದ್ಯೋಗಿಗಳೇ ತಿಳಿಸಿರುತ್ತಾರೆಂದು ಹೇಳಿದರು. ವಿವಿ ಉದ್ಯೋಗಿಗಳೇ ವಿದ್ಯಾರ್ಥಿಗಳಿಗೆ ದಿಕ್ಕುತಪ್ಪಿಸಿ ಆತಂಕ ಸೃಷ್ಟಿ ಮಾಡುವಂತಹದು ಆಗಬಾರದು. ಯಾರು ವಿವಿ ತಾಂತ್ರಿಕ ಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ ಅವರುಗಳು ವಿಶ್ವವಿದ್ಯಾನಿಲಯ ಪರವಾಗಿರಬೇಕು. ಅಧಿನಿಯಮದಲ್ಲಿ ಅಕಸ್ಮಾತ್ ಸಣ್ಣಪುಟ್ಟ ವ್ಯತ್ಯಾಸಗಳಾಗಿದ್ದರೆ, ಆದಷ್ಟು ಬೇಗ ಮಾನ್ಯ ಕುಲಪತಿ ಹಾಗೂ ಕುಲಸಚಿವರ ಗಮನಕ್ಕೆ ತಂದು ಸರ್ಕಾರದಿಂದ ಅಂಕಿತ ಪಡೆದುಕೊಳ್ಳಲು ಪ್ರಯತ್ನಿಸಬೇಕು. ಅದರ ಬದಲು ವಿದ್ಯಾರ್ಥಿಗಳಿಗೆ ಭವಿಷ್ಯವಿರುವುದಿಲ್ಲವೆಂದು ಹೇಳುವಂತಹದು ಅದರಲ್ಲೂ ವಿವಿ ತಾಂತ್ರಿಕ ಶಾಲೆಯೊಳಗೆ ಆಗಿರುವುದು ಸರಿಯಲ್ಲ ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ವಿಶ್ವವಿದ್ಯಾನಿಲಯದ ತಾಂತ್ರಿಕ ಶಾಲೆಯು AICTE ನಿಂದ ಅನುಮೋದನೆ

ಪಡೆದಿರುತ್ತದೆ. ವಿದ್ಯಾರ್ಥಿಗಳನ್ನು ದಿಕ್ಕುತಪ್ಪಿಸುವ ಕೆಲಸ ನಡೆಯುತ್ತಿದೆಯೆಂದು ನನ್ನ ಗಮನಕ್ಕೂ ಬಂದಿರುತ್ತದೆ. ಈ ಸಂಬಂಧ 2-3 ಬಾರಿ ಸಭೆಯನ್ನು ಕರೆದರೂ ನಿರ್ದೇಶಕರು ಹಾಜರಾಗಿರುವುದಿಲ್ಲ. ಸಭೆಗೆ ನಿರ್ದೇಶಕರು ಹಾಜರಾಗಿದ್ದರೆ ಅಲ್ಲಿರುವ ಸಮಸ್ಯೆಗಳಿಗೆ ಪರಿಹಾರ ನೀಡಬಹುದಿತ್ತು. ಈಗಾಗಲೇ ವಿಶ್ವವಿದ್ಯಾನಿಲಯದ ತಾಂತ್ರಿಕ ಶಾಲೆಗೆ ಅವಶ್ಯಕವಿರುವ ಉಪಕರಣಗಳು ಮತ್ತು ಪೀಠೋಪಕರಣಗಳನ್ನು ಖರೀದಿಸಲು ಕ್ರಮವಹಿಸಲಾಗುತ್ತಿದೆ. ಸರ್ಕಾರದ ನಿಯಮಗಳನ್ನು ಪಾಲಿಸಬೇಕು. ಹಣವನ್ನು ವೆಚ್ಚ ಮಾಡಬೇಕಾದರೆ ಸ್ವಯಂ ನಿರ್ಧಾರ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಸಮಿತಿಯನ್ನು ರಚಿಸಿ, ಸಮಿತಿಯ ಶಿಫಾರಸ್ಸುಗಳನ್ನು ಪರಿಗಣಿಸಬೇಕಾಗುತ್ತದೆ. ವಿಶ್ವವಿದ್ಯಾನಿಲಯದ ತಾಂತ್ರಿಕ ಶಾಲೆಯಲ್ಲಿರುವ ಕೆಲವು ಸಮಸ್ಯೆಗಳು ಗಮನಕ್ಕೆ ಬಂದಿದ್ದು, ಸಮಸ್ಯೆಗಳನ್ನು ಹಂತ ಹಂತವಾಗಿ ಬಗೆಹರಿಸಲಾಗುತ್ತಿದೆ. ಈ ಸಂಬಂಧ ಮುಂದಿನ ಶೈಕ್ಷಣಿಕ ಸಾಲಿನಿಂದ ವಿಶ್ವವಿದ್ಯಾನಿಲಯದ ತಾಂತ್ರಿಕ ಶಾಲೆಯನ್ನು ವಿಶ್ವವಿದ್ಯಾನಿಲಯದ ನಿಯಂತ್ರಣದಲ್ಲಿಡಬೇಕೆಂಬ ಅಭಿಪ್ರಾಯವಿದೆ. ವಿವಿ ತಾಂತ್ರಿಕ ಶಾಲೆಯನ್ನು ಆದಷ್ಟು ಉನ್ನತ ಮಟ್ಟಕ್ಕೆ ಕೊಂಡೊಯ್ಯಬೇಕೆಂದರು.

ಶ್ರೀ ಮಹದೇಶು ರವರು ಮಾತನಾಡಿ, ವಿಶ್ವವಿದ್ಯಾನಿಲಯದ ತಾಂತ್ರಿಕ ಶಾಲೆಯಲ್ಲಿರುವ ಸಹಾಯಕ ಪ್ರಾಧ್ಯಾಪಕರೊಬ್ಬರಿಗೆ ಅಕ್ಟೋಬರ್/ನವೆಂಬರ್‌ವರೆಗೂ service lapse ಆಗಿದೆ. ಇನ್ನು ಕೂಡ ಸೇವೆಯನ್ನು renewal ಹಾಗೂ ವೇತನ ಆಗಿರುವುದಿಲ್ಲ. ವಿದ್ಯಾರ್ಥಿಗಳಗುಣವಾಗಿ ಅಧ್ಯಾಪಕರುಗಳ ratio ಇರುವುದಿಲ್ಲವೆಂದು ಅಭಿಪ್ರಾಯಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, AICTE Norms ಅನ್ವಯ ಪ್ರತಿಯೊಂದನ್ನು ಅನುಸರಿಸಬೇಕಾದರೆ ಅನುದಾನವಿರಬೇಕು. ಅಧ್ಯಾಪಕರುಗಳ ಕೊರತೆ ಇರುವುದಿಲ್ಲ. ವಿಶ್ವವಿದ್ಯಾನಿಲಯದಿಂದಲೂ ಅಧ್ಯಾಪಕರುಗಳನ್ನು ವರ್ಗಾವಣೆ ಮಾಡಲಾಗಿದೆ. ಈ ಸಂಬಂಧ ಆದೇಶವನ್ನು ನೀಡಲಾಗುವುದು.

ಕುಲಸಚಿವರು ಮಾತನಾಡಿ, ಇದುವರೆಗೂ ವಿಶ್ವವಿದ್ಯಾನಿಲಯದ ತಾಂತ್ರಿಕ ಶಾಲೆಗೆ ಮೈಸೂರು ವಿಶ್ವವಿದ್ಯಾನಿಲಯದ ಸಿಬ್ಬಂದಿ ವಿಭಾಗದಿಂದ ಯಾವ ನೇಮಕಾತಿಯು ಆಗಿರುವುದಿಲ್ಲ. ವಿಶ್ವವಿದ್ಯಾನಿಲಯಕ್ಕೆ ಕುಲಸಚಿವರಾಗಿ ಬಂದು 14 ತಿಂಗಳಾಗಿದೆ ಹಾಗೂ Board of Governance ನಲ್ಲಿಯೂ ಇರುತ್ತೇನೆ. ಮಾನ್ಯ ಕುಲಪತಿಯವರ ಅಧ್ಯಕ್ಷತೆಯಲ್ಲಿ ನಡೆದ Board of Governance ನ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯದ ತಾಂತ್ರಿಕ ಶಾಲೆಯ ವತಿಯಿಂದಲೇ ಅಧಿಸೂಚನೆ ಹಾಗೂ ಸಂದರ್ಶನ ನಡೆಸುವುದಾದರೆ ವಿಶ್ವವಿದ್ಯಾನಿಲಯವೇಕೆ ಬೇಕು ಎಂದು ಕೇಳಲಾಗಿದೆ. ಮೈವಿವಿ ಆಯ್ಕೆ ಮಂಡಳಿ ಸಂದರ್ಶನ ನಡೆಸಬೇಕು. ಆದರೆ ಅಕ್ಟೋಬರ್‌ನಲ್ಲಿ ಅವರೇ ಅಧಿಸೂಚನೆ ಮತ್ತು ಸಂದರ್ಶನ ಮಾಡಿಕೊಂಡಿದ್ದಾರೆ. ಈ ಸಂಬಂಧ ವಿಶ್ವವಿದ್ಯಾನಿಲಯದ ಆಡಳಿತಾತ್ಮಕ ಮಂಜೂರಾತಿ ಪಡೆದಿರುವುದಿಲ್ಲ ಎಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್‌ರವರು ಮಾತನಾಡಿ, ವಿಶ್ವವಿದ್ಯಾನಿಲಯದ ತಾಂತ್ರಿಕ ಶಾಲೆಯಲ್ಲಿಯೇ ಸಂದರ್ಶನ ಮಾಡಿ ನೇಮಕ ಮಾಡಿಕೊಳ್ಳಲು ಅವಕಾಶವಿದೆಯೇ ಎಂದು ಕೇಳಿದರು.

ಕುಲಸಚಿವರು ಮಾತನಾಡಿ, ಯಾವ ರೀತಿ ನೇಮಕ ಮಾಡಿಕೊಂಡಿದ್ದಾರೆ ಎಂಬುದರ ಬಗ್ಗೆ ಯಾವುದೇ ಮಾಹಿತಿಯಿರುವುದಿಲ್ಲ ಎಂದರು.

ಶ್ರೀ ಗೋಕುಲ್ ಗೋವರ್ಧನ್ ರವರು ಮಾತನಾಡಿ, ಈ ರೀತಿ ನೇಮಕ ಮಾಡಿಕೊಳ್ಳಬಹುದೆಂದು ಅಧಿನಿಯಮದಲ್ಲಿ ಉಲ್ಲೇಖಿಸಿದೆಯೇ, ಒಂದು ವೇಳೆ ಉಲ್ಲೇಖಿಸಿದ್ದರೆ ಬದಲಾವಣೆ ಮಾಡಿಕೊಳ್ಳಬೇಕೆಂದರು.

ಮಾನ್ಯ ಕುಲಪತಿಗಳು ಮಾತನಾಡಿ, ಬದಲಾವಣೆಯಾಗುತ್ತದೆ. ಸರ್ಕಾರದಿಂದ ಅನುಮೋದನೆ ಪಡೆಯದೇ ವಿಶ್ವವಿದ್ಯಾನಿಲಯದ ತಾಂತ್ರಿಕ ಶಾಲೆಯನ್ನು ಪ್ರಾರಂಭಿಸಿರುತ್ತಾರೆ. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ appointment ಮಾಡಿರುವುದು ತಪ್ಪು. ಅದನ್ನು ನಾವು ನಿಯಮಬದ್ಧಗೊಳಿಸ ಬೇಕೆಂದರು.

ಶ್ರೀ ಗೋಕುಲ್ ಗೋವರ್ಧನ್ ರವರು ಮಾತನಾಡಿ, ಅಧಿನಿಯಮದ staff recruitment ಕಾಲಂನಲ್ಲಿ AICTE Norms ಪ್ರಕಾರ ಮಾತ್ರ ಮಾಡಲಾಗಿದೆ. ಅಧಿನಿಯಮವನ್ನು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಹಾಗೂ ಕುಲಸಚಿವರ ಗಮನಕ್ಕೆ ತಂದು ಸಿದ್ಧಪಡಿಸಬೇಕೆಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ಇದುವರೆವಿಗೂ ಗಮನಕ್ಕೆ ತಂದಿರುವುದಿಲ್ಲವೆಂದರು.

ಮಾನ್ಯ ಕುಲಪತಿಗಳು ಮಾತನಾಡಿ, ಯಾವುದೇ Programme ಗಳನ್ನು ಸಹ ವಿಶ್ವವಿದ್ಯಾನಿಲಯದ ಗಮನಕ್ಕೆ ತಂದಿರುವುದಿಲ್ಲ. ಈಗ ಆದೇಶಗಳನ್ನು ಮುಂದುವರೆಸಬೇಕಾಗಿರುವುದರಿಂದ, ವಿಶ್ವವಿದ್ಯಾನಿಲಯದ ಗಮನಕ್ಕೆ ತರಲಾಗಿದೆ ಎಂದರು.

ಕುಲಸಚಿವರು ಮಾತನಾಡಿ, ವಿಶ್ವವಿದ್ಯಾನಿಲಯದ ತಾಂತ್ರಿಕ ಶಾಲೆಯು ಶೈಕ್ಷಣಿಕವಾಗಿ ಸ್ವಾಯತ್ತತೆ ಪಡೆದಿದೆ ಎನ್ನುವ ದೃಷ್ಟಿಯಿಂದ ವಿಶ್ವವಿದ್ಯಾನಿಲಯದ ಗಮನಕ್ಕೆ ಬಾರದೇ ಹೊಸ ಪಠ್ಯಕ್ರಮವನ್ನು ಸಿದ್ಧಪಡಿಸುವುದು, ಹೊಸ ಪ್ರೋಗ್ರಾಗಳನ್ನು ಪ್ರಾರಂಭ ಮಾಡಿದ್ದಾರೆ. ಆದರೆ ಸದರಿ ಶಾಲೆಯು ಎಲ್ಲಾ ಆಡಳಿತಾತ್ಮಕ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದೆ. ಸಮಸ್ಯೆಗಳ ಪರಿಹಾರಕ್ಕಾಗಿ ಮಾತ್ರ ವಿಶ್ವವಿದ್ಯಾನಿಲಯಕ್ಕೆ ಬರುತ್ತಾರೆ. ಇಷ್ಟು ಅಧ್ಯಾಪಕರುಗಳನ್ನು ನೇಮಕ ಮಾಡಿಕೊಳ್ಳುವಾಗ ವಿಶ್ವವಿದ್ಯಾನಿಲಯದ ಗಮನಕ್ಕೆ ಬಾರದೇ ನೇಮಕಾತಿ ಮಾಡಿಕೊಂಡಿರುತ್ತಾರೆ. ಸರ್ಕಾರವು ಕೇವಲ 06 ಅಧ್ಯಾಪಕರುಗಳು, ತಲಾ ಒಬ್ಬರಿಗೆ ಮಾಹೆಯಾನ ರೂ.30,000/-ಗಳಂತೆ ವೇತನ ಪಾವತಿಸುವುದಕ್ಕೆ ಮಾತ್ರ ಅನುಮತಿ ನೀಡಿರುತ್ತದೆ. ಆದರೆ, ರೂ.55,000/-ಗಳಂತೆ ವೇತನ ಪಾವತಿಸುತ್ತಿದ್ದಾರೆ. ಈ ಆರ್ಥಿಕ ಹೊರೆ ಎಲ್ಲಿಂದ ಬರುತ್ತದೆ. ಬೇರೆ ಬೇರೆ ವಿಷಯಗಳಿಗೆ ಬೋಧನೆ ಮಾಡುತ್ತಿರಬಹುದು ಹೊರತು ಅಧ್ಯಾಪಕರುಗಳು ಅಂದರೆ ಎಲ್ಲರೂ ಒಂದೇ. ನಮ್ಮ ವಿಶ್ವವಿದ್ಯಾನಿಲಯದ ಅಧ್ಯಾಪಕರುಗಳಿಗೆ ಮಾಹೆಯಾನ ರೂ.28,000/-ಗಳನ್ನು ಪಾವತಿಸಲಾಗುತ್ತಿದೆ. ವೇತನ ಹೆಚ್ಚಿಸಬೇಕೆಂದು ತಿಂಗಳವರೆಗೆ ಮುಷ್ಕರ ಹೂಡಿದ್ದರೂ, ಸರ್ಕಾರದ ಪ್ರತಿನಿಧಿಗಳು ಅನುಮತಿ ನೀಡಲಿಲ್ಲ. ಪ್ರಸ್ತುತ ಸಮಸ್ಯೆಗಳು ಉದ್ಭವಿಸಿದಾಗ ವಿಶ್ವವಿದ್ಯಾನಿಲಯದ ಕುಲಪತಿ ಹಾಗೂ ಕುಲಸಚಿವರು ನೆನಪಾಗುತ್ತಾರೆ. ಅಕ್ಟೋಬರ್ ಮಾಹೆಯಲ್ಲಿ ಅವರುಗಳೇ ನೇಮಕಾತಿ ಮಾಡಿಕೊಂಡಿರುತ್ತಾರೆ. ಆ ಸಂದರ್ಭದಲ್ಲಿ ಕುಲಪತಿ, ಕುಲಸಚಿವ ಮತ್ತು ಸಿಂಡಿಕೇಟ್ ಅವರುಗಳನ್ನು ಪರಿಗಣಿಸಿರುವುದಿಲ್ಲ. ಅಲ್ಲಿಯೇ ಇದ್ದು feedback ತೆಗೆದುಕೊಳ್ಳುವಾಗ ಅಧ್ಯಾಪಕರುಗಳು ನಿಗದಿತ ಅವಧಿಗೆ ಹಾಜರಾಗುವುದಿಲ್ಲ. ಒಂದು ತಿಂಗಳವರೆಗೆ ವಿದೇಶಕ್ಕೆ ಹೋಗುತ್ತಾರೆ. ಆರು ತಿಂಗಳ ಸೆಮಿಸ್ಟರ್ ಪೂರ್ಣಗೊಳಿಸುವಾಗ ಒಂದು ತಿಂಗಳು ಅಧ್ಯಾಪಕರುಗಳು ಹಾಜರಾಗದಿದ್ದರೆ ಸಮಸ್ಯೆಯಾಗುತ್ತದೆ. ನಮ್ಮ ವಿಶ್ವವಿದ್ಯಾನಿಲಯದ ಅಧ್ಯಾಪಕರು/ಉದ್ಯೋಗಿಗಳು ಸಿಂಡಿಕೇಟ್ ಸಭೆಯ ಅನುಮತಿ ಪಡೆಯುತ್ತಾರೆ. ನಾವುಗಳು ಸರ್ಕಾರದ ಅನುಮತಿಯನ್ನು ಪಡೆಯಲೇಬೇಕು. ಇಲ್ಲಿನ ಉದ್ಯೋಗಿಗಳಷ್ಟೆ ಸಮನಾದ ವೇತನ ಪಡೆಯುತ್ತಿರುವವರು ವಿಶ್ವವಿದ್ಯಾನಿಲಯದ ನಿಯಮಗಳಿಗೆ ಏಕೆ ಬದ್ಧರಾಗುವುದಿಲ್ಲ. ಒಂದು ತಿಂಗಳು ಅಧ್ಯಾಪಕರು ಹಾಜರಾಗದಿದ್ದರೆ, ಅಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಎಲ್ಲಿಂದ ಬೋಧನಾ ತರಗತಿಗಳನ್ನು ಪಡೆಯಬೇಕು. ಇಂತಹ ಸಮಸ್ಯೆಗಳ ವಿಚಾರಗಳನ್ನು ವಿಶ್ವವಿದ್ಯಾನಿಲಯದ ಗಮನಕ್ಕೆ ತರುವುದಿಲ್ಲವೆಂದು ಸಭೆಯ ಗಮನಕ್ಕೆ ತರುತ್ತಿದ್ದೇನೆ ಎಂದರು.

ಶ್ರೀ ನಟರಾಜು ಹೆಚ್.ಎಸ್ ರವರು ಮಾತನಾಡಿ, ಇಂತಹ ವಿಷಯಗಳಲ್ಲೇ ದೊಡ್ಡ ಆತಂಕವಿದೆ. ಕಟ್ಟಡಕ್ಕೆ ಪ್ರತ್ಯೇಕವಾದ ಮುಖ್ಯ ದ್ವಾರ ಮಾಡುತ್ತಿದ್ದಾರೆ. ಭವಿಷ್ಯದಲ್ಲಿ ಯುನಿವರ್ಸಿಟಿ ಸ್ಕೂಲ್ ಆಫ್ ಇಂಜಿನಿಯರಿಂಗ್‌ಅನ್ನು ಪ್ರತ್ಯೇಕ ಮಾಡಬಾರದು ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ವಿಶ್ವವಿದ್ಯಾನಿಲಯ ತಾಂತ್ರಿಕ ಶಾಲೆಯ ಮುಖ್ಯ ದ್ವಾರವನ್ನು ಪ್ರಾರಂಭವಾಗುವ ಮುಂಚೆಯೇ ಮಾಡಿರುತ್ತಾರೆ. ಮುಖ್ಯ ದ್ವಾರವು ಬಹಳ ದೂರವಾಗಿದೆ. ಬಸ್ಸುಗಳನ್ನು premier studio ಹತ್ತಿರ ನಿಲ್ಲಿಸುತ್ತಾರೆ. ಇದರಿಂದ ಬೇರೆ ಮುಖ್ಯದ್ವಾರ ಮಾಡುವುದು ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ ಹೊರತು ಪ್ರತ್ಯೇಕ ಮನೋಭಾವ ಇರುವುದಿಲ್ಲ ಹಾಗೂ ಕ್ಯಾಂಪಸ್‌ಗಳಲ್ಲಿ ಪ್ರತ್ಯೇಕ ಬೇಲಿಗಳನ್ನು ಮಾಡಲು ಅವಕಾಶವಿರುವುದಿಲ್ಲ. ಮುಕ್ತವಾಗಿರಬೇಕೆಂದು ಸ್ಪಷ್ಟತೆ ನೀಡಿದರು.

ಡಾ. ಬಸವರಾಜು .ಸಿ ರವರು ಮಾತನಾಡಿ, ಕುಲಸಚಿವರು ಸಭೆಯಲ್ಲಿ ಪ್ರಸ್ತಾಪಿಸಿರುವುದನ್ನು ಗಮನಿಸಿದರೆ, ಮೈಸೂರು ಯುನಿವರ್ಸಿಟಿ ಸ್ಕೂಲ್ ಆಫ್ ಇಂಜಿನಿಯರಿಂಗ್‌ಅನ್ನು ಆದಷ್ಟು ಬೇಗ ವಿಶ್ವವಿದ್ಯಾನಿಲಯದ ನಿಯಮಗಳಡಿ ತರಲು ಕ್ರಮ ತೆಗೆದುಕೊಳ್ಳಬೇಕೆಂದರು.

ಶ್ರೀ ಗೋಕುಲ್ ಗೋವರ್ಧನ್ ರವರು ಮಾತನಾಡಿ, ವಿಶ್ವವಿದ್ಯಾನಿಲಯ ತಾಂತ್ರಿಕ ಶಾಲೆಯು ಮೈಸೂರು ವಿಶ್ವವಿದ್ಯಾನಿಲಯದಿಂದ ಪ್ರತ್ಯೇಕವಾಗದೆಂದು ಅಭಿಪ್ರಾಯಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಖಂಡಿತ ಆಗುವುದಿಲ್ಲ.ಪ್ರತ್ಯೇಕತೆಗೆ ನನ್ನ ವಿರೋಧವಿದೆಯೆಂದರು.

ಡಾ. ಬಸವರಾಜು .ಸಿ ರವರು ಮಾತನಾಡಿ, ಈ ಪ್ರಶ್ನೆಗಳು ಹುಟ್ಟುವ ಮುಂಚೆ ನಿಯಮಗಳನ್ನು

ಅನುಸರಿಸಿದ್ದರೆ, ಪ್ರತ್ಯೇಕತೆಯ ಉದ್ಭವವಿರುವುದಿಲ್ಲವೆಂದರು

ಡಾ. ಟಿ.ಆರ್. ಚಂದ್ರಶೇಖರ್ ರವರು ಮಾತನಾಡಿ, ವಿಶ್ವವಿದ್ಯಾನಿಲಯದಿಂದ ಅನುಮೋದನೆ ಪಡೆಯದೇ ವಿದೇಶಕ್ಕೆ ಹೋಗುವಂತಹವರನ್ನು ನಿರ್ದ್ಯಾಕ್ಷಿಣವಾಗಿ ಕೆಲಸದಿಂದ ತೆಗೆಯಬೇಕೆಂದರು.

ಮಾನ್ಯ ಕುಲಪತಿಗಳು ಮಾತನಾಡಿ, ವಿಶ್ವವಿದ್ಯಾನಿಲಯಕ್ಕೆ ಪತ್ರ ಬರೆದರೆ ಮಾತ್ರ ಗೊತ್ತಾಗುತ್ತದೆ ಎಂದರು.

ಕುಲಸಚಿವರು ಮಾತನಾಡಿ, ವಿವಿ ಉಪಕುಲಸಚಿವ / ಸಹಾಯಕ ಕುಲಸಚಿವರು ನಿಯಮಗಳನ್ನು ಪಾಲನೆ ಮಾಡುತ್ತಿದ್ದು, ವಿಶ್ವವಿದ್ಯಾನಿಲಯ ತಾಂತ್ರಿಕ ಶಾಲೆಯವರು ಅನೇಕ procedure ಗಳನ್ನು lapse ಮಾಡಿರುತ್ತಾರೆ. ಇವುಗಳಿಗೆ ನಾವುಗಳು ಏಕೆ ಹೊಣೆಯಾಗಬೇಕೆಂದು ಪ್ರಶ್ನಿಸುತ್ತಾರೆ. ಆದರೂ ಮಾನ್ಯ ಕುಲಪತಿಯವರ ಅನುಮೋದನೆ ಮೇರೆಗೆ ಸಮಸ್ಯೆಗಳನ್ನು ಹಂತ ಹಂತವಾಗಿ ಬಗೆಹರಿಸಲಾಗುತ್ತಿದೆ ಎಂದರು.

ಡಾ. ಬಸವರಾಜು .ಸಿ ರವರು ಮಾತನಾಡಿ, ವಿಶ್ವವಿದ್ಯಾನಿಲಯ ತಾಂತ್ರಿಕ ಶಾಲೆಯವರ ಮೇಲೆ ಯಾವುದೇ ಕ್ರಮ ತೆಗೆದುಕೊಳ್ಳಬೇಕೆಂದರೂ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿರಬೇಕೆಂದರು.

ಕುಲಸಚಿವರು ಮಾತನಾಡಿ, ಈಗಲೂ ವಿಶ್ವವಿದ್ಯಾನಿಲಯ ತಾಂತ್ರಿಕ ಶಾಲೆಯು ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಟ್ಟಿದೆ ಎಂದರು.

ಡಾ. ಬಸವರಾಜು .ಸಿ ರವರು ಮಾತನಾಡಿ, ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿದ್ದರೂ ಸೂಕ್ತ ತೀರ್ಮಾನಗಳನ್ನು ತೆಗೆದುಕೊಳ್ಳುತ್ತಿಲ್ಲವೆಂದರು.

ಶ್ರೀ ಗೋಕುಲ್ ಗೋವರ್ಧನ್ ರವರು ಮಾತನಾಡಿ, ಯಾವ ಚಾನೆಲ್‌ನಿಂದ ನಮ್ಮವರೆಗೆ ಬರಬೇಕೋ, ಆ ಚಾನೆಲ್ work ಆಗುತ್ತಿಲ್ಲವೆಂದರು.

ಮಾನ್ಯ ಕುಲಪತಿಗಳು ಮಾತನಾಡಿ, ನಮ್ಮ ನಿಯಂತ್ರಣದಲ್ಲಿದ್ದರೂ ನ್ಯೂನತೆಗಳನ್ನು ತಿಳಸದಿರುವುದರಿಂದ ಸಮಸ್ಯೆಗಳುಂಟಾಗಿದೆ ಎಂದರು.

ಡಾ. ಟಿ.ಆರ್. ಚಂದ್ರಶೇಖರ್ ರವರು ಮಾತನಾಡಿ, ಸಿಂಡಿಕೇಟ್ ಸಭೆಯು ಅಧಿನಿಯಮಕ್ಕೆ ಅನುಮೋದನೆ ನೀಡಿದ್ದು, ಮುಂದಿನ ಶೈಕ್ಷಣಿಕ ಸಾಲಿನಿಂದ ವಿಶ್ವವಿದ್ಯಾನಿಲಯದ ನಿಯಂತ್ರಣದಡಿ ಕಾರ್ಯನಿರ್ವಹಿಸಲು ಕ್ರಮ ತೆಗೆದುಕೊಳ್ಳೋಣವೆಂದರು. ಮುಂದುವರೆದು, ವಿಶ್ವವಿದ್ಯಾನಿಲಯ ತಾಂತ್ರಿಕ ಶಾಲೆಯು ಸ್ವಯಂ ಆರ್ಥಿಕ ಯೋಜನೆಯಡಿ ಪ್ರಾರಂಭಗೊಂಡಿದೆ. ಹಾಗಾಗೀ ಸರ್ಕಾರದಿಂದ ಯಾವುದೇ ಅನುದಾನ ಬರುವುದಿಲ್ಲ. ಈ ಹಿನ್ನೆಲೆಯಲ್ಲಿ ಅಲ್ಲಿನ ಅಧ್ಯಾಪಕ/ಅಧ್ಯಾಪಕೇತರ ಉದ್ಯೋಗಿಗಳಿಗೆ ಮೂರು ತಿಂಗಳುಗಳಿಂದ ವೇತನ ಪಾವತಿಸಿರುವುದಿಲ್ಲ ಎಂದರು.

ಕುಲಸಚಿವರು ಮಾತನಾಡಿ, ಅಧ್ಯಾಪಕೇತರ ಉದ್ಯೋಗಿಗಳ ನೇಮಕಾತಿಯು redeployment ಮಾಡಬೇಕೆಂದು ಸೂಚನೆ ಇದೆ. ಅಧ್ಯಾಪಕೇತರ ಉದ್ಯೋಗಿಗಳನ್ನು redeployment ಮಾಡಿಕೊಳ್ಳಿ. ಹೊಸ ನೇಮಕಾತಿ ಮಾಡಿಕೊಳ್ಳಬಾರದೆಂದು 2021 ರಲ್ಲಿ ಸರ್ಕಾರವು ಸ್ಪಷ್ಟವಾಗಿ ಅನುಮತಿ ನೀಡಿದೆ. ಆದರೂ ನೇಮಕಾತಿ ಮಾಡಿಕೊಂಡಿದ್ದಾರೆ AICTE Norms ನಲ್ಲಿ ಅವಕಾಶವಿದ್ದರೆ, ಆಡಳಿತ ಮಂಡಳಿ ಮಾನ್ಯ ಕುಲಪತಿಯವರ ಅನುಮೋದನೆ ಪಡೆದು ನೇಮಕಾತಿ ಮಾಡಿಕೊಳ್ಳಬಹುದಿತ್ತು. ಎಂದರು.

ಡಾ. ಟಿ.ಆರ್. ಚಂದ್ರಶೇಖರ್ ರವರು ಮಾತನಾಡಿ, ವಿಶ್ವವಿದ್ಯಾನಿಲಯ ತಾಂತ್ರಿಕ ಶಾಲೆಯಲ್ಲಿ ಸಿಬ್ಬಂದಿಗಳ ಕೊರತೆಯಿದೆ. ಸಿಬ್ಬಂದಿಗಳಿಗೆ ವೇತನ ಪಾವತಿಸಬೇಕು. ಇದರಲ್ಲಿ ಮೂವರು ಪಿಹೆಚ್.ಡಿ ಮಾಡುತ್ತಿದ್ದಾರೆ. ವಿದ್ಯಾರ್ಹತೆಗೆ ಸರಿಸಮಾನದ ವೇತನ ಪಾವತಿಸಬೇಕೆಂದರು.

ಕುಲಸಚಿವರು ಮಾತನಾಡಿ, ವಿಶ್ವವಿದ್ಯಾನಿಲಯ ತಾಂತ್ರಿಕ ಶಾಲೆಯಲ್ಲಿ ಸಿಬ್ಬಂದಿ ಕೊರತೆಯಿರುವುದಿಲ್ಲ. ಒಟ್ಟು 27 ಮಂದಿ ಬೋಧಕರು ಕಾರ್ಯನಿರ್ವಹಿಸುತ್ತಿದ್ದು, 15 ಮಂದಿ ಅಧ್ಯಾಪಕೇತರ ಉದ್ಯೋಗಿಗಳು ಕಾರ್ಯನಿರ್ವಹಿಸುತ್ತಿದ್ದರೆಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ವಿದ್ಯಾರ್ಹತೆಗೆ ಅನುಗುಣವಾಗಿ ಸರಿಸಮಾನಾದ ವೇತನ ಪಾವತಿಸುವುದು ವಿಶ್ವವಿದ್ಯಾನಿಲಯದ ನಿಯಮದಲ್ಲಿರುವುದಿಲ್ಲ ಎಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ರವರು ಮಾತನಾಡಿ, ಅಖಿಲ ಭಾರತದ ಹಂತದಲ್ಲಿ ಯಾವುದೇ ಇಂಜಿನಿಯರಿಂಗ್ ಕಾಲೇಜಾಗಲೀ ಕೇವಲ branch ಗಳನ್ನು ಇಟ್ಟುಕೊಂಡರೆ ಪ್ರವೇಶಾತಿಯಾಗುವುದಿಲ್ಲ. ಪ್ರವೇಶಾತಿ ಪಡೆದವರಿಗೆ ಕೆಲಸ ಕೊಡಿಸಬೇಕಾದಂತಹ ಜವಾಬ್ದಾರಿ ಪ್ರತಿ ಕಾಲೇಜಿನಲ್ಲಿರಬೇಕು. ಈ ಹಿನ್ನೆಲೆಯಲ್ಲಿ ತರಬೇತಿ ಮತ್ತು Placement ಮಾಡಲೇಬೇಕಾಗುತ್ತದೆ. ಇಲ್ಲದಿದ್ದರೆ Admission ಆಗುವುದಿಲ್ಲ.

ಮಾನ್ಯ ಕುಲಪತಿಗಳು ಮಾತನಾಡಿ, ನಿಮಗೆ ಮಾಹಿತಿ ಅಪೂರ್ಣವಾಗಿದೆ ಎನಿಸುತ್ತದೆ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕೆರಿಯರ್ ಹಬ್ ಇದೆ. ಇದರಲ್ಲಿ ಎಷ್ಟು ಮಂದಿ ತರಬೇತಿ ಪಡೆದಿದ್ದರೆಯೆಂದು ಡೇಟಾ ಇರುವುದಿಲ್ಲ. ವಿವಿ ತಾಂತ್ರಿಕ ಶಾಲೆಯಲ್ಲಿ ನಡೆಯುವ ತರಗತಿಗಳಗೆ ಎಷ್ಟೋ ವಿದ್ಯಾರ್ಥಿಗಳು ಹಾಜರಾಗುತ್ತಿಲ್ಲವೆಂದು ತಿಳಿದು ಬಂದಿದೆ. ಈ ಸಂಬಂಧ 2 ಸಲ ಭೇಟಿ ನೀಡಲಾಗಿದೆ. 60 ವಿದ್ಯಾರ್ಥಿಗಳಲ್ಲಿ 12-15 ವಿದ್ಯಾರ್ಥಿಗಳು ಮಾತ್ರ ತರಗತಿಯಲ್ಲಿರುತ್ತಾರೆ. ನಮ್ಮಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆ (ಸಿಸ್ಟ್) ಇದ್ದು, ಇಲ್ಲಿ ಕಂಪ್ಯೂಟರ್‌ಗಳಿಗೆ ಸಂಬಂಧಿಸಿದಂತೆ ಅನೇಕ ಪ್ರೋಗ್ರಾಂಗಳಿವೆ. ಆ ಪ್ರೋಗ್ರಾಂಗಳಿಗೆ ವಿಶ್ವವಿದ್ಯಾನಿಲಯವು reasonable rate ನಿಗದಿಪಡಿಸಿದೆ. ಅಲ್ಲಿಯೂ ವಿದ್ಯಾರ್ಥಿಗಳು ಹಾಜರಾಗುವುದಿಲ್ಲವೆಂದು ಸಭೆಯ ಗಮನಕ್ಕೆ ತಂದರು.

ಡಾ. ಟಿ.ಆರ್. ಚಂದ್ರಶೇಖರ್ ರವರು ಮಾತನಾಡಿ, ವಿದ್ಯಾರ್ಥಿಗಳಿಗೆ ಕಡ್ಡಾಯವಾಗಿ Biometric ಮಾಡಬೇಕೆಂದರು.

ಶ್ರೀ ಗೋಕುಲ್ ಗೋವರ್ಧನ್ ರವರು ಮಾತನಾಡಿ, ಹಾಜರಾತಿ ಸಂಬಂಧ ಹಠಾತ್ ಭೇಟಿ ನೀಡಬೇಕೆಂದರು.

ಡಾ. ಬಸವರಾಜು .ಸಿ ರವರು ಮಾತನಾಡಿ, ಅಧ್ಯಾಪಕರುಗಳು ಕರೆದು ಹಾಜರಾತಿ ಹಾಕುವ ಬದಲು ಹಾಜರಾತಿ ಪುಸ್ತಕವನ್ನು ವಿದ್ಯಾರ್ಥಿಗಳಿಗೆ ನೀಡುವುದರಿಂದ, ವಿದ್ಯಾರ್ಥಿಗಳು ಒಬ್ಬರ ಹಾಜರಾತಿಯನ್ನು ಇನ್ನೊಬ್ಬರು ಹಾಕುವ ಮುಖಾಂತರ ಗೈರುಹಾಜರಾಗುವವರು ಹಾಜರಾತಿ ಪಡೆದಿರುತ್ತಾರೆ. ಆದ್ದರಿಂದ Biometric ಅನ್ನು ವಿದ್ಯಾರ್ಥಿಗಳಿಗಿಂತ ಅಧ್ಯಾಪಕರುಗಳಿಗೆ ಕಡ್ಡಾಯ ಮಾಡುವುದರಿಂದ, ತರಗತಿಗಳು ನಿಗದಿತ ಅವಧಿಯಲ್ಲಿ ನಡೆಯುತ್ತದೆ. ಅಧ್ಯಾಪಕರುಗಳು ವಿದ್ಯಾರ್ಥಿಗಳ ಹಾಜರಾತಿಯನ್ನು ಸರಿಯಾಗಿ ಅನುಸರಣೆ ಮಾಡಿದ್ದರೆ ಹಾಜರಾತಿಯ ಎಷ್ಟೋ ಸಮಸ್ಯೆಗಳು ಬಗೆಹರಿಯುತ್ತದೆ. ಏನೇ ಕಾನೂನು ಮಾಡಿದ್ದರೂ ಅದಕ್ಕೆ ಪರಿಹಾರ ಕಂಡುಕೊಳ್ಳುತ್ತಾರೆ. ಹಠಾತ್ ಭೇಟಿ ನೀಡುವುದು ಸೂಕ್ತವೆಂದರು.

ಶ್ರೀ ನಟರಾಜು .ಹೆಚ್.ಎಸ್ ರವರು ಮಾತನಾಡಿ, ತರಗತಿ ಕೊಠಡಿಗಳಿಗೆ ಸಿಸಿ ಕ್ಯಾಮರ ಏಕೆ ಅಳವಡಿಸಬಾರದೆಂದರು.

ಮಾನ್ಯ ಕುಲಪತಿಗಳು ಮಾತನಾಡಿ, ಅಧ್ಯಾಪಕರುಗಳು ನಿಗದಿತ ವೇಳೆಗೆ ಹಾಜರಾಗಿ ನಿಗದಿತ ಅವಧಿಯಲ್ಲಿ ತರಗತಿಗಳನ್ನು ತೆಗೆದುಕೊಂಡು ಹಾಜರಾತಿಯನ್ನು ಸರಿಯಾಗಿ ಅನುಸರಣೆ ಮಾಡುವುದರಿಂದ, ಶೇ.೯೦ ರಷ್ಟು ಸಮಸ್ಯೆಗಳು ಬಗೆಹರಿಯುತ್ತದೆ ಎಂದರು.

ಡಾ. ಬಸವರಾಜು .ಸಿ ರವರು ಮಾತನಾಡಿ, Biometric ಅನ್ನು ವಿಶ್ವವಿದ್ಯಾನಿಲಯದ ಒಟ್ಟಾರೆ ಸಿಬ್ಬಂದಿಗಳಿಗೆ ಕಡ್ಡಾಯ ಮಾಡುವುದರಿಂದ ಸಮಸ್ಯೆಗಳು ಬಗೆಹರಿಯುತ್ತದೆ ಎಂದರು.

ಡಾ. ಟಿ.ಆರ್. ಚಂದ್ರಶೇಖರ್‌ರವರು ಮಾತನಾಡಿ, AICTE ಪ್ರಕಾರ ಕ್ರೀಡಾ ಚಟುವಟಿಕೆಗಳನ್ನು ಪ್ರೋತ್ಸಾಹ ಮಾಡುವುದು ಕರ್ತವ್ಯವಾಗಿದೆ. ವಿಶ್ವವಿದ್ಯಾನಿಲಯದ ತಾಂತ್ರಿಕ ಕಾಲೇಜಿಗೆ ಒಬ್ಬರನ್ನು ನಿಯೋಜನೆ ಮಾಡಬೇಕೆಂದರು.

ಮಾನ್ಯ ಕುಲಪತಿಗಳು ಮಾತನಾಡಿ, AICTE ಪ್ರಕಾರ ಮೈಸೂರು ವಿಶ್ವವಿದ್ಯಾನಿಲಯಲ್ಲಿ ಕೆಲವು ವಿಭಾಗಗಳಿವೆ. ಅದರಲ್ಲೂ ಎಂ.ಬಿ.ಎ. ಸಹ ಒಂದಾಗಿದೆ. ಕ್ರೀಡಾ ಆಸಕ್ತಿ ಹೊಂದಿರುವವರು ಕ್ರೀಡೆಯಲ್ಲಿ ಭಾಗವಹಿಸುತ್ತಾರೆ. ಮಾನಸಗಂಗೋತ್ರಿಯಲ್ಲಿರುವ ಸೌಲಭ್ಯಗಳು ಬೇರೆಡೆ ಸಿಗುವುದು ವಿರಳವೆಂದರು.

ಕುಲಸಚಿವರು ಮಾತನಾಡಿ, ಶ್ರೀ ರವಿ, ತಾತ್ಕಾಲಿಕ ಸಹಾಯಕ ನಿರ್ದೇಶಕ, ಕ್ರೀಡಾ ವಿಭಾಗ, ಇವರು ಎರಡು ಕಡೆ ವೇತನ ಪಡೆಯುತ್ತಿದ್ದರು. ಯಾವುದೇ ಉದ್ಯೋಗಿಯು ಎರಡು ಕಡೆ ವೇತನ ಪಡೆಯುವಂತಿಲ್ಲ

| | |
|---|---|
| | ಎಂದರು.<br><br>ಡಾ. ಟಿ.ಆರ್. ಚಂದ್ರಶೇಖರ್ ರವರು ಮಾತನಾಡಿ, ದೈಹಿಕ ಶಿಕ್ಷಣ ವಿಭಾಗದಲ್ಲಿರುವ 7-8 ಮಂದಿ ಕ್ರೀಡಾ ಉದ್ಯೋಗಿಗಳಲ್ಲಿ ಒಬ್ಬರನ್ನು ನಿಯೋಜನೆ ಮಾಡಬೇಕೆಂದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ನಿರ್ದೇಶಕರು ಒಬ್ಬರು ಕ್ರೀಡಾ ಉದ್ಯೋಗಿಯ ಅವಶ್ಯಕತೆಯಿದೆ ವಿಶ್ವವಿದ್ಯಾನಿಲಯಕ್ಕೆ ಪತ್ರ ಬರೆದರೆ, ನಿಯೋಜನೆ ಮಾಡಲಾಗುವುದು. ಹಾಗೂ ಒಬ್ಬ ಉದ್ಯೋಗಿಗೆ ಎರಡು ಕಡೆ ವೇತನ ನೀಡಲು ಅವಕಾಶವಿಲ್ಲವೆಂದರು. |
| ತೀರ್ಮಾನ | **ವಿಶ್ವವಿದ್ಯಾನಿಲಯದ ತಾಂತ್ರಿಕ ಶಾಲೆಯ ಅಧಿನಿಯಮ ರಚನಾ ಸಮಿತಿಯು ಸಿದ್ಧಪಡಿಸಿರುವ ಕರಡು ಅಧಿನಿಯಮವನ್ನು ಘನತೆವೆತ್ತ ಕುಲಾಧಿಪತಿಗಳ ಅಂಕಿತಕ್ಕಾಗಿ ಸರ್ಕಾರಕ್ಕೆ ಕಳುಹಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| ಸಾಮಾನ್ಯ ಸಭೆ 2024/1.4 | ಡಾ. ನಿಂಗಮ್ಮ ಸಿ. ಬೆಟ್ಸೂರ್, ಪ್ರಾಧ್ಯಾಪಕರು, ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ದುಬೈಗೆ ತೆರಳಲು ಅನುಮತಿ ನೀಡುವ ಬಗ್ಗೆ. |
| ತೀರ್ಮಾನ | **ಡಾ. ನಿಂಗಮ್ಮ ಸಿ. ಬೆಟ್ಸೂರ್, ಪ್ರಾಧ್ಯಾಪಕರು, ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ದಿನಾಂಕ: 01-02-2024ರಿಂದ 06-02-2024 ರವರೆಗೆ ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊಣೆಗಾರಿಗೆ ಇಲ್ಲದಂತೆ ತಮ್ಮ ಹಕ್ಕಿನಲ್ಲಿರುವ ಸಾಂದರ್ಭಿಕ ರಜೆಯನ್ನು ಉಪಯೋಗಿಸಿಕೊಂಡು ದುಬೈಗೆ ಹೋಗಿಬರಲು ಹಾಗೂ ಕೇಂದ್ರ ಸ್ಥಾನವನ್ನು ಬಿಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| ಸಾಮಾನ್ಯ ಸಭೆ 2024/1.5 | ಡಾ. ಆರ್. ವಿದ್ಯಾ, ಪ್ರಾಧ್ಯಾಪಕರು, ಸಂಖ್ಯಾಶಾಸ್ತ್ರ ವಿಭಾಗ, ಯುವರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರಿಗೆ ನೆದರ್‌ಲ್ಯಾಂಡ್ ದೇಶದ ಅಮ್‌ಸ್ಟರ್‌ಡಮ್‌ಗೆ ಹೋಗಿಬರಲು ಅನುಮತಿ ನೀಡುವ ಕುರಿತು ಸಿಂಡಿಕೇಟ್ ಸಭೆಯ ಅನುಮೋದನೆ ಪಡೆಯುವುದರ ಬಗೆಗೆ. |
| ತೀರ್ಮಾನ | **ಡಾ. ಆರ್. ವಿದ್ಯಾ, ಪ್ರಾಧ್ಯಾಪಕರು, ಸಂಖ್ಯಾಶಾಸ್ತ್ರ ವಿಭಾಗ, ಯುವರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ದಿನಾಂಕ: 20-02-2024 ರಿಂದ 10-05-2024ರವರೆಗೆ ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊಣೆಗಾರಿಕೆ ಇಲ್ಲದಂತೆ ತಮ್ಮ ಹಕ್ಕಿನಲ್ಲಿರುವ ರಜೆಯನ್ನು ಉಪಯೋಗಿಸಿಕೊಂಡು ಸ್ವಂತ ಕಾರ್ಯನಿಮಿತ್ತ ನೆದರ್‌ಲ್ಯಾಂಡ್ ದೇಶದ ಅಮ್‌ಸ್ಟರ್‌ಡಮ್‌ಗೆ ಹೋಗಿಬರಲು ಹಾಗೂ ಕೇಂದ್ರ ಸ್ಥಾನವನ್ನು ಬಿಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| ಸಾಮಾನ್ಯ ಸಭೆ 2024/1.6 | ಶ್ರೀ ಮುಜಾವರ್ ಎಸ್.ಕೆ., ಸಹಾಯಕ ನಿರ್ದೇಶಕರು, ತೋಟಗಾರಿಕಾ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ದುಬೈಗೆ ತೆರಳಲು ಅನುಮತಿ ನೀಡುವ ಬಗ್ಗೆ. |
| ತೀರ್ಮಾನ | **ಶ್ರೀ ಮುಜಾವರ್ ಎಸ್.ಕೆ., ಸಹಾಯಕ ನಿರ್ದೇಶಕರು, ತೋಟಗಾರಿಕಾ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ದಿನಾಂಕ: 08-02-2024 ರಿಂದ 14-02-2024 ರವರೆಗೆ ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊಣೆಗಾರಿಕೆ ಇಲ್ಲದಂತೆ ತಮ್ಮ ಹಕ್ಕಿನಲ್ಲಿರುವ ರಜೆಯನ್ನು ಉಪಯೋಗಿಸಿಕೊಂಡು ದುಬೈಗೆ ಹೋಗಿಬರಲು ಹಾಗೂ ಕೇಂದ್ರ ಸ್ಥಾನವನ್ನು ಬಿಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| ಸಾಮಾನ್ಯ ಸಭೆ 2024/1.7 | ಶ್ರೀ ಸಿ. ಪುರುಷೋತ್ತಮ, ಅಧೀಕ್ಷಕರು (ಸಾಮಾನ್ಯ), ಆಡಳಿತ ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ವಿದೇಶ ಪ್ರವಾಸ ಕೈಗೊಳ್ಳಲು ಅನುಮತಿ ನೀಡುವ ಬಗ್ಗೆ. |
| ತೀರ್ಮಾನ | **ಶ್ರೀ ಸಿ. ಪುರುಷೋತ್ತಮ, ಅಧೀಕ್ಷಕರು (ಸಾಮಾನ್ಯ), ಆಡಳಿತ ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ದಿನಾಂಕ: 07-02-2024 ರಿಂದ 14-02-2024 ರವರೆಗೆ ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊಣೆಗಾರಿಕೆ ಇಲ್ಲದಂತೆ ತಮ್ಮ ಹಕ್ಕಿನಲ್ಲಿರುವ ರಜೆಯನ್ನು ಉಪಯೋಗಿಸಿಕೊಂಡು ದುಬೈಗೆ ಹೋಗಿಬರಲು ಹಾಗೂ ಕೇಂದ್ರ ಸ್ಥಾನವನ್ನು ಬಿಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |

| | |
|---|---|
| ಸಾಮಾನ್ಯ ಸಭೆ 2024/1.8 | ಮೈಸೂರು ವಿಶ್ವವಿದ್ಯಾನಿಲಯವು Deccan Heritage Foundation, Bengaluru and Heritage Matters, Bengaluru ಸಂಸ್ಥೆಗಳೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆಯ ಬಗ್ಗೆ ಅನುಸಮರ್ಥನೆಗಾಗಿ. |
| ತೀರ್ಮಾನ | **ಮೈಸೂರು ವಿಶ್ವವಿದ್ಯಾನಿಲಯವು Deccan Heritage Foundation, Bengaluru and Heritage Matters, Bengaluru ಸಂಸ್ಥೆಗಳೊಂದಿಗೆ U.S. Consulate General, Chennai ಅವರ Ambassadors Funds for Cultural Preservation (AFCP) Grant ನಿಂದ "ಜಯಲಕ್ಷ್ಮಿವಿಲಾಸ್ ಅರಮನೆಯ ಪಶ್ಚಿಮ ಭಾಗದ ಪುನಶ್ಚೇತನ/ಪುನರ್‌ನಿರ್ಮಾಣ ಕಾರ್ಯದ" ಉದ್ದೇಶಕ್ಕಾಗಿ ಮಾನ್ಯ ಕುಲಪತಿಯವರ ಆದೇಶಾನುಸಾರ ಸಿಂಡಿಕೇಟ್ ಸಭೆಯ ತೀರ್ಮಾನವನ್ನು ಕಾಯ್ದಿರಿಸಿ ದಿನಾಂಕ: 13-11-2022 ರಂದು ಒಡಂಬಡಿಕೆ ಮಾಡಿಕೊಂಡಿರುವುದನ್ನು ಸಿಂಡಿಕೇಟ್ ಸಭೆಯು ಸ್ಥಿರೀಕರಿಸಿತು.** |
| ಸಾಮಾನ್ಯ ಸಭೆ 2024/1.9 | ಮೈಸೂರು ವಿಶ್ವವಿದ್ಯಾನಿಲಯವು Deccan Heritage Foundation, Bengaluru and Harish and Bina Shah Foundation ಸಂಸ್ಥೆಗಳೊಂದಿಗೆ ಮಾಡಿಕೊಂಡಿರುವ Tripartite Agreement ನ ಬಗ್ಗೆ ಅನುಸಮರ್ಥನೆಗಾಗಿ. |
| ತೀರ್ಮಾನ | **ಮೈಸೂರು ವಿಶ್ವವಿದ್ಯಾನಿಲಯವು Deccan Heritage Foundation, Bengaluru and Harish and Bina Shah Foundation ಸಂಸ್ಥೆಗಳೊಂದಿಗೆ "ಜಯಲಕ್ಷ್ಮಿವಿಲಾಸ ಅರಮನೆ ಪುನಶ್ಚೇತನ/ಪುನರ್‌ನಿರ್ಮಾಣ ಕಾರ್ಯದ" ಉದ್ದೇಶಕ್ಕಾಗಿ ಮಾನ್ಯ ಕುಲಪತಿಯವರ ಆದೇಶಾನುಸಾರ ಸಿಂಡಿಕೇಟ್ ಸಭೆಯ ತೀರ್ಮಾನವನ್ನು ಕಾಯ್ದಿರಿಸಿ ದಿನಾಂಕ: 04-01-2024 ರಂದು Tripartite Agreement ಅನ್ನು ಮಾಡಿಕೊಂಡಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು.** |
| ಸಾಮಾನ್ಯ ಸಭೆ 2024/1.10 | Specialized Programme ಅಡಿಯಲ್ಲಿನ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಬಗ್ಗೆ-ಅನುಸಮರ್ಥನೆಗಾಗಿ. |
| ತೀರ್ಮಾನ | **Asia Pecific Institute of Embryology, # 12246/A, ವಿಜಯನಗರ 4ನೇ ಹಂತ, 2ನೇ ಫೇಸ್, ಔಟರ್ ರಿಂಗ್ ರಸ್ತೆ, ಮೈಸೂರು ಸಂಸ್ಥೆಯು M.Sc Clinical Embryology and Pre Implantation Genetics (PG) ಕೋರ್ಸ್‌ಗಳಿಗೆ ಮಾನ್ಯ ಕುಲಪತಿಯವರ ಆದೇಶಾನುಸಾರ ಮತ್ತು ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸಿ, ಅಧಿಸೂಚನೆ ಹೊರಡಿಸಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು.** |
| ಸಾಮಾನ್ಯ ಸಭೆ 2024/1.11 | Specialized Programme ಅಡಿಯಲ್ಲಿನ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಬಗ್ಗೆ-ಅನುಸಮರ್ಥನೆಗಾಗಿ. |
| ತೀರ್ಮಾನ | **ಮೈಸೂರ್ ಸ್ಕೂಲ್ ಆಫ್ ಡಿಸೈನ್, ಸಿಎ-01, ವಿಶ್ವವಿದ್ಯಾನಿಲಯ ಲೇಔಟ್, ದಟ್ಟಗಳ್ಳಿ ರಿಂಗ್ ರಸ್ತೆ ಹತ್ತಿರ, ಅಂಗಾಂಬುದಿ, ಮೈಸೂರು ಸಂಸ್ಥೆಯ B.Sc. (Interior Design & Built Environment) (UG) ಕೋರ್ಸ್‌ಗೆ ಹಾಗೂ ಮರಿಯನ್ ಇನ್ಸ್‌ಟಿಟ್ಯೂಟ್ ಆಫ್ ಪ್ರೊಫೆಷನಲ್ ಸ್ಟಡೀಸ್, ಎಂ.ಐ.ಟಿ. ಕ್ಯಾಂಪಸ್, ಕೆ.ಆರ್. ಮಿಲ್ಸ್, ಬೆಳವಾಡಿ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ ಸಂಸ್ಥೆಯ B.Sc. (Animation & VFX) and BBA (Catering and Hotel Management), BBA (Interior Design), BBA (Airline & Airport Management) and BBA (Costume Design & Fashion Technology) (UG) ಕೋರ್ಸ್‌ಗಳಿಗೆ ಮಾನ್ಯ ಕುಲಪತಿಯವರ ಆದೇಶಾನುಸಾರ ಮತ್ತು ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ, ಅಧ್ಯಯನ** |

| | |
|---|---|
| | **ಮಂಡಳಿಗಳನ್ನು ಪುನರ್‌ರಚಿಸಿ, ಅಧಿಸೂಚನೆ ಹೊರಡಿಸಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು.** |
| ಸಾಮಾನ್ಯ ಸಭೆ 2024/1.12 | International Institute of Clinical Embryology Research Center, # 81-82, ನಂಜನಗೂಡು ರಸ್ತೆ, 1ನೇ ಕ್ರಾಸ್, Near VGKKTRC Trust ಚಾಮುಂಡಿಪುರಂ, ಮೈಸೂರು ಇವರು ಹೊಸದಾಗಿ Clinical Embryology ವಿಷಯದಲ್ಲಿ ಪಿಎಚ್.ಡಿ. ಸಂಶೋಧನೆ ನಡೆಸಲು ವಿಶ್ವವಿದ್ಯಾನಿಲಯದಿಂದ ಸಂಶೋಧನಾ ಕೇಂದ್ರದ ಮಾನ್ಯತೆ ಕೋರಿರುವ ಸಂಬಂಧ ಪರಿವೀಕ್ಷಣಾ ಸಮಿತಿ ಸಲ್ಲಿಸಿರುವ ವರದಿಗೆ ಅನುಮೋದನೆ ಕೋರುವ ಬಗ್ಗೆ. |
| ತೀರ್ಮಾನ | **ಪರಿವೀಕ್ಷಣಾ ಸಮಿತಿಯ ಶಿಫಾರಸ್ಸಿನನ್ವಯ ಹಾಗೂ "The University of Mysore-Recognition of certain institutions for specified studies/specialized and Research Statutes 2008" ಅವಕಾಶದನುಸಾರ International Institute of Clinical Embryology Research Center, # 81-82, ನಂಜನಗೂಡು ರಸ್ತೆ, 1ನೇ ಕ್ರಾಸ್, Near VGKKTRC Trust ಚಾಮುಂಡಿಪುರಂ, ಮೈಸೂರು ಸಂಸ್ಥೆಯು ಹೊಸದಾಗಿ Clinical Embryology ವಿಷಯದಲ್ಲಿ ವಿಶ್ವವಿದ್ಯಾನಿಲಯದಿಂದ ಸಂಶೋಧನಾ ಕೇಂದ್ರದ ಮಾನ್ಯತೆಯನ್ನು ನೀಡಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು.** |
| ಸಾಮಾನ್ಯ ಸಭೆ 2024/1.13 | ವಿಶ್ವವಿದ್ಯಾನಿಲಯದ Specialized Programme ವಿವಿಧ ಕೋರ್ಸ್‌ಗಳನ್ನು ನಡೆಸಲು ಮಾನ್ಯತೆ ಪಡೆದಿರುವ International College of Financial Planning ಬೆಳವಾಡಿ, ಶ್ರೀರಂಗಪಟ್ಟಣ ತಾ., ಮಂಡ್ಯ ಜಿಲ್ಲೆ ಇವರು ಸಂಸ್ಥೆಯ ವಿಳಾಸ ಬದಲಾವಣೆ ಕೋರಿದ್ದ ಸಂಬಂಧ ಪರಿವೀಕ್ಷಣಾ ಸಮಿತಿ ಸಲ್ಲಿಸಿರುವ ವರದಿಯ ಬಗ್ಗೆ. |
| ತೀರ್ಮಾನ | **ವಿಶ್ವವಿದ್ಯಾನಿಲಯದ Specialized Programme ನಡಿ ಕೋರ್ಸ್‌ಗಳನ್ನು ನಡೆಸಲು ಮಾನ್ಯತೆ ಪಡೆದಿರುವ International College of Financial Planning ಸಂಸ್ಥೆಯ ವಿಳಾಸವನ್ನು ಎಂಐಟಿ ಆವರಣ, ಬೆಳವಾಡಿ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ ಇಲ್ಲಿಂದ # 128ಸಿ 'ಎನ್' ಬ್ಲಾಕ್, ಜೆಸಿಎಸ್‌ಟಿ, ಕುವೆಂಪುನಗರ, ಕುವೆಂಪುನಗರ ಬಸ್ ಡಿಪೋ ಹತ್ತಿರ, ಮೈಸೂರು-570 027 ಇಲ್ಲಿಗೆ ಸ್ಥಳ ಬದಲಾವಣೆ ಮಾಡಿಕೊಳ್ಳಲು ಸಿಂಡಿಕೇಟ್ ಸಭೆಯು ಅನುಮತಿಸಿತು.** |
| ಸಾಮಾನ್ಯ ಸಭೆ 2024/1.14 | ಕಾನೂನು ಮತ್ತು ಶರಣ ಸಾಹಿತ್ಯ ಅಧ್ಯಯನ ಮಂಡಳಿಗಳನ್ನು ಪುನರ್‌ರಚಿಸುವ ಬಗ್ಗೆ. |
| ತೀರ್ಮಾನ | **ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 33 (1) ಮತ್ತು (2)ರ ಪ್ರಕಾರ ಕಾನೂನು ಮತ್ತು ಶರಣ ಸಾಹಿತ್ಯ ಅಧ್ಯಯನ ಮಂಡಳಿಗಳನ್ನು ಪುನರ್‌ರಚಿಸುವ ವಿವೇಚಾನುಸಾರ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲು ಸಿಂಡಿಕೇಟ್ ಸಭೆಯು ನಿರ್ಣಯಿಸಿತು.** |
| ಸಾಮಾನ್ಯ ಸಭೆ 2024/1.15 | ಡಾ. ರಾಚೋಟಿ ದೇವರು, ಅತಿಥಿ ಉಪನ್ಯಾಸಕರು, ಸಂಸ್ಕೃತ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ಸಂಸ್ಕೃತ ಅಧ್ಯಯನ ವಿಭಾಗದಲ್ಲಿ ಉಪವಾಸ ಸತ್ಯಾಗ್ರಹ ಕೈಗೊಳ್ಳುತ್ತಿರುವ ಬಗ್ಗೆ. |
| | ಕುಲಸಚಿವರು ಮಾತನಾಡಿ, ಡಾ. ರಾಚೋಟಿ ದೇವರು, ಅತಿಥಿ ಉಪನ್ಯಾಸಕರು, ಸಂಸ್ಕೃತ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ಸದರಿ ವಿಭಾಗದ ಅತಿಥಿ ಉಪನ್ಯಾಸಕರಾದ ಡಾ. ಆರ್. ಸುರೇಶ್ ಅವರ ನಡುವೆ ನಡೆದಿರುವ ಘಟನೆಗಳಿಂದ ಸಮಸ್ಯೆ ಉದ್ಭವಿಸಿದ್ದು ದಿನಾಂಕ: 20-09-2022ರ ನಂತರ ಉಪವಾಸ ಹಾಗೂ ಸಮಾಧಿಯೋಗಕ್ಕೆ ಅಣಿಯಾಗುತ್ತೇನೆ ಎಂದು ತಿಳಿಸಿದ್ದು, ಈ ಸಂದರ್ಭದಲ್ಲಿ ನನ್ನ ಪ್ರಾಣಕ್ಕೆ ಧಕ್ಕೆಯಾದರೆ ಮೈಸೂರು ವಿಶ್ವವಿದ್ಯಾನಿಲಯವೇ ಹೊಣೆಯಾಗಿರುತ್ತದೆಂದು |

| | |
|---|---|
| | ತಿಳಿಸಿದ್ದ ಹಿನ್ನೆಲೆಯಲ್ಲಿ, ಆ ಅವಧಿಯಲ್ಲಿನ ಕುಲಪತಿಗಳು, ಸಂಸ್ಕೃತ ಅಧ್ಯಯನ ವಿಭಾಗದ ಅಧ್ಯಕ್ಷರು, ಎಸ್ಟೇಟ್ ಅಧಿಕಾರಿಗಳು ಮತ್ತು ಉಪಕುಲಸಚಿವ (ಸಾಮಾನ್ಯ) ಇವರುಗಳು ವಿಭಾಗಕ್ಕೆ ಭೇಟಿ ನೀಡಿ ಸಮಸ್ಯೆಯನ್ನು ಪರಿಹರಿಸಿದ್ದರು. ಮತ್ತೆ ಕಳೆದ ಒಂದೂವರೆ ತಿಂಗಳ ಹಿಂದೆ ಉಪವಾಸ ಸತ್ಯಾಗ್ರಹ ಮಾಡುತ್ತೇನೆಂದು ಪುನಃ ವಿಶ್ವವಿದ್ಯಾನಿಲಯಕ್ಕೆ ಪತ್ರ ಬರೆದಿರುತ್ತಾರೆ. ತದನಂತರ ಸಂಸ್ಕೃತ ಅಧ್ಯಯನ ವಿಭಾಗದ ಮುಂಭಾಗದಲ್ಲಿ ಉಪವಾಸ ಸತ್ಯಾಗ್ರಹ ಕುಳಿತಿದ್ದರು. ಹೀಗಾಗಿ ವಿಭಾಗದ ಅಧ್ಯಕ್ಷರಾದ ಪ್ರೊ. ವಿಜಯಕುಮಾರಿ ಎಸ್. ಕರಿಕಲ್ ಅವರು ಡಾ. ರಾಚೋಟಿ ದೇವರು ಅವರಿಗೆ ಸತ್ಯಾಗ್ರಹ ಕೈಬಿಡುವಂತೆ ಮನವರಿಕೆ ಮಾಡಿದ್ದರು. ಅದು ಪ್ರಯೋಜನವಾಗದೆ ಇರುವುದರಿಂದ ಮಾರನೇ ದಿವಸ ಖುದ್ದಾಗಿ ವಿಭಾಗಕ್ಕೆ ನಾನು ಭೇಟಿ ನೀಡಿದಾಗ, ಡಾ. ರಾಚೋಟಿ ದೇವರು ಅವರು ನನ್ನ ಮನವಿಯನ್ನು ತೆಗೆದುಕೊಳ್ಳಿ ಎಂದು ತಿಳಿಸಿ, ಆ ಮನವಿ ಪತ್ರದಲ್ಲಿ ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ತಾತ್ಕಾಲಿಕ ಅಧ್ಯಾಪಕೇತರ ಉದ್ಯೋಗಿಗಳನ್ನು ಖಾಯಂಗೊಳಿಸುವುದು ಹಾಗೂ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಪಾವತಿಸಿರುವ ಪ್ರವೇಶಾತಿ, ಪರೀಕ್ಷೆ ಮತ್ತು ವಿದ್ಯಾರ್ಥಿನಿಲಯದ ಶುಲ್ಕವನ್ನು ಮನ್ನಾ ಮಾಡಿ, ಉಚಿತವಾಗಿ ಶಿಕ್ಷಣ ನೀಡಬೇಕೆಂದು ತಿಳಿಸಿರುತ್ತಾರೆ. ಈ ಬೇಡಿಕೆಗಳನ್ನು ವಿಶ್ವವಿದ್ಯಾನಿಲಯ ಮತ್ತು ಸರ್ಕಾರ ಈಡೇರಿಸದಿದ್ದರೆ ನಾನು ಸಮಾಧಿಗೆ ಹೋಗುತ್ತೇನೆ. ನಾನು ಸಮಾಧಿಯಾದರೆ ಸರ್ಕಾರ ಮತ್ತು ವಿಶ್ವವಿದ್ಯಾನಿಲಯವೇ ಹೊಣೆಯಾಗುತ್ತದೆ ಎಂದು ತಿಳಿಸಿರುತ್ತಾರೆ.<br><br>ಅತಿಥಿ ಉಪನ್ಯಾಸಕರ ಕರ್ತವ್ಯ ಶೈಕ್ಷಣಿಕ ಉಪನ್ಯಾಸ ನೀಡುವುದು, ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುವುದಾಗಿರುತ್ತದೆ. ತಾವು ಆಗ್ರಹಿಸುತ್ತಿರುವ ವಿಷಯವು ಸರ್ಕಾರದ ನೀತಿ ವಿಷಯವಾಗಿರುವುದರಿಂದ ಸರ್ಕಾರದ ವಿರುದ್ಧವಾಗಿ ಹೇಳಿದಂತಾಗುತ್ತದೆ. ಇವರ ಅಲೋಚನೆಗಳು ಉತ್ತಮವಾಗಿದ್ದರೂ, ನಿಯಮಾನುಸಾರದ ನಡವಳಿಕೆಯಾಗಿರುವುದಿಲ್ಲ. ಇದು ಕಾನೂನುಬಾಹಿರವಾಗಿರುವುದರಿಂದ ಸತ್ಯಾಗ್ರಹವನ್ನು ಕೈಬಿಡಲು ಮನವರಿಕೆ ಮಾಡಿಕೊಡಲಾಗಿದೆ. ಮತ್ತು ಅವರು ಸಲ್ಲಿಸಿದ್ದ ಮನವಿಯನ್ನು ವಿಶ್ವವಿದ್ಯಾನಿಲಯದಿಂದ ಸರ್ಕಾರಕ್ಕೆ ಕಳುಹಿಸಿದ್ದರೂ, ಸರ್ಕಾರದಿಂದ ಏನು ಉತ್ತರ ಬಾರದಿರುವ ಕಾರಣವನ್ನು ತಿಳಿಸಿ ದಿನಾಂಕ: 29-01-2024 ರಿಂದ ವಿಶ್ವವಿದ್ಯಾನಿಲಯದ ಸಂಸ್ಕೃತ ಅಧ್ಯಯನ ವಿಭಾಗದಲ್ಲಿ ಪಾಠ-ಪ್ರವಚನಗಳಿಗೆ ಯಾವುದೇ ತೊಂದರೆಯಾಗದಂತೆ ಪಠ್ಯ ಸಮಯವನ್ನು ಹೊರತುಪಡಿಸಿ, ಅನಿರ್ಧಿಷ್ಟ ಅವಧಿಯವರೆಗೆ ಮೌನ ಹಾಗೂ ಉಪವಾಸ ಸತ್ಯಾಗ್ರಹವನ್ನು ಮಾಡಲು ಸಂಕಲ್ಪಿಸಿರುತ್ತೇನೆ. ನನ್ನ ಪ್ರಾಣಕ್ಕೆ ಹಾನಿಯಾದರೆ ಸರ್ಕಾರದ ನಿರ್ಲಕ್ಷ್ಯವೇ ಕಾರಣ ಎಂದು ತಿಳಿಸಿರುತ್ತಾರೆ ಎಂದು ಸಭೆಗೆ ವಿಷಯ ಮಂಡಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಡಾ. ರಾಚೋಟಿ ದೇವರು ನನಗೂ ಈ ರೀತಿ ತಿಳಿಸಿದಾಗ, ಸತ್ಯಾಗ್ರಹ ಮಾಡಿದರೆ ಕ್ರಮ ಜರುಗಿಸಲಾಗುವುದೆಂದು ತಿಳಿಸಿದ್ದೇನೆ. ಈ ಸಂಬಂಧ ಸಿಂಡಿಕೇಟ್ ಸಭೆಯಲ್ಲಿ ವಿಷಯವನ್ನು ಮಂಡಿಸಿ ಸಿಂಡಿಕೇಟ್ ಸದಸ್ಯರುಗಳ ಅಭಿಪ್ರಾಯ ಪಡೆಯುವುದು ಸೂಕ್ತವೆಂದು ಮಂಡಿಸಲಾಗಿದೆ. ಈ ಬಗ್ಗೆ ಯಾವ ಕ್ರಮ ತೆಗೆದುಕೊಳ್ಳಬಹುದೆಂದು ಸದಸ್ಯರುಗಳು ತಿಳಿಸಬೇಕೆಂದರು.<br><br>ಶ್ರೀ ನಟರಾಜು .ಹೆಚ್.ಎಸ್ ಅವರು ಮಾತನಾಡಿ, ವಿಶ್ವವಿದ್ಯಾನಿಲಯದ ಶೈಕ್ಷಣಿಕ ವಾತಾವರಣಕ್ಕೆ ಪೂರಕವಾಗಿಲ್ಲದ ಕಾರಣ ವಿಶ್ವವಿದ್ಯಾನಿಲಯದ ನಿಯಮಗಳನ್ವಯ ಡಾ. ರಾಚೋಟಿ ದೇವರು ಇವರ ಮೇಲೆ ಶಿಸ್ತು ಕ್ರಮ ತೆಗೆದುಕೊಳ್ಳಬೇಕೆಂದರು.<br><br>ಕುಲಸಚಿವರು ಮಾತನಾಡಿ, ಅತಿಥಿ ಉಪನ್ಯಾಸಕರಾಗಿರುವುದರಿಂದ ಶಿಸ್ತು ಕ್ರಮ ತೆಗೆದುಕೊಳ್ಳುವುದೇನಿಲ್ಲ ಕರ್ತವ್ಯದಿಂದ ಬಿಡುಗಡೆ ಮಾಡಬಹುದು. ಇವರು ತಮ್ಮ ಪ್ರಾಣಹಾನಿ ಆದಲ್ಲಿ ಸರ್ಕಾರವನ್ನು ಹೊಣೆಗಾರಿಕೆ ಮಾಡುವುದು ಒಪ್ಪತಕ್ಕದ್ದಲ್ಲ. ಇವರಿಗೆ 12 ಗಂಟೆಗಳ ಕಾರ್ಯಭಾರವನ್ನು ನೀಡಿ, ರೂ .28,500/-ಗಳ ವೇತನವನ್ನು ಪಾವತಿಸಿ ಗೌರವಾನ್ವಿತ ಅತಿಥಿ ಶಿಕ್ಷಕರ ಸ್ಥಾನವನ್ನು ನೀಡಿರುವುದು ಸರ್ಕಾರದ ಘನತೆಯ ನಡೆಯಾಗಿದೆ. ಸರ್ಕಾರವನ್ನು ತಮ್ಮ ಪ್ರಾಣಹಾನಿಗೆ ಹೊಣೆಗಾರಿಕೆ ಮಾಡಿರುವುದನ್ನು ಸಭೆಯ ಗಮನಕ್ಕೆ ಹಾಗೂ ನಿರ್ದೇಶನಕ್ಕಾಗಿ ಮಂಡಿಸಲಾಗಿದೆ ಎಂದು ತಿಳಿಸಿದರು.<br><br>ಡಾ. ಬಸವರಾಜು .ಸಿ ಅವರು ಮಾತನಾಡಿ, ಮಾನ್ಯ ಕುಲಪತಿಗಳು ಈಗಾಗಲೇ 2-3 ಬಾರಿ ಹೇಳಿರುವುದರಿಂದ, ಪುನಃ ಪ್ರಸ್ತಾಪ ಮಾಡುವ ಬದಲು ಸಭೆಯ ತೀರ್ಮಾನ |

| | |
|---|---|
| | ಕೈಗೊಂಡು ಪ್ರಕರಣವನ್ನು ಪೂರ್ಣಗೊಳಿಸುವುದು ಸೂಕ್ತವೆಂದರು.<br>ಮಾನ್ಯ ಕುಲಪತಿಗಳು ಮಾತನಾಡಿ, ಸಿಂಡಿಕೇಟ್‌ನ ಎಲ್ಲಾ ಸದಸ್ಯರು ತೆಗೆದುಕೊಳ್ಳುವ ತೀರ್ಮಾನದಂತೆಯೇ ಕ್ರಮವಹಿಸುವುದಾಗಿ ತಿಳಿಸಿದರು.<br>ಕುಲಸಚಿವರು ಮಾತನಾಡಿ, ಸಾರ್ವಜನಿಕ ಸ್ಥಳದಲ್ಲಿ ಈ ರೀತಿ ಸತ್ಯಾಗ್ರಹ ಮಾಡುವಂತಿಲ್ಲ. ಆ ರೀತಿ ಮಾಡಿದ್ದಲ್ಲಿ ವಿಶ್ವವಿದ್ಯಾನಿಲಯದ ಭದ್ರತೆಯ ಹಿತದೃಷ್ಟಿಯಿಂದ ಅನಾವಶ್ಯಕ ಅನಾಹುತಗಳನ್ನು ತಪ್ಪಿಸಲು ವ್ಯಾಪ್ತಿಯ ಪೋಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸುವುದು ಸೂಕ್ತ ಎಂದರು. ಆದರೆ ಆ ಮಟ್ಟಕ್ಕೆ ಹೋಗುವುದಿಲ್ಲ. ರಾತ್ರಿಯ ಅವಧಿಯಲ್ಲಿ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದ ಸಂದರ್ಭದಲ್ಲಿ ಏನಾದರೂ ಜೀವಕ್ಕೆ ಹೆಚ್ಚುಕಡಿಮೆಯಾದರೆ ಯಾರು ರಕ್ಷಣೆ ನೀಡುತ್ತಾರೆ. ಆದ್ದರಿಂದ ವಿಶ್ವವಿದ್ಯಾನಿಲಯದ ಸಂಕರಕ್ಷಣೆಗಾಗಿ ನಿಯಮಗಳನ್ವಯ ಕ್ರಮವಹಿಸಬೇಕಾಗುತ್ತದೆ ಎಂದರು.<br>ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ಎಫ್‌ಐಆರ್ ಮಾಡುವುದು ಬೇಡ, ಅವರನ್ನು ಗೌರವಯುತವಾಗಿ ಕಳುಹಿಸಿಕೊಡಿ ಎಂದು ತಿಳಿಸಿದರು.<br>ಡಾ. ಬಸವರಾಜು ಸಿ. ಅವರು ಮಾತನಾಡಿ ಇವರು ಅತಿಥಿ ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿರುವುದರಿಂದ, ವಿಭಾಗದ ಮುಂದೆ ಸತ್ಯಾಗ್ರಹ ಮಾಡುತ್ತೇನೆಂದು ತಿಳಿಸಿರುತ್ತಾರೆ. ಆದ್ದರಿಂದ ಅವರನ್ನು ಆ ಹುದ್ದೆಯಿಂದಲೇ ಬಿಡುಗಡೆ ಮಾಡಬೇಕೆಂದರು.<br>ಶ್ರೀ ನಾಗರಾಜು .ಸಿ ಅವರು ಮಾತನಾಡಿ, ಅತಿಥಿ ಉಪನ್ಯಾಸಕರಾದ ಸದರಿಯವರನ್ನು ಬಿಡುಗಡೆ ಮಾಡಿದರೂ ಧರಣಿ ಮಾಡುತ್ತಾರೆಂದು ಭಾವಿಸುವ ಬದಲು ಈ ಸಿಂಡಿಕೇಟ್ ಸಭೆಯಲ್ಲಿಯೇ ತೀರ್ಮಾನವನ್ನು ತೆಗೆದುಕೊಂಡು ಕ್ರಮ ವಹಿಸೋಣವೆಂದರು.<br>ಡಾ. ಬಸವರಾಜು .ಸಿ ಅವರು ಮಾತನಾಡಿ, ಡಾ. ರಾಚೋಟಿ ದೇವರು ಇವರು ಬೇಡಿಕೆ ಈಡೇರದಿದ್ದಲ್ಲಿ ಉಪವಾಸ ಸತ್ಯಾಗ್ರಹ ಮಾಡಿ ಸಮಾಧಿಯಾಗುತ್ತೇನೆಂದು ತಿಳಿಸಿರುವುದರಿಂದ, ವಿಶ್ವವಿದ್ಯಾನಿಲಯದ ಸುರಕ್ಷತೆಗಾಗಿ ಏನಾದರೂ ಕ್ರಮ ತೆಗೆದುಕೊಳ್ಳುವುದು ಸೂಕ್ತ. ಹಾಗೂ ಎರಡು ವರ್ಷ ಅಥವಾ ಎರಡು ದಿನವಾಗಲೀ ವಿಶ್ವವಿದ್ಯಾನಿಲಯದ ಅಧಿಕಾರಿಗಳಾಗಿರಬಹುದು ಅಥವಾ ಸಿಂಡಿಕೇಟ್ ಸದಸ್ಯರುಗಳಾಗಿರಬಹುದು, ಅಧಿಕಾರದಲ್ಲಿದ್ದಾಗ ಏನು ಮಾಡುತ್ತೇವೆಯೋ ಅದು ಮುಖ್ಯವಾಗಿರುತ್ತದೆ ಎಂದರು.<br>ಮಾನ್ಯ ಕುಲಪತಿಗಳು ಮಾತನಾಡಿ, ಡಾ. ರಾಚೋಟಿ ದೇವರು ಈ ರೀತಿ ಸತ್ಯಾಗ್ರಹ ಮಾಡಿದರೆ, ಇದು ವಿದ್ಯಾರ್ಥಿಗಳಿಗೆ ಹಾಗೂ ಇತರೆ ಅಧ್ಯಾಪಕರುಗಳಿಗೆ ಯಾವ ರೀತಿ ಪರಿಣಾಮ ಬೀರಬಹುದು ಎಂದರು.<br>ಕುಲಸಚಿವರು ಮಾತನಾಡಿ, ಡಾ. ರಾಚೋಟಿ ದೇವರು ಇವರೊಂದಿಗೆ ಈ ಹಿಂದೆ ಕೆಲವು ಮಂದಿ ತಾತ್ಕಾಲಿಕ ಅಧ್ಯಾಪಕೇತರ ಉದ್ಯೋಗಿಗಳು ಸತ್ಯಾಗ್ರಹ ಕುಳಿತಿದ್ದರು. ಫೋಟೋ ಮತ್ತು ವಿಡಿಯೋ ಮಾಡಿಕೊಂಡು ಇಲ್ಲಿರುವ ಉದ್ಯೋಗಿಗಳನ್ನು ಹೊರಹಾಕಲಾಗುವುದೆಂದು ತಿಳಿಸಿದಾಗ, ಅವರೆಲ್ಲರೂ ಎದ್ದು ಹೋದರು. ಇಂತಹ ಪ್ರಸಂಗಗಳು ಶೈಕ್ಷಣಿಕ ಪರಿಸರವನ್ನು ಹಾಳುಮಾಡುತ್ತವೆ ಎಂದರು.<br>ಮಾನ್ಯ ಕುಲಪತಿಗಳು ಮಾತನಾಡಿ, ಏನಾದರೂ ಸಮಸ್ಯೆಯಿದ್ದರೆ ವಿಶ್ವವಿದ್ಯಾನಿಲಯದ ಅಧಿಕಾರಿಗಳೊಂದಿಗೆ ಚರ್ಚಿಸಿ ಬಗೆಹರಿಸಿಕೊಳ್ಳಬಹುದು. ಅದರ ಬದಲು ವಿಶ್ವವಿದ್ಯಾನಿಲಯದ ಅಧಿಕಾರಿಗಳು ನಾವಿರುವಡೆಗೆ ಬಂದು ಸಮಸ್ಯೆ ಬಗೆಹರಿಸಬೇಕೆಂದು ನಿರೀಕ್ಷಿಸುತ್ತಾರೆ. ವಿಶ್ವವಿದ್ಯಾನಿಲಯದಿಂದ ಬಗೆಹರಿಸುವ ವಿಷಯವಾದರೆ, ವಿಶ್ವವಿದ್ಯಾನಿಲಯ ಹಾಗೂ ಸಿಂಡಿಕೇಟ್ ಸಭೆಯು ಬಗೆಹರಿಸಬಹುದು. ಸರ್ಕಾರದ ನೀತಿ ನಿಯಮಗಳನ್ನು ನಾವು ಬಗೆಹರಿಸಲು ಯಾವುದೇ ಅಧಿಕಾರವಿರುವುದಿಲ್ಲವೆಂದರು.<br>ಕುಲಸಚಿವರು ಮಾತನಾಡಿ, ನಾವುಗಳು ಸರ್ಕಾರದ ನೀತಿ ನಿಯಮಗಳನ್ನು ಪ್ರಶ್ನೆ ಮಾಡುವುದಕ್ಕಾಗುವುದಿಲ್ಲ. ಅದನ್ನು ಎಲ್ಲರೂ ಪಾಲಿಸಬೇಕೆಂದರು.<br>ಶ್ರೀ ನಾಗರಾಜು ಸಿ. ರವರು ಮಾತನಾಡಿ, ಚರ್ಚಿಸುವ ಬದಲು ಡಾ. ರಾಚೋಟಿ ದೇವರು ಇವರನ್ನು ಕರ್ತವ್ಯದಿಂದ ಬಿಡುಗಡೆ ಮಾಡಿ, ಬೇರೆಯವರನ್ನು ನೇಮಕ ಮಾಡುವುದು. ಮತ್ತೊಮ್ಮೆ ಅವಕಾಶ ನೀಡಿದರೆ ಕುಲಪತಿಗಳು ಹಾಗೂ ಕುಲಸಚಿವರಿಗೆ ಪರೀಕ್ಷೆ |

| | |
|---|---|
| | ಮಾಡಿದಂತಾಗುತ್ತದೆ ಎಂದರು.<br>ಶ್ರೀ ಮಹದೇಶು ರವರು ಮಾತನಾಡಿ, ಕುಲಸಚಿವರು ತಿಳಿಸಿದಂತೆ ಕಾನೂನಿನಿಂದ ರಕ್ಷಣೆ ಬೇಕು ಎನ್ನುವುದಾದರೆ, ಅದನ್ನು ಪರ್ಯಾಯವಾಗಿಟ್ಟುಕೊಳ್ಳುವುದು. ಏನಾದರೂ ಹೆಚ್ಚುಕಡಿಮೆಯಾದರೆ ಕುಲಪತಿ ಅಥವಾ ಕುಲಸಚಿವರನ್ನು ಹೊಣೆ ಮಾಡಬಾರದು ಎಂದರು.<br>ಮಾನ್ಯ ಕುಲಪತಿಗಳು ಮಾತನಾಡಿ, ಡಾ. ರಾಚೋಟಿ ದೇವರು ಅವರಿಗೆ ಪತ್ರಮುಖೇನ ದಿನಾಂಕ: 29-01-2024 ರಂದು ಉಪವಾಸ ಸತ್ಯಾಗ್ರಹ ಮಾಡಬಾರದೆಂದು, ಒಂದು ವೇಳೆ ಸತ್ಯಾಗ್ರಹ ಕೈಗೊಂಡರೆ ಕರ್ತವ್ಯದಿಂದ ಬಿಡುಗಡೆ ಮಾಡಲಾಗುವುದೆಂದು ತಿಳಿಸುವುದು. ವಿಶ್ವವಿದ್ಯಾನಿಲಯದ ಪತ್ರಕ್ಕೆ ಪ್ರತಿಕ್ರಿಯಿಸದಿದ್ದಲ್ಲಿ ಅತಿಥಿ ಉಪನ್ಯಾಸಕರ ಕರ್ತವ್ಯದಿಂದ ಬಿಡುಗಡೆ ಮಾಡಲಾಗುವುದೆಂದರು.<br>ಮಾನ್ಯ ಕುಲಪತಿಯವರ ಪ್ರಸ್ತಾವನೆಗೆ ಸಿಂಡಿಕೇಟ್ ಸಭೆಯು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿತು. |
| ತೀರ್ಮಾನ | **ಡಾ. ರಾಚೋಟಿ ದೇವರು, ಅತಿಥಿ ಉಪನ್ಯಾಸಕರು, ಸಂಸ್ಕೃತ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಅವರಿಗೆ ಸತ್ಯಾಗ್ರಹ ಮಾಡದಂತೆ ವಿಶ್ವವಿದ್ಯಾನಿಲಯದಿಂದ ನೋಟಿಸ್ ನೀಡುವುದು. ಅದಕ್ಕೆ ಅವರು ಒಪ್ಪದಿದ್ದಲ್ಲಿ ವಿಶ್ವವಿದ್ಯಾನಿಲಯದ ಶೈಕ್ಷಣಿಕ ವಾತಾವರಣವನ್ನು ಸಂರಕ್ಷಿಸುವ ಹಿತದೃಷ್ಟಿಯಿಂದ ದಿನಾಂಕ : 29.01.2024 ರಂದು ಅವರನ್ನು ಅತಿಥಿ ಉಪನ್ಯಾಸಕ ಹುದ್ದೆಯಿಂದ ಬಿಡುಗಡೆಗೊಳಿಸಲು ಸಿಂಡಿಕೇಟ್ ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.** |
| ಸಾಮಾನ್ಯ ಸಭೆ 2024/1.16 | 2023-24ನೇ ಸಾಲಿನಲ್ಲಿ ನಡೆಯಲಿರುವ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ರಚನೆ ಮಾಡಿರುವ ಪರೀಕ್ಷಾ ಮಂಡಳಿಗಳ ಬಗ್ಗೆ-ಅನುಸಮರ್ಥನೆಗಾಗಿ. |
| ತೀರ್ಮಾನ | **ವಿಶ್ವವಿದ್ಯಾನಿಲಯದ ಕಾಯ್ದೆ 2000 ಪ್ರಕರಣ 36ರ ಅನ್ವಯ 2023-24ನೇ ಸಾಲಿನಲ್ಲಿ ನಡೆಯಲಿರುವ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ BOAE ಸಭೆಯಲ್ಲಿ ಶಿಫಾರಸ್ಸು ಮಾಡಿರುವ ಅಧ್ಯಕ್ಷರು ಮತ್ತು ಸದಸ್ಯರುಗಳನ್ನು ಒಳಗೊಂಡಂತೆ ಪರೀಕ್ಷಾ ಮಂಡಳಿಗಳನ್ನು ರಚನೆ ಮಾಡಿ, ಮಾನ್ಯ ಕುಲಪತಿಗಳ ಅನುಮೋದನೆ ಪಡೆದು ಸಿಂಡಿಕೇಟ್ ಸಭೆಯ ನಿರ್ಣಯವನ್ನು ಕಾಯ್ದಿರಿಸಿ ಹೊರಡಿಸಲಾಗಿರುವ ಅಧಿಸೂಚನೆಗಳನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು.** |
| ಸಾಮಾನ್ಯ ಸಭೆ 2024/1.17 | ಅಂಕಪಟ್ಟಿಗಳನ್ನು ಮುದ್ರಿಸಿ ವಿದ್ಯಾರ್ಥಿಗಳಿಗೆ ವಿತರಿಸುವ ಬಗ್ಗೆ.-ಅನುಸಮರ್ಥನೆಗಾಗಿ. |
| ತೀರ್ಮಾನ | **ವಿದೇಶಿ ವಿದ್ಯಾರ್ಥಿಗಳಿಗೆ ಮಾರ್ಕ್ಸ್ ಕಾರ್ಡ್ ಹಾಗೂ Transcript ಅಗತ್ಯವಿದ್ದು, ಅಂತರರಾಷ್ಟ್ರೀಯ ವಿದ್ಯಾರ್ಥಿಗಳು ಡಿಜಿಲಾಕರ್ ರಚಿಸಲು ಆಧಾರ್ ಕಾರ್ಡ್ ಹೊಂದಿರುವುದಿಲ್ಲ ಹಾಗೂ ಅವರ ದೇಶದ ನಿಯಮಗಳು ಮತ್ತು ಅವಶ್ಯಕತೆಗಳ ಅನುಗುಣವಾಗಿ ವಿದ್ಯಾರ್ಥಿಗಳಿಗೆ ಮಾರ್ಕ್ಸ್ ಕಾರ್ಡ್ ಹಾಗೂ Transcript ಅಗತ್ಯವಿರುವುದರಿಂದ ಮತ್ತು ವಿದ್ಯಾರ್ಥಿಗಳ ಬೇಡಿಕೆಯಿದ್ದುದರಿಂದ, ವಿದೇಶಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಮಾನ್ಯ ಕುಲಪತಿಯವರ ಅನುಮೋದನೆ ಮೇರೆಗೆ ಸಿಂಡಿಕೇಟ್ ಸಭೆಯ ನಿರ್ಣಯವನ್ನು ಕಾಯ್ದಿರಿಸಿ ವಿದೇಶಿ ವಿದ್ಯಾರ್ಥಿಗಳಿಗೆ ಮಾತ್ರ ಅಂಕಪಟ್ಟಿಗಳನ್ನು ಮುದ್ರಿಸಿ ವಿತರಿಸಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು.** |
| ಸಾಮಾನ್ಯ ಸಭೆ 2024/1.18 | "ಡಾ. ಯು.ಆರ್. ಅನಂತಮೂರ್ತಿ ಅಧ್ಯಯನ ಪೀಠಕ್ಕೆ" ಸಂಬಂಧಿಸಿದಂತೆ ಸನ್ಮಾನ್ಯ ಕುಲಾಧಿಪತಿಗಳಿಂದ ಅನುಮೋದಿತಗೊಂಡಿರುವ ಪರಿನಿಯಮಾವಳಿಯನ್ನು ಪ್ರಕಟಿಸುವ ಬಗ್ಗೆ. |
| ತೀರ್ಮಾನ | **"ಡಾ. ಯು.ಆರ್. ಅನಂತಮೂರ್ತಿ ಅಧ್ಯಯನ ಪೀಠಕ್ಕೆ" ಸಂಬಂಧಿಸಿದಂತೆ ಸನ್ಮಾನ್ಯ ಕುಲಾಧಿಪತಿಗಳಿಂದ ಅನುಮೋದಿತಗೊಂಡಿರುವ ಪರಿನಿಯಮಾವಳಿಯನ್ನು ಪ್ರಕಟಿಸಲು** |

| | |
|---|---|
| | **ಸಿಂಡಿಕೇಟ್ ಸಭೆಯು ಅನುಮತಿಸಿತು.** |
| ಸಾಮಾನ್ಯ ಸಭೆ 2024/1.19 | ದಿನಾಂಕ : 22-06-2023 ರಿಂದ 20-09-2023ರವರೆಗೆ ಸ್ನಾತಕೋತ್ತರ ವಿದ್ಯಾರ್ಥಿನಿಲಯಗಳಲ್ಲಿ ಶಿಕ್ಷಕ ಸಲಹೆಗಾರರ ನೇತೃತ್ವದಲ್ಲಿ ಕಲ್ಪಿಸಲಾಗುತ್ತಿರುವ ಭೋಜನ ವ್ಯವಸ್ಥೆಗಾಗಿ ದಿನಸಿ/ತರಕಾರಿ ಪದಾರ್ಥಗಳನ್ನು ಸರಬರಾಜು ಮಾಡಿರುವ ಹುಂಡಿಗಳನ್ನು ಪಾವತಿಸಿರುವ ಒಟ್ಟು ಮೊತ್ತ ರೂ. 38,94,452/-ಗಳನ್ನು ಸಿಂಡಿಕೇಟ್‌ನ ಅನುಸಮರ್ಥನೆಗಾಗಿ. |
| ತೀರ್ಮಾನ | **ಗೌರವಾನ್ವಿತ ರಾಜ್ಯಪಾಲರ ಪತ್ರ ಸಂಖ್ಯೆ: ಜಿಎಸ್ 5 ಎಂಯುಎಂ 2023 (ಪಿ) ದಿನಾಂಕ: 04-07-2023 ರನ್ವಯ ವಿಶ್ವವಿದ್ಯಾನಿಲಯದ ದೈನಂದಿನ ಕೆಲಸಕಾರ್ಯಗಳು ಸುಗಮವಾಗಿ ನಡೆಸುವ ಸಂಬಂಧ ಮಾನ್ಯ ಕುಲಸಚಿವರು ಮತ್ತು ಹಣಕಾಸು ಅಧಿಕಾರಿಗಳಿಗೆ ನಿರ್ದೇಶನ ನೀಡಿರುವುದರಿಂದ ವಿಶ್ವವಿದ್ಯಾನಿಲಯದ 13 ಸ್ನಾತಕೋತ್ತರ ವಿದ್ಯಾರ್ಥಿನಿಲಯಗಳಿಗೆ ದಿನಾಂಕ: 22-06-2023 ರಿಂದ 20-09-2023 ರವರೆಗೆ ಭೋಜನ ವ್ಯವಸ್ಥೆಗಾಗಿ ದಿನಸಿ ಮತ್ತು ತರಕಾರಿ ಪದಾರ್ಥಗಳನ್ನು ಸರಬರಾಜು ಮಾಡಿರುವ ಟೆಂಡರ್‌ದಾರರ ಹುಂಡಿಗಳ ಒಟ್ಟು ಮೊತ್ತ ರೂ.38,94,452/-ಗಳಿಗೆ ನಿಲಯವಾರುವಿನಂತೆ ಪ್ರತ್ಯೇಕವಾಗಿ 13 ವಿಶ್ವವಿದ್ಯಾನಿಲಯ ಆದೇಶಗಳ ಮುಖಾಂತರ ಪಾವತಿಸಿರುವುದನ್ನು ಸಿಂಡಿಕೇಟ್ ಸಭೆಯು ಸ್ಥಿರೀಕರಿಸಿತು.** |
| ಸಾಮಾನ್ಯ ಸಭೆ 2024/1.20 | ಡಾ. ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಮಹಿಳಾ ವಿದ್ಯಾರ್ಥಿನಿಲಯ, ಚಾಮರಾಜನಗರ ಇಲ್ಲಿನ 2022-23ನೇ ಶೈಕ್ಷಣಿಕ ಸಾಲಿನಲ್ಲಿ ಪ್ರವೇಶಾತಿ ಪಡೆದ 20 ಪ.ಜಾ/ಪ.ವರ್ಗದ ವಿದ್ಯಾರ್ಥಿಗಳ ಭೋಜನ ವೆಚ್ಚ ರೂ. 2,52,135/-ಗಳ ಸಿಂಡಿಕೇಟ್ ಸಭೆಯ ಘಟನೋತ್ತರ ಅನುಮೋದನೆಗಾಗಿ. |
| ತೀರ್ಮಾನ | **ಡಾ. ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಮಹಿಳಾ ವಿದ್ಯಾರ್ಥಿನಿಲಯ, ಚಾಮರಾಜನಗರ ಇಲ್ಲಿನ 2022-23ನೇ ಶೈಕ್ಷಣಿಕ ಸಾಲಿನಲ್ಲಿ ಪ್ರವೇಶಾತಿ ಪಡೆದ 20 ಪ.ಜಾ/ಪ.ವರ್ಗದ ವಿದ್ಯಾರ್ಥಿಗಳ ಭೋಜನ ವೆಚ್ಚ ರೂ. 2,52,135/-ಗಳನ್ನು 2023-24ನೇ ಸಾಲಿನ ಆಯವ್ಯಯದ "ವಿದ್ಯಾರ್ಥಿನಿಲಯಗಳ ಭೋಜನ ವೆಚ್ಚ, ನೀರು, ಇತರೆ ಖರ್ಚು ಶೀರ್ಷಿಕೆ-293"ಯಿಂದ ಸಂಬಂಧಿಸಿದವರಿಗೆ ಮೆಸ್ ಮೊತ್ತಗಳನ್ನು ವಿತರಿಸಲು ಹಾಗೂ ಸದರಿ ವಿದ್ಯಾರ್ಥಿಗಳಿಗೆ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಮಂಜೂರಾಗುವ ವಿದ್ಯಾರ್ಥಿವೇತನ ಮತ್ತು ಇ.ಬಿ.ಎಲ್ ಮೊತ್ತವನ್ನು ವಿಶ್ವವಿದ್ಯಾನಿಲಯದ ಖಾತೆಗೆ ಜಮಾ ಮಾಡಿ ಲೆಕ್ಕ ಹೊಂದಾಣಿಕೆ ಮಾಡಿಕೊಳ್ಳಲು ಘಟನೋತ್ತರ ಮಂಜೂರಾತಿ ನೀಡಲು ಸಿಂಡಿಕೇಟ್ ಸಭೆಯು ಅನುಮತಿಸಿತು.** |
| ಸಾಮಾನ್ಯ ಸಭೆ 2024/1.21 | 104ನೇ ವಾರ್ಷಿಕ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ಪದವಿ ಪಡೆಯಲು ಗಣ್ಯರ ಹೆಸರುಗಳನ್ನು ಶಿಫಾರಸ್ಸು ಮಾಡುವ ಬಗ್ಗೆ. |
| | ಕುಲಸಚಿವರು 104ನೇ ವಾರ್ಷಿಕ ಘಟಿಕೋತ್ಸವದಲ್ಲಿ ಗೌರವ ಡಾಕ್ಟೊರೇಟ್ ಪದವಿ ಪಡೆಯಲು ಗಣ್ಯರ ಹೆಸರುಗಳನ್ನು ಶಿಫಾರಸ್ಸು ಮಾಡುವ ವಿಷಯವನ್ನು ಸಭೆಗೆ ಮಂಡಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ ಹಿಂದೆ ಘಟಿಕೋತ್ಸವವನ್ನು ಒಂದು ವರ್ಷ ತಡವಾಗಿ ನಡೆಸಲಾಗಿದೆ. ಘಟಿಕೋತ್ಸವವನ್ನು ನವೆಂಬರ್-ಡಿಸೆಂಬರ್ ಮಾಹೆಯಲ್ಲಿ ಮಾಡಬೇಕಾಗಿರುತ್ತದೆ. ಆದ್ದರಿಂದ ಈ ಬಾರಿ ಫೆಬ್ರವರಿ-ಮಾರ್ಚ್ ಮಾಹೆಯಲ್ಲಿ ನಡೆಸಿದರೆ ಮುಂಬರುವ ಘಟಿಕೋತ್ಸಗಳನ್ನು ನವೆಂಬರ್-ಡಿಸೆಂಬರ್ ಮಾಹೆಯಲ್ಲಿ ನಡೆಸಬಹುದು. ಗೌರವ ಡಾಕ್ಟೊರೇಟ್‌ಅನ್ನು ನೀಡಲು ಮೂವರು ಗಣ್ಯವ್ಯಕ್ತಿಗಳು ಅಂದರೆ ಸಾಹಿತ್ಯ, ತತ್ವಶಾಸ್ತ್ರ, ಕಲಾ, ಸಂಗೀತ, ಚಿತ್ರಕಲೆ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಯೋಜನೆ ಮತ್ತು ವಿಜ್ಞಾನ ಅಥವಾ ತಂತ್ರಜ್ಞಾನ ಅಭಿವೃದ್ಧಿಯ ಕ್ಷೇತ್ರದಲ್ಲಿ, ಸಾರ್ವಜನಿಕ ಸೇವೆಯಲ್ಲಿ ಸೇವೆಸಲ್ಲಿಸಿರುವಂತಹ ಗಣ್ಯರಿಗೆ ಹೀಗೆ ಎಲ್ಲಾ ಕ್ಷೇತ್ರಗಳಲ್ಲಿರುವಂತಹ ವ್ಯಕ್ತಿಗಳ ಹೆಸರನ್ನು ಸಮಿತಿಗೆ ನೀಡಬೇಕಾಗುತ್ತದೆ. ಗೌರವ ಡಾಕ್ಟೊರೇಟ್‌ಅನ್ನು ನೀಡುವ ಸಂಬಂಧ ಒಂದು ಸಮಿತಿಯು ರಾಜ್ಯಪಾಲರಿಂದ ರಚಿತಗೊಳ್ಳುತ್ತದೆ. ಆ ಸಮಿತಿಯಲ್ಲಿ ಮೂವರು ಗಣ್ಯವ್ಯಕ್ತಿಗಳ ಹೆಸರುಗಳನ್ನು ಮಾನ್ಯ ರಾಜ್ಯಪಾಲರಿಗೆ ಕಳುಹಿಸಿಕೊಡಲಾಗುತ್ತದೆ. ನಂತರ ರಾಜ್ಯಪಾಲರು ಅನುಮೋದಿಸಿ ನಮಗೆ ಕಳುಹಿಸುತ್ತಾರೆ. ಆದ್ದರಿಂದ ಸಿಂಡಿಕೇಟ್ |

| | |
|---|---|
| | ಸದಸ್ಯರುಗಳಾದ ತಾವುಗಳು ಯಾರಾದರೂ ಗಣ್ಯವ್ಯಕ್ತಿಗಳ ಹೆಸರನ್ನು ನೀಡಿದರೆ ಸಮಿತಿಯ ಮುಂದೆ ಇಡಲಾಗುವುದೆಂದು ತಿಳಿಸಿದರು.<br><br>ಡಾ. ಸಿ. ಬಸವರಾಜು ಅವರು ಮಾತನಾಡಿ 104ನೇ ವಾರ್ಷಿಕ ಘಟಿಕೋತ್ಸವದಲ್ಲಿ ಗೌರವ ಡಾಕ್ಟೊರೇಟ್ ಪದವಿಯನ್ನು ಮೈಸೂರಿನವರೇ ಆದ ಸನ್ಮಾನ್ಯ ಮುಖ್ಯ ಮಂತ್ರಿಗಳು ಆಗಿರುವ ಶ್ರೀ ಸಿದ್ಧರಾಮಯ್ಯನವರಿಗೆ ಕೊಡಬೇಕು ಎಂದು ಅಭಿಪ್ರಾಯಿಸಿದರು. ಹಾಗೂ ಇದನ್ನು ನಡವಳಿಯಲ್ಲಿ ದಾಖಲಿಸಬೇಕಾಗಿ ತಿಳಿಸಿದರು. ಇತರೆ ಸಿಂಡಿಕೇಟ್ ಸದಸ್ಯರುಗಳು ತಮ್ಮ ಸಹಮತಿಯನ್ನು ಸೂಚಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ ಸನ್ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರ ಹೆಸರನ್ನು ಸಮಿತಿಗೆ ನೀಡಲಾಗುವುದೆಂದು ಜೊತೆಗೆ ಬೇರೆ ಯಾರಾದರೂ ಗಣ್ಯವ್ಯಕ್ತಿಗಳ ಹೆಸರನ್ನು ಇನ್ನು ಮೂರು-ನಾಲ್ಕು ದಿವಸಗಳಲ್ಲಿ ತಿಳಿಸಿದರೆ ಸಮಿತಿಯ ಮುಂದೆ ಇಡಲಾಗುವುದೆಂದು ತಿಳಿಸಿದರು.<br><br>ಸಿಂಡಿಕೇಟ್ ಎಲ್ಲಾ ಸದಸ್ಯರುಗಳು ಸರ್ವಾನುಮತದಿಂದ ಸನ್ಮಾನ್ಯ ಶ್ರೀ ಸಿದ್ಧರಾಮಯ್ಯನವರ ಹೆಸರನ್ನು ಗೌರವ ಡಾಕ್ಟೊರೇಟ್ ಪದವಿಗಾಗಿ ಸೂಚಿಸಿದರು.<br><br>ಡಾ. ಸಿ. ಬಸವರಾಜು ರವರು ಮಾತನಾಡಿ ಈಗಾಗಲೇ ಒಬ್ಬರ ಹೆಸರನ್ನು ಸೂಚಿಸಿದ್ದೇವೆ. ಪಟ್ಟಿಯನ್ನು ದೊಡ್ಡದು ಮಾಡುವ ಬದಲು ಎಲ್ಲಾ ಕ್ಷೇತ್ರಗಳಲ್ಲಿ ಒಬ್ಬೊಬ್ಬರ ಹೆಸರನ್ನು ಸೂಚಿಸುವುದು ಸೂಕ್ತವೆಂದು ತಿಳಿಸಿದರು.<br><br>ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ತಾವು ಕಾರ್ಯಸೂಚಿಯಲ್ಲಿ ತಿಳಿಸಿರುವಂತೆ ಸಾಹಿತ್ಯ, ತತ್ವಶಾಸ್ತ್ರ, ಕಲಾ, ಸಂಗೀತ ಹಾಗೂ ಇನ್ನಿತರೆ ಕ್ಷೇತ್ರಗಳಲ್ಲಿ ಗಣನೀಯವಾದ ಸೇವೆ ಸಲ್ಲಿಸಿರುವ ಗಣ್ಯರ ಹೆಸರು ಸೂಚಿಸುವಂತೆ ತಿಳಿಸಿದ್ದೀರಿ. ಬೇರೆ ಯಾವ ಕ್ಷೇತ್ರದ ಗಣ್ಯವ್ಯಕ್ತಿಗಳನ್ನು ಸೂಚಿಸಬಹುದು ಎಂದು ಕೇಳಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ ಘಟಿಕೋತ್ಸವದಲ್ಲಿ ನೀಡಲಾಗುವ ಗೌರವ ಡಾಕ್ಟೊರೇಟ್ ವಿಷಯವನ್ನು ಗೌಪ್ಯವಾಗಿಡುವುದು ಒಳ್ಳೆಯದು ಎಂದು ತಿಳಿಸಿದರು.<br><br>ಕುಲಸಚಿವರು ಮಾತನಾಡಿ ಸಿಂಡಿಕೇಟ್ ಸದಸ್ಯರುಗಳಾದ ತಾವೆಲ್ಲರೂ ಒಂದು ಹೆಸರನ್ನು ಸೂಚಿಸಿದ್ದೀರಿ. ಅದರಂತೆ ಸಿಂಡಿಕೇಟ್‌ನ ಎಲ್ಲಾ ಸದಸ್ಯರುಗಳು ಸರ್ವಾನುಮತದಿಂದ ಒಪ್ಪಿದ್ದಾರೆ. ಈ ವೇದಿಕೆಯಲ್ಲಿ ಈ ಪ್ರಕ್ರಿಯೆ ಬಹಳ ಉತ್ತಮವಾದುದು ಹಾಗೂ ವಿಷಯವನ್ನು ಗೌಪ್ಯವಾಗಿ ಇಡದಿದ್ದಲ್ಲಿ ಬೇರೆ ಬೇರೆ ಆಯಾಮಗಳನ್ನು ಪಡೆದುಕೊಳ್ಳುವ ಸಂಭವವಿರುತ್ತದೆ ಎಂದು ತಿಳಿಸಿದರು.<br><br>ಡಾ. ಸಿ. ಬಸವರಾಜು ಹಾಗೂ ಇತರೆ ಸದಸ್ಯರುಗಳು ಈ ವಿಷಯವನ್ನು ಅಲ್ಲದೆ ಬೇರೆ ವಿಷಯಗಳು ಹೊರಗೆ ಹೋಗಬಾರದು ಎಂದು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ ಇನ್ನೂ ಮೂರು-ನಾಲ್ಕು ದಿನಗಳ ಸಮಯಾವಕಾಶವನ್ನು ತೆಗೆದುಕೊಂಡು ಗೌರವ ಡಾಕ್ಟೊರೇಟ್ ಪದವಿಯನ್ನು ಪಡೆಯಲು ಗಣ್ಯವ್ಯಕ್ತಿಗಳ ಹೆಸರನ್ನು ಸೂಚಿಸುವಂತೆ ಸದಸ್ಯರುಗಳಿಗೆ ತಿಳಿಸಿದರು. |
| ತೀರ್ಮಾನ | **ಸನ್ಮಾನ್ಯ ಶ್ರೀ ಸಿದ್ಧರಾಮಯ್ಯ, ಮುಖ್ಯ ಮಂತ್ರಿಗಳು, ಕರ್ನಾಟಕ ಸರ್ಕಾರ ಇವರ ಹೆಸರನ್ನು ಸಿಂಡಿಕೇಟ್‌ನ ಎಲ್ಲಾ ಸದಸ್ಯರುಗಳು ಗೌರವ ಡಾಕ್ಟೊರೇಟ್ ಪದವಿಗೆ ಸೂಚಿಸಿದರು. ಹಾಗೂ ಮೂರು-ನಾಲ್ಕು ದಿನಗಳೊಳಗೆ ಇತರೆ ಗಣ್ಯ ವ್ಯಕ್ತಿಗಳ ಹೆಸರನ್ನು ಸೂಚಿಸಲು ಸಿಂಡಿಕೇಟ್ ಸಭೆಯು ಸರ್ವಾನುಮತದಿಂದ ಅನುಮತಿಸಿತು.** |
| **ಸಾಮಾನ್ಯ ಸಭೆ**<br>**2024/1.22** | ವಿಶ್ವವಿದ್ಯಾನಿಲಯದ 104ನೇ ವಾರ್ಷಿಕ ಘಟಿಕೋತ್ಸವದ ಸಂಬಂಧ ಮುಖ್ಯ ಅತಿಥಿಗಳನ್ನು ಆಹ್ವಾನಿಸುವ ಬಗೆಗೆ. |
| | ವಿಶ್ವವಿದ್ಯಾನಿಲಯದ 104ನೇ ವಾರ್ಷಿಕ ಘಟಿಕೋತ್ಸವದ ಸಂಬಂಧ ಮುಖ್ಯ ಅತಿಥಿಗಳನ್ನು ಆಹ್ವಾನಿಸುವ ವಿಷಯವನ್ನು ಸಭೆಯಲ್ಲಿ ಮಂಡಿಸಿದರು. |

| | |
|---|---|
| | ಮಾನ್ಯ ಕುಲಪತಿಗಳು 104ನೇ ವಾರ್ಷಿಕ ಘಟಿಕೋತ್ಸವದ ಮುಖ್ಯ ಅತಿಥಿಗಳಾಗಿ ಹಾಗೂ ಭಾಷಣವನ್ನು ಮಾಡಲು ದೇಶದ ಹೆಸರಾಂತ ವ್ಯಕ್ತಿಗಳ ಹೆಸರನ್ನು ಸೂಚಿಸಲು ಮೂರು-ನಾಲ್ಕು ದಿವಸಗಳ ಕಾಲಾವಕಾಶವನ್ನು ನೀಡುವುದಾಗಿ ತಿಳಿಸಿದರು. ತಾವು ಸೂಚಿಸುವ ಹೆಸರುಗಳನ್ನು ಕುಲಸಚಿವರಿಗೆ ನೀಡಬಹುದು. ತಾವು ಸೂಚಿಸುವಂತಹ ಹೆಸರುಗಳ ಪಟ್ಟಿಯನ್ನು ಸಹ ಗೌರವಾನ್ವಿತ ರಾಜ್ಯಪಾಲರುಗಳ ಅಂಕಿತ ಪಡೆಯಲು ಕಳುಹಿಸಲಾಗುವುದೆಂದು ಸೂಚಿಸಿದರು. |
| ತೀರ್ಮಾನ | **ವಿಶ್ವವಿದ್ಯಾನಿಲಯದ 104ನೇ ವಾರ್ಷಿಕ ಘಟಿಕೋತ್ಸವದ ಮುಖ್ಯ ಅತಿಥಿಗಳಾಗಿ ಆಹ್ವಾನಿಸಲು ಗಣ್ಯರ / ಪರಿಣಿತರ ಹೆಸರನ್ನು ಸೂಚಿಸಲು ಹಾಗೂ ಘಟಿಕೋತ್ಸವವನ್ನು ಫೆಬ್ರವರಿ-ಮಾರ್ಚ್ ನಡೆಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| ಸಾಮಾನ್ಯ ಸಭೆ 2024/1.23 | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿಶೇಷ ಘಟಕಕ್ಕೆ ಅರ್ಜಿ ಸಲ್ಲಿಸಿರುವ ಎಲ್ಲಾ ಸಂಶೋಧನಾ ವಿದ್ಯಾರ್ಥಿಗಳನ್ನು ಪರಿಗಣಿಸುವ ಕುರಿತು. |
| | ಕುಲಸಚಿವರು ಮಾತನಾಡಿ ಮೈಸೂರು ವಿಶ್ವವಿದ್ಯಾನಿಲಯವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಂಶೋಧನಾ ವಿದ್ಯಾರ್ಥಿಗಳಿಗೆ 1984-85 ರಿಂದ 2021-2022ರವರೆಗೆ ನೀಡಿರುವ ಶಿಷ್ಯವೇತನದ ಬಗೆಗಿನ ಮಾಹಿತಿಯನ್ನು ಹಾಗೂ ಕಾಲಕಾಲಕ್ಕೆ ಹೊರಡಿಸಿರುವ ಅಧಿಸೂಚನೆಗಳು, ಹಾಗೂ ಸದರಿ ವಿಷಯಕ್ಕೆ ಸಂಬಂಧಿಸಿದಂತಹ ಸಭೆಗಳಲ್ಲಿ ತೆಗೆದುಕೊಂಡಂತಹ ತೀರ್ಮಾನಗಳ ವಿವರಗಳೆಲ್ಲವನ್ನು ಮತ್ತು 2023-24ನೇ ಸಾಲಿನಲ್ಲಿ ಶಿಷ್ಯವೇತನಕ್ಕೆ ಸಲ್ಲಿಸಿರುವ ಅರ್ಹ ಅರ್ಜಿಗಳ ವಿವರಗಳನ್ನು, ಹೊರ ವಿಶ್ವವಿದ್ಯಾನಿಲಯ ಹಾಗೂ ಖಾಸಗಿ ವಿದ್ಯಾಸಂಸ್ಥೆಗಳಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ವಿವರಗಳು ಹಾಗೂ ಅವಧಿ ಮುಗಿದ ನಂತರ ಸಲ್ಲಿಸಿರುವ ಅರ್ಜಿಗಳ ವಿವರಗಳನ್ನು ಸಭೆಗೆ ಕೂಲಂಕಷವಾಗಿ ಮಂಡಿಸಿದರು.<br><br>ಮುಂದುವರೆದು, ಸ್ಥಾಯಿ ಸಮಿತಿ ಹಾಗೂ ಹಿಂದೆ ನಡೆದಂತಹ ಸಿಂಡಿಕೇಟ್ ಸಭೆಯ ತೀರ್ಮಾನ ಹಾಗೂ ವಿಶ್ವವಿದ್ಯಾನಿಲಯದ ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಒಟ್ಟು 20 ಸಂಶೋಧನಾ ವಿದ್ಯಾರ್ಥಿಗಳಿಗೆ ಶಿಷ್ಯವೇತನವನ್ನು ನೀಡಲು ತೀರ್ಮಾನಿಸಿದೆ. 2021-22 ನೇ ಸಾಲಿನಲ್ಲಿ ಮಾತ್ರ ಸಂಶೋಧನಾ ವಿದ್ಯಾರ್ಥಿಗಳ ಅಹವಾಲನ್ನು ಮನ್ನಿಸಿ, ಹಿಂದೆ ಇದ್ದಂತಹ ಮಾನ್ಯ ಕುಲಪತಿಗಳು 20ಕ್ಕಿಂತ ಹೆಚ್ಚು ಸಂಶೋಧನಾ ವಿದ್ಯಾರ್ಥಿಗಳಿಗೆ ಶಿಷ್ಯವೇತನವನ್ನು ನೀಡಿದ್ದಾರೆ. ಪ್ರಸ್ತುತ ಶಿಷ್ಯವೇತನವನ್ನು ಪಡೆಯುತ್ತಿರುವ 115 ಸಂಶೋಧನಾ ವಿದ್ಯಾರ್ಥಿಗಳಿಗೆ ಒಟ್ಟು 6,81,60,000/- ಗಳು ಸಂದಾಯವಾಗುತ್ತಿದೆ. ಈಗ ನೀಡಿರುವ ಎಲ್ಲಾ ಅರ್ಜಿಗಳನ್ನು ಗಣನೆಗೆ ತೆಗೆದುಕೊಂಡಲ್ಲಿ ಸಮಾರು ಹೆಚ್ಚುವರಿ ರೂ. 1,11,54,000/-ಗಳಾಗುತ್ತವೆ. 20 ವಿದ್ಯಾರ್ಥಿಗಳಿಗೆ ನೀಡಿದ್ದಲ್ಲಿ ರೂ. 53,00,000/-ಗಳಾಗಬಹುದು ಎಂದು ತಿಳಿಸಿದರು. ಈ ವೆಚ್ಚವು 5 ವರ್ಷಗಳಿಗೆ ನೀಡಬೇಕಾಗುತ್ತದೆ. ಜೊತೆಗೆ 6.81/- ಕೋಟಿಗಳ ಜೊತೆಗೆ 1.00 ಕೋಟಿ ರೂ.ಗಳು ಸೇರಿ ಒಟ್ಟು 7.81 ಕೋಟಿಗಳಾಗುತ್ತದೆ. ನಾನು ಯಾವುದೇ ವಿದ್ಯಾರ್ಥಿಯ ವಿರೋಧಿಯಲ್ಲ, ನಾನು ಈ ವಿಶ್ವವಿದ್ಯಾನಿಲಯದಲ್ಲೇ ಓದಿದಂತಹ ವಿದ್ಯಾರ್ಥಿ. ಮಕ್ಕಳ ಅವಶ್ಯಕತೆ ಏನು ಎಂಬುದು ಸಹ ನನಗೆ ತಿಳಿದಿದೆ. ಹಾಗೂ ಗ್ರಾಮಾಂತರ ಪ್ರದೇಶಗಳಿಂದ ಬರುವಂತಹ ಅತಿ ಹೆಚ್ಚು ಬಡವಿದ್ಯಾರ್ಥಿಗಳೇ ಹೆಚ್ಚಾಗಿದ್ದಾರೆ ಎಂಬುದು ಗಮನದಲ್ಲಿದೆ. ಜೊತೆಗೆ ನಮ್ಮ ವಿಶ್ವವಿದ್ಯಾನಿಲಯದ ಆರ್ಥಿಕ ಪರಿಸ್ಥಿತಿ ಯನ್ನು ಗಮನಿಸಿ ಈ ಸಂಬಂಧ ವಿಷಯವನ್ನು ಸಭೆಗೆ ಮಂಡಿಸುತ್ತಿದ್ದೇನೆ ಎಂದು ತಿಳಿಸಿದರು.<br><br>ಡಾ. ಬಸವರಾಜು ಸಿ ಮಾತನಾಡಿ ಶಿಷ್ಯವೇತನವನ್ನು ವಿದ್ಯಾರ್ಥಿಗಳಿಗೆ ಕೊಡಲೇಬೇಕು. ಯಾವ ಯಾವ ರೀತಿಯ ಸೂಕ್ತ ಕ್ರಮಗಳನ್ನು ಕೈಗೊಂಡರೆ ಎಲ್ಲಾ ಸಂಶೋಧನಾ ವಿದ್ಯಾರ್ಥಿಗಳಿಗೂ ಶಿಷ್ಯವೇತನವನ್ನು ನೀಡಬಹುದು ಎಂಬುದರ ಬಗ್ಗೆ ತಾವು ತೀರ್ಮಾನ |

| | |
|---|---|
| | ಮಾಡುವುದು ಸೂಕ್ತ ಎಂದು ತಿಳಿಸಿದರು.<br><br>ಶ್ರೀ ನಟರಾಜು ಹೆಚ್.ಎಸ್. ಅವರು ಮಾತನಾಡಿ ಹಿಂದಿನ ಸಭೆಯಲ್ಲಿ ತೀರ್ಮಾನಿಸಿದಂತೆ, 2022-23ನೇ ಸಾಲಿನಲ್ಲಿ ಮತ್ತು 2023-24ನೇ ಸಾಲಿನಲ್ಲಿ ಎರಡು ವರ್ಷಗಳಿಗೂ ಕೊಡಬೇಕಾಗುತ್ತದೆ. 20 ವಿದ್ಯಾರ್ಥಿಗಳಿಗೆ ಎಂದರೆ ಎರಡು ವರ್ಷಕ್ಕೆ 40 ವಿದ್ಯಾರ್ಥಿಗಳಿಗೆ ಕೊಡಬೇಕಾಗುತ್ತದೆ. ಕನಿಷ್ಠ 25 ವರ್ಷಗಳ ನಂತರ ಕೇವಲ 20 ವಿದ್ಯಾರ್ಥಿಗಳಿಗೆ ಇದೇ ಮೊದಲ ಬಾರಿ ನೀಡುತ್ತಾ ಇರುವುದು ಎಂದು ತಿಳಿಸಿದರು.<br><br>ಕುಲಸಚಿವರು ಮಾತನಾಡಿ ಅದು ತಾವೇ ಹೇಳಿರುವುದು cumulative number of students ಅಂದರೆ ವಿದ್ಯಾರ್ಥಿಗಳ ಲಭ್ಯತೆಗೆ ಅನುಗುಣವಾಗಿ ಪ್ರತಿ ವರ್ಷವು 20 ವಿದ್ಯಾರ್ಥಿಗಳನ್ನೇ ತೆಗೆದುಕೊಂಡಿರುವುದು. 2020-21ನೇ ಸಾಲನ್ನು ಬಿಟ್ಟು. ವಿದ್ಯಾರ್ಥಿಗಳು ವರ್ಷವಾರು ಅಂದರೆ 10 ಅಥವಾ 5 ವಿದ್ಯಾರ್ಥಿಗಳು ಇದ್ದರೆ ಮುಂದಿನ ವರ್ಷ 15 ವಿದ್ಯಾರ್ಥಿಗಳಿಗೆ ಶಿಷ್ಯವೇತನವನ್ನು ನಿಡಬೇಕಾಗುತ್ತದೆ ಎಂದು ತಿಳಿಸಿದರು. ನಾನು ಈ ಎಲ್ಲಾ ಮಾಹಿತಿಗಳನ್ನು ಕಲೆಹಾಕಲು ತಿಳಿಸಿದ್ದು ಒಂದು ಸಂಶೋಧನೆಯನ್ನು ಮಾಡಿದಂತಾಗಿದೆ. ಇದರ ಜೊತೆಗೆ ಯಾವ ಯಾವ ವಿದ್ಯಾರ್ಥಿಗಳು ಇದರ ಸದುಪಯೋಗವನ್ನು ತೆಗೆದುಕೊಂಡಿದ್ದಾರೆ ಅಂತವರ ಪಟ್ಟಿಯನ್ನು ಸಹ ಪಡೆಯಲು ತಿಳಿಸಲಾಗಿದೆ. ಅಂತಹ ವಿದ್ಯಾರ್ಥಿಗಳಿಂದ ಯಾವುದಾದರೂ ಸಹಾಯ ಅಥವಾ ನಿರೀಕ್ಷೆಯನ್ನು ಪಡೆಯಬಹುದೇ ಎಂಬುದು ಕೂಡ ಮನಸ್ಸಿನಲ್ಲಿದೆ. ಒಂದೇ ಬಾರಿ 25 ವಿದ್ಯಾರ್ಥಿಗಳು ಅಂದರೆ ಅದು ಆ ವರ್ಷಕ್ಕೆ ಕೊಟ್ಟಿದ್ದಲ್ಲ. ಹಿಂದಿನ ವರ್ಷದಿಂದ ಇದ್ದಂತಹ (cumulative) ಒಟ್ಟು ವೆಚ್ಚವಾಗಿರುತ್ತದೆ. ಪ್ರತಿ ವರ್ಷ 20 ವಿದ್ಯಾರ್ಥಿಗಳಿಗಿಂತ ಜಾಸ್ತಿ ನೀಡಿರುವುದಿಲ್ಲ. ಹಿಂದೆ ಇದ್ದ ಮಾನ್ಯ ಕುಲಪತಿಯವರು ನೀಡಿದ್ದಾರೆ. ವಿಶ್ವವಿದ್ಯಾನಿಲಯವು 100 ವರ್ಷಗಳ ಸಂಭ್ರಮಾಚರಣೆಯನ್ನು ಆಚರಿಸಿಕೊಂಡಿದ್ದರ ಪ್ರಯುಕ್ತ ಹಾಗೂ ಕೋವಿಡ್-19 ಸಾಂಕ್ರಾಮಿಕ ಪಿಡುಗಿನಿಂದ ಆದಂತಹ ಸಮಸ್ಯೆಗಳಿಂದ ನೀಡಲಾಗಿದೆ ಎಂದರು. ಜನಪ್ರತಿನಿಧಿಗಳ ಒತ್ತಾಯ, ಸಂಶೋಧನಾ ವಿದ್ಯಾರ್ಥಿಗಳ ಮನವಿ, ಸರ್ಕಾರಕ್ಕೆ ಪತ್ರ ಬರೆದಿರುವುದು, ಶ್ರೀ ಮಣಿವಣ್ಣನ್‌ನವರಿಗೆ ಪತ್ರ ಬರೆದಿರುವುದು, ಮಾನ್ಯ ಮುಖ್ಯಮಂತ್ರಿಯವರಿಗೆ ಪತ್ರ ಬರೆದಿರುವುದು ಎಲ್ಲಾ ಮಾಹಿತಿಗಳು ಹಾಗೂ ದಾಖಲೆಗಳು ಇವೆ. ಪ್ರತಿ ವರ್ಷ 20 ವಿದ್ಯಾರ್ಥಿಗಳನ್ನು ಮೀರಿರುವುದಿಲ್ಲ. 1984 ಹಾಗೂ ಕೆಲವೊಂದು ವರ್ಷಗಳಲ್ಲಿ ವಿದ್ಯಾರ್ಥಿಗಳು ಕಡಿಮೆ ಇದ್ದರಿಂದ ಎರಡು-ಮೂರು ವಿದ್ಯಾರ್ಥಿಗಳಿಗೆ ಮಾತ್ರ ನೀಡಲಾಗಿದೆ. ಆಗ ವಿದ್ಯಾರ್ಥಿಗಳೇ ಇರಲಿಲ್ಲ, ಅವರಿಗೆ ಪ್ರೋತ್ಸಾಹ ನೀಡುವುದಕೋಸ್ಕರ ವಿದ್ಯಾರ್ಥಿಗಳನ್ನು ಪ್ರಾಧ್ಯಾಪಕರು ಹುಡುಕಿ ಕರೆದುಕೊಂಡು ಬರಬೇಕಾಗಿತ್ತು. ಆ ಸಂದರ್ಭದಲ್ಲಿ 20 ವಿದ್ಯಾರ್ಥಿಗಳಿಗಿಂತ ಹೆಚ್ಚು ವಿದ್ಯಾರ್ಥಿಗಳು ಇರಲಿಲ್ಲ. ಈಗ 20 ವಿದ್ಯಾರ್ಥಿಗಳಿಗಿಂತ ಹೆಚ್ಚು ವಿದ್ಯಾರ್ಥಿಗಳಿದ್ದಾರೆ. ನಮ್ಮಲ್ಲಿ ಓದಿದ ವಿದ್ಯಾರ್ಥಿಗಳೊಂದಿಗೆ ಕೆ.ಎಸ್.ಓ.ಯು ವಿದ್ಯಾರ್ಥಿಗಳು ಕೂಡ ಅರ್ಜಿ ಹಾಕಿದ್ದಾರೆ. ಅವರು ನಮ್ಮ ವಿದ್ಯಾರ್ಥಿಗಳೇ ಆದರೆ ನಾವು ಯಾರಿಗೆ ಆದ್ಯತೆ ಕೊಡಬೇಕೆಂದು ನೀವು ತೀರ್ಮಾನ ಮಾಡಬೇಕು.<br><br>ಶ್ರೀ ನಟರಾಜು ಹೆಚ್.ಎಸ್. ರವರು ಮಾತನಾಡಿ ನಿಮ್ಮ ಮಾತಿನಂತೆ ಆದರೆ ವರ್ಷಕ್ಕೆ 20 ವಿದ್ಯಾರ್ಥಿಗಳೆಂದರೆ ಎರಡು ವರ್ಷಗಳಿಗೆ ಒಟ್ಟು 40 ವಿದ್ಯಾರ್ಥಿಗಳು ಆಗುತ್ತಾರೆ. ಎಲ್ಲರನ್ನು ಪರಿಗಣಿಸುವುದು ಒಳ್ಳೆಯದು ಎಂಬುದು ನನ್ನ ಭಾವನೆ ಎಂದು ತಿಳಿಸಿದರು.<br><br>ಡಾ. ಬಸವರಾಜು .ಸಿ ಅವರು ಮಾತನಾಡಿ ವಿದ್ಯಾರ್ಥಿಗಳಿಗೆ ಶಿಷ್ಯವೇತನವನ್ನು ಪರಿಗಣಿಸುವುದರ ಜೊತೆಗೆ ನಮ್ಮ ವಿಶ್ವವಿದ್ಯಾನಿಲಯದ ಕಾನೂನು ಅಥವಾ ಆರ್ಥಿಕ ಪರಿಸ್ಥಿತಿ ನೋಡಿಕೊಂಡು ಹೇಗೆ ನೀಡಬಹುದು ಎಂಬುದರ ಬಗ್ಗೆ ನೋಡಿ ತೀರ್ಮಾನ ತೆಗೆದುಕೊಳ್ಳಿ ಎಂದು ತಿಳಿಸಿದರು.<br><br>ಶ್ರೀ ನಟರಾಜು ಹೆಚ್.ಎಸ್. ರವರು ಮಾತನಾಡಿ ಹಿಂದೆ RGNF ರಾಜ್ಯ ಅಥವಾ ಕೇಂದ್ರ ಸರ್ಕಾರದಿಂದ ಆರ್ಥಿಕ ಸಹಾಯ ದೊರೆಯುತ್ತಿತ್ತು. ಈಗ ಅದೆಲ್ಲವು ಸ್ಥಗಿತಗೊಂಡಿದೆ. ಯಾಕೆ ಇಷ್ಟು ವಿದ್ಯಾರ್ಥಿಗಳ ಸಂಖ್ಯೆ ಜಾಸ್ತಿ ಆಗುತ್ತಾ ಇದೆ ಅಂದರೆ NFSC ಅಂತ |

ಮಾಡ್ತಾ ಇದ್ದಾರೆ. ಎನ್.ಇ.ಟಿ ಪರೀಕ್ಷೆಯಲ್ಲಿ ಉನ್ನತ ಸ್ಥಾನದಲ್ಲಿ ಬಂದವರು ಮಾತ್ರ ಆಯ್ಕೆ ಆಗುತ್ತಾ ಇದ್ದಾರೆ. ತುಂಬ ಕಡಿಮೆ ವಿದ್ಯಾರ್ಥಿಗಳು ಮಾತ್ರ ಆಯ್ಕೆ ಆಗುತ್ತಾ ಇದ್ದಾರೆ. ನಾವು ಸಂಶೋಧನೆಗೆ ಹೆಚ್ಚು ಪ್ರೋತ್ಸಾಹ ಕೊಡಬೇಕಾಗಿರುವುದರಿಂದ ವಿದ್ಯಾರ್ಥಿಗಳಿಗೆ ಶಿಷ್ಯವೇತನವೇ ಮುಖ್ಯವಾಗಿರುತ್ತದೆ. ಶಿಷ್ಯವೇತನವಿಲ್ಲದೆ ಸಂಶೋಧನೆ ಮಾಡುವುದು ತುಂಬ ಕಷ್ಟವಾಗುತ್ತದೆ. ಎಸ್ಸಿ, ಎಸ್ಟಿ ವಿದ್ಯಾರ್ಥಿಗಳ ಪರಿಸ್ಥಿತಿ ಎಲ್ಲರಿಗೂ ಗೊತ್ತಿರುವ ವಿಷಯ. ಆದುದರಿಂದ ಈ ಬಾರಿ ಎಲ್ಲರಿಗೂ ಶಿಷ್ಯವೇತನವನ್ನು ನೀಡಿ, ಮುಂದಿನ ವರ್ಷದಿಂದ 20 ವಿದ್ಯಾರ್ಥಿಗಳಿಗೆ ಎಂದು ಮಾಡುವುದು ಒಳ್ಳೆಯದು ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಶ್ರೀ ಗೋಕುಲ್ ಗೋವರ್ಧನ್ ಮಾತನಾಡಿ ಹೊರಗಿನ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಪದವಿಯ ಅರ್ಜಿಗಳು ಎಂದು ಇದೆಯಲ್ಲ ಹಿಂದೆ ಯಾವ ಪದ್ಧತಿಯನ್ನು ಅನುಸರಿಸಲಾಗುತ್ತಿತ್ತು ಎಂದು ಕೇಳಿದರು.

ಕುಲಸಚಿವರು ಮಾತನಾಡಿ ಮೊದಲಿಂದಲೂ ನಮ್ಮ ಮಾನಸಗಂಗೋತ್ರಿ ಹಾಗೂ ಘಟಕ ಕಾಲೇಜಿನವರಿಗೆ ಮಾತ್ರ ಆದ್ಯತೆ ಇತ್ತು. ಗರಿಷ್ಟ ಆದ್ಯತೆ ಮಾನಸಗಂಗೋತ್ರಿ ವಿದ್ಯಾರ್ಥಿಗಳಿಗೆ ಮಾತ್ರ ಇತ್ತು ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ ಶಿಷ್ಯವೇತನವನ್ನು ನೀಡುತ್ತಿರುವ ಉದ್ದೇಶ ನಮ್ಮಲ್ಲಿ ಓದಿರುವಂತಹ ವಿದ್ಯಾರ್ಥಿಗಳು ಸಂಶೋಧನೆಗೆ ಬರಲಿ ಅನ್ನುವ ದೃಷ್ಟಿಯಿಂದ 25 ಶಿಷ್ಯವೇತನವನ್ನು ಮಾಡಿದ್ದೆವು. 25 ಶಿಷ್ಯವೇತನ ಕೊಟ್ಟು ಮೂರು ವರ್ಷಗಳಿಗೆ ನಿಲ್ಲಿಸುತ್ತಾ ಇದ್ದೀವಿ. ದಿನಾಂಕ 9-12-2019ರ ಸಿಂಡಿಕೇಟ್ ನಿರ್ಣಯದಂತೆ ಮೂರು ವರ್ಷ ಅವಧಿಯು ಸಾಲುವುದಿಲ್ಲ 5 ವರ್ಷಕ್ಕೆ ವಿಸ್ತರಿಸಲು ಹಾಗೂ 25 ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವ ಬದಲು 20 ಸಂಶೋಧನ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲು ಸಿಂಡಿಕೇಟ್ ಸಭೆಯು ನಿರ್ಣಯಿಸಿತ್ತು. ಪ್ರತಿ ವರ್ಷ 20 ಸಂಶೋಧನ ವಿದ್ಯಾರ್ಥಿಗಳಿಗೆ ಮಾತ್ರ ಶಿಷ್ಯವೇತನವನ್ನು ನೀಡುತ್ತಾ ಬಂದಿದೆ. ಹಿಂದಿನ ವರ್ಷ (2021-22) ಜಾಸ್ತಿ ನೀಡಿರುತ್ತಾರೆ. ಇದರ ಉದ್ದೇಶ ನಮ್ಮ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿ ಎಂಬುದಾಗಿತ್ತು. ಬೇರೆ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿ ಎಂದಲ್ಲ. ಮೊದಲಿನಿಂದಲೂ ಅದೇ ರೀತಿ ಮಾಡಿಕೊಂಡು ಬಂದಿರುವುದು. ಈಗ ವಿಶ್ವವಿದ್ಯಾನಿಲಯದ ಆರ್ಥಿಕ ಪರಿಸ್ಥಿತಿ ಹಾಗೂ ವಿಶ್ವವಿದ್ಯಾನಿಲಯದ ನಿಯಮದಂತೆ ಕ್ರಮವನ್ನು ಅನುಸರಿಸುವುದಾಗಿರುತ್ತದೆ. ತಾವು ಸಿಂಡಿಕೇಟ್‌ನ ಸದಸ್ಯರೆಲ್ಲರೂ ಯಾವ ತೀರ್ಮಾನವನ್ನು ತೆಗೆದುಕೊಳ್ಳುತ್ತೀರೋ ಅದರಂತೆ ಕ್ರಮವಹಿಸಲಾಗುವುದು ಎಂದು ತಿಳಿಸಿದರು.

ಶ್ರೀ ನಾಗರಾಜು ಸಿ. ರವರು ಮಾತನಾಡಿ 39 ವಿದ್ಯಾರ್ಥಿಗಳಿಗೂ ಶಿಷ್ಯವೇತನವನ್ನು ನೀಡಬೇಕು ಎಂದು ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ ಈ ಒಂದು ಬಾರಿ ನೀಡಿದರೆ ಬೇರೆ ವಿಶ್ವವಿದ್ಯಾನಿಲಯದವರು ಬರುತ್ತಾರೆ ಎಂದು ತಿಳಿಸಿದರು.

ಡಾ. ಬಸವರಾಜು ಸಿ. ಅವರು ಮಾತನಾಡಿ ನಮ್ಮ ವಿಶ್ವವಿದ್ಯಾನಿಲಯದ ಮಿತಿ ಏನಿದೆ ಅದರಂತೆ ಕ್ರಮವಹಿಸುವುದು ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ ನಮ್ಮ ಮಿತಿ ಏನಿದೆ ಅಂದರೆ ನಮ್ಮ ವಿಶ್ವವಿದ್ಯಾನಿಲಯದಲ್ಲಿ ಓದಿದ ವಿದ್ಯಾರ್ಥಿಗಳಿಗೆ ಮಾತ್ರ ಶಿಷ್ಯವೇತನವನ್ನು ನೀಡಬೇಕು. ನಮ್ಮ ವಿಶ್ವವಿದ್ಯಾನಿಲಯದಿಂದ ಶಿಷ್ಯವೇತನವನ್ನು ನೀಡುತ್ತೇವೆ ಎಂದಾಗ ಸಾಮಾನ್ಯವಾಗಿ ಎಲ್ಲಾ ಜಿಲ್ಲೆಗಳಿಂದಲೂ ವಿದ್ಯಾರ್ಥಿಗಳು ಅರ್ಜಿ ಹಾಕುತ್ತಾರೆ. ಜೊತೆಗೆ ಆರ್‌ಜಿಎನ್‌ಎಫ್ ನಿಂತು ಹೋಗಿದೆ. ಓ.ಬಿ.ಸಿ ವಿದ್ಯಾರ್ಥಿ ಶುಲ್ಕದಿಂದಲೇ ಹಣ ಬರುತ್ತಿದೆ. ನಮ್ಮ ಹಣದಲ್ಲೇ ನಾವು ಎಲ್ಲರಿಗೂ ಶಿಷ್ಯವೇತನವನ್ನು ನೀಡಲು ಎಲ್ಲಿಂದ ಹಣವನ್ನು ಭರಿಸುವುದು. ನಮ್ಮ ಉದ್ದೇಶ ನಮ್ಮಲ್ಲಿ ಓದಿದಂತಹ ವಿದ್ಯಾರ್ಥಿಗಳಿಗೆ ಉತ್ತೇಜನ ನೀಡುವುದು ಎಂದು ತಿಳಿಸಿದರು.

| | |
|---|---|
| | ಕುಲಸಚಿವರು ಮಾತನಾಡಿ ಹೊರ ವಿಶ್ವವಿದ್ಯಾನಿಲಯ ಮತ್ತು ಖಾಸಗಿ ವಿದ್ಯಾಸಂಸ್ಥೆಗಳು ಅಂದರೆ ಸ್ನಾತಕೋತ್ತರ ಪದವಿಯನ್ನು ಕೆಎಸ್‌ಓಯು ನಲ್ಲಿ ಪಡೆದಿರುವವರು ಹೊರಗಿನ ಜಿಲ್ಲೆಗಳಲ್ಲಿ ಪಡೆದಿರುವಂತಹ ವಿದ್ಯಾರ್ಥಿಗಳು ಬಂದು ಸಂಶೋಧನೆ ನಡೆಸುತ್ತಿರುವಂತಹ ವಿದ್ಯಾರ್ಥಿಗಳೆಲ್ಲರಿಗೂ ನಾವು ನೀಡಬೇಕಾಗುತ್ತದೆ ಎಂದು ತಿಳಿಸಿದರು.<br><br>ಶ್ರೀ ನಟರಾಜು ಹೆಚ್.ಎಸ್. ರವರು ಮಾತನಾಡಿ ಎಲ್ಲಾ ಸಂಶೋಧನಾ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯಕ್ಕೆ ಶುಲ್ಕವನ್ನು ಪಾವತಿಸುತ್ತಿರುವುದರಿಂದ ಶಿಷ್ಯವೇತನವನ್ನು ನೀಡಬೇಕಾಗುತ್ತದೆ ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ ಒಂದು ಬಾರಿ ಬೇರೆ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಶಿಷ್ಯವೇತನವನ್ನು ಕೊಟ್ಟರೆ ಅದನ್ನು ನಿಲ್ಲಿಸಲು ಸಾಧ್ಯವಿಲ್ಲ. ಮುಂದೆಯೂ ಸಹ ನೀಡಬೇಕಾಗುತ್ತದೆ ಎಂದು ತಿಳಿಸಿದರು.<br><br>ಕುಲಸಚಿವರು ಮಾತನಾಡಿ ಪ್ರತಿ ಸಲ ನೀಡಿಲ್ಲ. 2021ರಲ್ಲಿ ಮಾತ್ರ ನೀಡಲಾಗಿದೆ. ಇದು ನಿಯಮಗಳ ಉಲ್ಲಂಘನೆ ಆಗಿರುತ್ತದೆ ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ ISAC ಎಂದು ಇದೆ. ಅಲ್ಲಿಯೂ ಪಿಎಚ್.ಡಿ. ವಿದ್ಯಾರ್ಥಿಗಳಿದ್ದು, ಅವರು ಸಹ ಅಲ್ಲಿ ಓದಿದಂತಹ ವಿದ್ಯಾರ್ಥಿಗಳಿಗೆ ಶಿಷ್ಯವೇತನವನ್ನು ನೀಡುತ್ತಿದ್ದಾರೆ.<br><br>ಶ್ರೀ ನಟರಾಜು ಹೆಚ್.ಎಸ್. ರವರು ಮಾತನಾಡಿ ಮಾರ್ಗದರ್ಶಕರು ಬೇರೆ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದರೆ ಅವರ ವಿದ್ಯಾರ್ಥಿಗಳಿಗೆ ಶಿಷ್ಯವೇತನವನ್ನು ನೀಡುವಂತೆ ಇಲ್ಲ. ಅವರು ಇಲ್ಲೇ ಮಾರ್ಗದರ್ಶಕರಾಗಿ ಇಲ್ಲೇ ನೋಂದಾಯಿತರಾಗಿದ್ದರೆ ಮಾತ್ರ ಕೊಡಬಹುದು ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ 100ನೇ ವರ್ಷದ ಘಟಿಕೋತ್ಸವದ ಸಂಭ್ರಮಾಚರಣೆಯ ಪ್ರಯುಕ್ತ ಎಲ್ಲಾ ವಿದ್ಯಾರ್ಥಿಗಳಿಗೂ ಶಿಷ್ಯವೇತನ ಕೊಡಬೇಕೆಂದು ಕೋರಿರುವ ಹಿನ್ನೆಲೆಯಲ್ಲಿ ದಿನಾಂಕ 27-01-2021ರಂದು ನಡೆದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿಶೇಷ ಘಟಕದ ವತಿಯಿಂದ 2020-21ನೇ ಸಾಲಿನ ಸಂಶೋಧನಾ ವಿದ್ಯಾರ್ಥಿಗಳ ಶಿಷ್ಯವೇತನಕ್ಕೆ ಆಯ್ಕೆ ಮಾಡುವ ಬಗ್ಗೆ ನಡೆದ ಸಭೆಯ ನಡವಳಿಯಂತೆ ಆಯ್ಕೆಯಾದ ಸಂಶೋಧನಾ ವಿದ್ಯಾರ್ಥಿಗಳು Web of Science/UGC Care Journal ನಲ್ಲಿ ಪ್ರತಿ ವರ್ಷ ಒಂದು ಸಂಶೋಧನಾ ಪ್ರಕಟಣೆ ಕಡ್ಡಾಯವಾಗಿ ಪ್ರಕಟಿಸಬೇಕೆಂದು ತೀರ್ಮಾನಿಸಲಾಯಿತು, ಹಾಗೂ ಮತ್ತೆ ಒಂದು ಸಮಿತಿಯನ್ನು ರಚಿಸಿ ಸಮೀಕ್ಷೆ ಮಾಡುವುದು ಉತ್ತಮ ಎಂದು ಹೇಳಿದ್ದಾರೆ. ಆದರೆ ಇದುವರೆಗೂ ನಾವು ಮಾಡಿಲ್ಲ. ಹಾಗೂ ದಿನಾಂಕ 7-12-2021ರಂದು ನಡೆದ ಸಭೆಯ ನಡವಳಿಯಂತೆ ಆಯ್ಕೆಯಾಗಿರುವ ಸಂಶೋಧಕರು ಒಂದು ವರ್ಷದ ನಂತರ ಪ್ರತಿ ವರ್ಷವು ಕನಿಷ್ಟ ಒಂದೊಂದು ಸಂಶೋಧನಾ ಲೇಖನವನ್ನು ಮಹಾ ಪ್ರಬಂಧದ ಶೀರ್ಷಿಕೆಯನ್ನೊಳಗೊಂಡಂತೆ Scopus/Web of Science/UGC-Care List Journals ಗಳಲ್ಲಿ ಕಡ್ಡಾಯವಾಗಿ ಪ್ರಕಟಿಸಬೇಕು ಮತ್ತು ಸದರಿ ಲೇಖನದಲ್ಲಿ ಮಾರ್ಗದರ್ಶಕರ ಹೆಸರಿರಬೇಕು. ಮೂರು ವರ್ಷದ ನಂತರ ಸಂಶೋಧಕರ ಸಂಶೋಧನಾ ಪ್ರಗತಿಯನ್ನು ಪರಿಶೀಲಿಸಲು ಸಂಯೋಜಕರು, ಸಂಶೋಧನಾ ನಿರ್ದೇಶನಾಲಯ, ವಿಷಯಗಳ ಡೀನರು, ವಿಭಾಗದ ಅಧ್ಯಕ್ಷರು ಮತ್ತು ಮಾರ್ಗದರ್ಶಕರನ್ನೊಳಗೊಂಡ ಸಮಿತಿಯನ್ನು ರಚಿಸಿ ವರದಿ ಬಂದ ನಂತರ ಶಿಷ್ಯವೇತನವನ್ನು ಮುಂದುವರಿಸಲಾಗುವುದು ಎಂಬ ವಿಷಯವನ್ನು ಸಭೆಯ ಗಮನಕ್ಕೆ ತಂದು, ಈ ಸಭೆಯಲ್ಲಿ ಎಲ್ಲಾ ಷರತ್ತುಗಳು ಇದ್ದರು ಇದನ್ನು ಇನ್ನು ಕಾರ್ಯಗತಗೊಳಿಸಿರುವುದಿಲ್ಲ ಎಂಬ ಅಂಶವನ್ನು ಸಭೆಯ ಗಮನಕ್ಕೆ ತಂದರು.<br><br>ಶ್ರೀ ನಟರಾಜು ಹೆಚ್.ಎಸ್. ಅವರು ಮಾತನಾಡಿ ಪ್ರತಿ ತಿಂಗಳು ವರದಿಯನ್ನು ಸಲ್ಲಿಸಿರುತ್ತೇವೆ ಎಂದು ತಿಳಿಸಿದರು. |

| | |
|---|---|
| | ಮಾನ್ಯ ಕುಲಪತಿಯವರು ಮಾತನಾಡಿ ಈಗಿನ ವಿದ್ಯಾರ್ಥಿಗಳಿಗೆ 5 ವರ್ಷ ಶಿಷ್ಯವೇತನ ನೀಡಿದ್ದರು ಅವರು ತಮ್ಮ ಸಂಶೋಧನೆಯನ್ನು ಪೂರ್ಣಗೊಳಿಸಿರುವುದಿಲ್ಲ. ಶಿಷ್ಯವೇತನವನ್ನು ನೀಡಿದ ಮೇಲೆ ವಿದ್ಯಾರ್ಥಿಗಳು 5 ವರ್ಷಕ್ಕೆ ಸಂಶೋಧನೆಯನ್ನು ಪೂರ್ಣಗೊಳಿಸಬೇಕೆಂಬುದು ನನ್ನ ಸಲಹೆ. ಕನಿಷ್ಟಪಕ್ಷ ಕಷ್ಟಪಟ್ಟಾದರು ಸಂಶೋಧನೆ ಮುಗಿಸಬೇಕು. ಕೆಲವರ ಶಿಷ್ಯವೇತನ ಮುಗಿದಿದ್ದರು ಇನ್ನು ಸಂಶೋಧನೆಯನ್ನು ಪೂರ್ಣಗೊಳಿಸಿರುವುದಿಲ್ಲ. ಅಂತಹವರ ಮನವಿ ಕೂಡ ಬಂದಿದೆ ಎಂದು ತಿಳಿಸಿದರು.<br><br>ಶ್ರೀ ನಾಗರಾಜು ಹೆಚ್.ಎಸ್. ಅವರು ಮಾತನಾಡಿ ಪಿಎಚ್.ಡಿ ಅಧ್ಯಯನ ಮಾಡಲು ನಮ್ಮ ವಿಶ್ವವಿದ್ಯಾನಿಲಯದಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆಯಾ? ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ ಅರ್ಜಿಯನ್ನು ಆಹ್ವಾನಿಸಲಾಗುವುದಿಲ್ಲ ಆದರೆ ಮಾರ್ಗದರ್ಶಕರ ಹತ್ತಿರ ವಿದ್ಯಾರ್ಥಿಗಳು ಹೋಗಿ ತಾವು ಸಂಶೋಧನೆ ಮಾಡುವುದಾಗಿ ಕೋರುತ್ತಾರೆ. ಒಬ್ಬ ಮಾರ್ಗದರ್ಶಕರು 8 ವಿದ್ಯಾರ್ಥಿಗಳನ್ನು ತೆಗೆದುಕೊಳ್ಳಬಹುದು. ಪಿಎಚ್.ಡಿ ಪರೀಕ್ಷೆಗೆ ಪ್ರವೇಶ ಪರೀಕ್ಷೆಯನ್ನು ನಡೆಸಲು ಕಾರ್ಯಗತರಾಗಿದ್ದ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್‌ನವರು ಕೆ.ಇ.ಎ ಮುಖಾಂತರ ಪರೀಕ್ಷೆಯನ್ನು ನಡೆಸುವುದಾಗಿ ತಿಳಿಸಿರುತ್ತಾರೆ. ಕರ್ನಾಟಕದ ವಿಶ್ವವಿದ್ಯಾನಿಲಯಗಳು ಪಿಎಚ್‌ಡಿ. ಪ್ರವೇಶಾತಿ ಪರೀಕ್ಷೆಯನ್ನು ನಡೆಸುವುದು ಬೇಡ ಎಲ್ಲರಿಗೂ ಸಾಮಾನ್ಯ ಪರೀಕ್ಷೆಯನ್ನು ನಡೆಸಲಾಗುವುದು ಎಂದು ತಿಳಿಸಿದ್ದರಿಂದ ವಿಶ್ವವಿದ್ಯಾನಿಲಯದಿಂದ ನಡೆಸಲಾಗಿರುವುದಿಲ್ಲ ಎಂದು ತಿಳಿಸಿದರು.<br><br>ಶ್ರೀ ನಟರಾಜು ಎಚ್.ಎಸ್. ಅವರು ಮಾತನಾಡಿ, ಕೆ-ಸೆಟ್ ಹಾಗೂ ಇತರೆ ಪರೀಕ್ಷೆಗಳೆಲ್ಲವನ್ನು ಅವರೇ ನಡೆಸುವುದಾದರೆ ನಮ್ಮ ವಿಶ್ವವಿದ್ಯಾನಿಲಯದ ಪಾತ್ರವೇನು ಎಂದರು. ಈಗಾಗಲೇ ಕೆಸೆಟ್ ಅನ್ನು ಕಳೆದು ಕೊಂಡಿರುವುದರಿಂದ ನಮ್ಮ ವಿಶ್ವವಿದ್ಯಾನಿಲಯಕ್ಕೆ ಲಭ್ಯವಾಗುತ್ತಿದ್ದ 5.00 ಕೋಟಿ ಶುಲ್ಕವು ಸಿಗದಂತಾಗಿದೆ. ಎಲ್ಲವೂ ಹೀಗೆ ಆಗುತ್ತಿದ್ದರೆ ನಮ್ಮ ವಿಶ್ವವಿದ್ಯಾನಿಲಯವು ಆರ್ಥಿಕವಾಗಿ ಸಬಲವಾಗುವುದೆಲ್ಲ ಎಂದು ಸಭೆಯಲ್ಲಿ ಕೇಳಿದರು. ಇದು ಶೈಕ್ಷಣಿಕ ವಿಷಯವಾಗಿರುವುದರಿಂದ ವಿದ್ಯಾರ್ಥಿಗಳ ಸಂಶೋಧನೆಗೆ ಅನುಕೂಲವಾಗುವುದರಿಂದ ಇದೊಂದು ಬಾರಿ ಎಲ್ಲಾ ಸಂಶೋಧನಾ ವಿದ್ಯಾರ್ಥಿಗಳಿಗೂ ಶಿಷ್ಯವೇತನವನ್ನು ನೀಡುವಂತೆ ಮನವಿ ಮಾಡಿದರು.<br><br>ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು (ಒಬಿಸಿ) ಅರ್ಜಿಯನ್ನು ನೀಡಿದ್ದಾರೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಶಿಷ್ಯವೇತನವನ್ನು ನೀಡುವುದಾದರೆ ನಮಗೂ ಸಹ ಶಿಷ್ಯವೇತನವನ್ನು ನೀಡಬೇಕು ಎಂದು ಮನವಿ ಸಲ್ಲಿಸಿದ್ದಾರೆ. ಅವರುಗಳಿಗೆ ನೀಡುತ್ತಿರುವ ಶಿಷ್ಯವೇತನ ರೂ. 12,000/-ಗಳು. ಆದ್ದರಿಂದ ಅವರುಗಳಿಗೂ ಶಿಷ್ಯವೇತನವನ್ನು ನೀಡಬೇಕೆಂದು ಸಭೆಯಲ್ಲಿ ತಿಳಿಸಿದರು. ಈ ವಿಷಯಕ್ಕೆ ಡಾ. ಬಸವರಾಜು ಸಿ. ಅವರು ದನಿಗೂಡಿಸಿದರು. ಸಭೆಯ ಎಲ್ಲಾ ಸದಸ್ಯರುಗಳು ಎಲ್ಲಾ ವಿದ್ಯಾರ್ಥಿಗಳು ಒಂದೇ ಎಂದು ತಿಳಿಸಿದರು.<br><br>ಹಣಕಾಸು ಅಧಿಕಾರಿಗಳು ಮಾತನಾಡಿ ಈಗಾಗಲೇ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಶಿಷ್ಯವೇತನವನ್ನು ನೀಡಲಾಗುತ್ತಿದ್ದು ಅವರಿಂದ ಪಡೆಯಲಾಗುತ್ತಿರುವ ಹೆಚ್‌ಆರ್‌ಎ ಕಡಿಮೆಯಾಗಿದೆ. ಕೇವಲ 5% ಮಾತ್ರ ಕಡಿತಗೊಳಿಸಲಾಗುತ್ತಿದೆ. ಸರ್ಕಾರದಿಂದ ಯಾವುದೇ ಅನುದಾನವು ಬಿಡುಗಡೆಯಾಗಿರುವುದಿಲ್ಲ. 5 ವರ್ಷದಿಂದ ನಮಗೆ ರೂ. 9.00 ಕೋಟಿಗೂ ಅಧಿಕ ಮೊತ್ತ ಸರ್ಕಾರದಿಂದ ಬರಬೇಕಾಗಿದೆ ಎಂದು ತಿಳಿಸಿದರು.<br><br>ಶ್ರೀ ನಾಗರಾಜು ಸಿ. ಅವರು ಮಾತನಾಡಿ ಅನುದಾನವನ್ನು ಪಡೆಯಲು ಪತ್ರವ್ಯವಹಾರವನ್ನು ನಡೆಸಲಾಗಿದೆಯೇ ಎಂದು ಸಭೆಯಲ್ಲಿ ಕೇಳಿದರು. |
| | ಡಾ. ಸಿ. ಬಸವರಾಜು ಅವರು ಮಾತನಾಡಿ ಅನಗತ್ಯ ಖರ್ಚುಗಳನ್ನು ಕಡಿತಗೊಳಿಸಿ, |

| | |
|---|---|
| | ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡುವುದು ಉಚಿತವೆಂದು ತಿಳಿಸಿದರು.<br><br>ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ ವಿದ್ಯಾರ್ಥಿಗಳಿಗೆ ಶಿಷ್ಯವೇತನವನ್ನು ಕೊಡುವುದು ಒಂದು ಭಾಗವಾದರೆ, ನೀತಿ ನಿಯಮಗಳನ್ನು ಗಮನದಲ್ಲಿಟ್ಟುಕೊಂಡು ಜೊತೆಗೆ ಮುಂಬರುವ ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ನಮ್ಮ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡು ಶಿಷ್ಯವೇತನವನ್ನು ನೀಡಬೇಕಾಗುತ್ತದೆ. ಬೇರೆ ವಿಶ್ವವಿದ್ಯಾನಿಲಯಗಳ ವಿದ್ಯಾರ್ಥಿಗಳಿಗೆ ಶಿಷ್ಯವೇತನವನ್ನು ನೀಡಬಾರದೆಂಬ ತೀರ್ಮಾನವನ್ನು ನಾವು ಬದಿಗೊತ್ತಿದ್ದಂತಾಗುತ್ತದೆ. ಈ ಒಂದು ಬಾರಿ ನಾವು ಎಲ್ಲಾ ವಿದ್ಯಾರ್ಥಿಗಳಿಗೂ ನೀಡಿದರೆ ಮುಂದೆಯೂ ಎಲ್ಲಾ ವಿದ್ಯಾರ್ಥಿಗಳಿಗೂ ನೀಡಬೇಕಾಗುತ್ತದೆ ಇದನ್ನು ಗಮನದಲ್ಲಿಟ್ಟುಕೊಂಡು ತೀರ್ಮಾನ ಕೈಗೊಳ್ಳಬೇಕಾಗುತ್ತದೆ. ಹಾಗೆಯೇ 6 ವಿದ್ಯಾರ್ಥಿಗಳು ತಡವಾಗಿ ಅಂದರೆ ಅಧಿಸೂಚನೆ ಹೊರಡಿಸಿದ ನಂತರ ನೀಡಿರುವ ಅರ್ಜಿಗಳನ್ನು ಮಾನವೀಯತೆ ದೃಷ್ಟಿಯಿಂದ ಬೇಕಾದಲ್ಲಿ ಪರಿಗಣಿಸಿ ಅವರಿಗೆ ಶಿಷ್ಯವೇತನವನ್ನು ನೀಡಲು ಕ್ರಮವಹಿಸಬಹುದೆಂದು ತಿಳಿಸಿದರು.<br><br>ಶ್ರೀ ನಟರಾಜು ಹೆಚ್.ಎಸ್. ಅವರು ಮಾತನಾಡಿ ಹೊರಗಡೆಯಿಂದ ಬಂದಂತಹ ಸಂಶೋಧನಾ ವಿದ್ಯಾರ್ಥಿಗಳು ಸಹ ವಿಶ್ವವಿದ್ಯಾನಿಲಯಕ್ಕೆ ಎಲ್ಲಾ ರೀತಿಯ ಶುಲ್ಕಗಳನ್ನು ಪಾವತಿಸುವುದರಿಂದ ಅವರನ್ನು ಸಹ ಪರಿಗಣಿಸಬೇಕೆಂದು ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ ಈ ಪ್ರಕ್ರಿಯೆಯು ಕೇವಲ ಒಂದು ವರ್ಷದವರೆಗೂ ಸೀಮಿತವಾಗಿರುವುದಿಲ್ಲ. ಶಿಷ್ಯವೇತನವನ್ನು ನಾವು 5 ವರ್ಷಗಳವರೆಗೂ ನೀಡಬೇಕಾಗಿರುತ್ತದೆ. ಆದ್ದರಿಂದ ಈ ವಿಷಯವನ್ನು ಸೂಕ್ಷ್ಮವಾಗಿ ಸೂಕ್ತವಾಗಿ ಪರಿಗಣಿಸಬೇಕಾಗುತ್ತದೆ ಎಂದು ತಿಳಿಸಿದರು. 2022-23ನೇ ಸಾಲಿಗೆ 20 ಮಂದಿ ಸಂಶೋಧನಾ ವಿದ್ಯಾರ್ಥಿಗಳಿಗೆ ಶಿಷ್ಯವೇತನವನ್ನು ಪ್ರಸ್ತುತ ಅಂದರೆ ಪ್ರಸಕ್ತ ವರ್ಷದಲ್ಲಿ ನೀಡಿ, ಏಪ್ರಿಲ್ 2024ರ ನಂತರ 2023-24ನೇ ಸಾಲಿಗೆ 20 ಮಂದಿ ವಿದ್ಯಾರ್ಥಿಗಳಿಗೆ ಶಿಷ್ಯವೇತನವನ್ನು ನೀಡಿದರೆ ವಿಶ್ವವಿದ್ಯಾನಿಲಯಕ್ಕೂ ಆರ್ಥಿಕ ಹೊರೆಯಾಗುವುದಿಲ್ಲ, ಹಾಗೆಯೇ ವರ್ಷವಾರು 20 ವಿದ್ಯಾರ್ಥಿಗಳಿಗೆ ಶಿಷ್ಯವೇತನವನ್ನು ನೀಡಿದಂತಾಗುತ್ತದೆ ಎಂದು ತಿಳಿಸಿದರು.<br><br>ಮುಂದುವರೆದು, ಬೇರೆ ವಿಶ್ವವಿದ್ಯಾನಿಲಯದ ಸಂಶೋಧನಾ ವಿದ್ಯಾರ್ಥಿಗಳಿಗೆ ಶಿಷ್ಯವೇತನವನ್ನು ನೀಡುವ ಸಂಬಂಧ ಒಂದು ಸಮಿತಿಯನ್ನು ರಚಿಸಿ ತೀರ್ಮಾನ ತೆಗೆದುಕೊಳ್ಳುವುದು. ಇದರಿಂದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಹಾಗೂ ಓಬಿಸಿ ವಿದ್ಯಾರ್ಥಿಗಳಿಗೂ ಅನುಕೂಲವಾಗುವುದೆಂದು ತಿಳಿಸಿದರು. ಜೊತೆಗೆ ವಿದ್ಯಾರ್ಥಿಗಳು ಪ್ರತಿಭಟನೆಗೆ ಮುಂದಾಗುತ್ತಾರೆ ಎಂಬ ವಿಷಯದ ಬಗ್ಗೆ ಹೇಳುವುದಾದರೆ ಎಲ್ಲಾ ವಿದ್ಯಾರ್ಥಿಗಳು ಕುಲಪತಿಗಳು ಹಾಗೂ ಕುಲಸಚಿವರು ಇಲ್ಲೇ ಬರಬೇಕೆಂದು ತಿಳಿಸುತ್ತಾರೆ. ಅಲ್ಲಿ ಹೋದರೆ ಬೇರೆ ಬೇರೆ ವಿಷಯಗಳನ್ನು ಮಾತಾಡುತ್ತಾರೆ. ವಿಶ್ವವಿದ್ಯಾನಿಲಯವು ನಿಯಮಗಳಿಗೆ ಬದ್ಧವಾಗಿರಬೇಕಾಗುತ್ತದೆ. ಪ್ರತಿಭಟನೆ ಕೈಗೊಂಡು ಪತ್ರಿಕೆಗಳಲ್ಲಿ ಬರುವುದರಿಂದ ಯಾರಿಗೂ ನಷ್ಟವಾಗುವುದಿಲ್ಲ ಆದರೆ ವಿಶ್ವವಿದ್ಯಾನಿಲಯದ ಘನತೆಗೆ ಧಕ್ಕೆಯಾಗುವ ಸಂಭವವಿರುತ್ತದೆ ಎಂದು ತಿಳಿಸಿದರು.<br><br>ಶ್ರೀ ನಾಗರಾಜು ಸಿ. ಅವರು ಮಾತನಾಡಿ ಸಂಶೋಧನಾ ವಿದ್ಯಾರ್ಥಿಗಳು ಪ್ರತಿಭಟನೆ ಮಾಡಿದ ಸಂದರ್ಭದಲ್ಲಿ ನಾನು ಹಾಗೂ ಶ್ರೀ ಹೆಚ್.ಎಸ್. ನಟರಾಜು ಅವರು ಹೋಗಿ ಅವರುಗಳ ಜೊತೆ ಮಾತನಾಡಿದೆವು. ಆ ಸಂದರ್ಭದಲ್ಲಿ ನಾವು ಎಷ್ಟು 39 ಮಂದಿ ಇದ್ದಾರೋ ಅವರುಗಳಿಗೆಲ್ಲಾ ಶಿಷ್ಯವೇತನವನ್ನು ನೀಡಬೇಕೆಂದು ಮನವಿ ಸಲ್ಲಿಸಿದ್ದಾರೆ. ಅದರಂತೆ ನಾವು ಸಿಂಡಿಕೇಟ್‌ನಲ್ಲಿ ಈ ವಿಷಯದ ಬಗ್ಗೆ ಚರ್ಚಿಸಿ ಪ್ರಾಮಾಣಿಕವಾಗಿ ಪ್ರಯತ್ನಿಸಿ ಶಿಷ್ಯವೇತನವನ್ನು ಕೊಡಿಸುವುದಾಗಿ ತಿಳಿಸಿದ್ದೆವು ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ನಿಯಮ ಬಾಹಿರವಾಗಿ ಕೆಲಸವನ್ನು ಮಾಡಲಾಗುವುದಿಲ್ಲ. ಸರ್ಕಾರದಿಂದ ಶಿಷ್ಯವೇತನವನ್ನು ರೂ.23,000/-ಗಳನ್ನು ನೀಡಿ ಎಂದು ಸರ್ಕಾರವು ತಿಳಿಸಿರುವುದಿಲ್ಲ. ವಿಶ್ವವಿದ್ಯಾನಿಲಯವೇ ಅದನ್ನು ನೀಡುತ್ತಿರುವುದು. ಬೇರೆ ವಿಶ್ವವಿದ್ಯಾನಿಲಯದಲ್ಲೂ ಇಷ್ಟು ಶಿಷ್ಯವೇತನವನ್ನು ನೀಡುತ್ತಿಲ್ಲ, ಆದರೆ ನೀವು ಏಕೆ |

| | |
|---|---|
| | ಇಷ್ಟು ಹೆಚ್ಚಿನ ಮೊತ್ತದ ಶಿಷ್ಯವೇತನವನ್ನು ನೀಡುತ್ತಿದ್ದೀರಿ ಎಂದು ಹಣಕಾಸು ಇಲಾಖೆಯ ಶ್ರೀ ಜಾಫರ್ ಅವರು ಕೇಳಿರುತ್ತಾರೆ. ಸಮಾಜಕಲ್ಯಾಣ ಇಲಾಖೆ ಹಾಗೂ ಹಿಂದುಳಿದ ವರ್ಗಗಳ ಇಲಾಖೆಯವರ ಜೊತೆ ಈಗಾಗಲೇ ಮಾತನಾಡಿದ್ದು, ಪತ್ರವನ್ನು ಸಹ ಬರೆಯಲಾಗಿದೆ. ನಮ್ಮ ವಿಶ್ವವಿದ್ಯಾನಿಲಯವು ಮಾದರಿ ವಿಶ್ವವಿದ್ಯಾನಿಲಯವಾಗಿದೆ. ಎಷ್ಟು ಅನುಕೂಲ ಮಾಡಲು ಸಾಧ್ಯವೋ ಅಷ್ಟು ಅನುಕೂಲವನ್ನು ವಿದ್ಯಾರ್ಥಿಗಳಿಗೆ ಮಾಡಬಹುದು. ಅದನ್ನು ಹೊರತುಪಡಿಸಿ ಹೆಚ್ಚಿಗೆ ಮಾಡಲು ಸಾಧ್ಯವಾಗುವುದಿಲ್ಲ ಎಂದು ತಿಳಿಸಿದರು.<br><br>ಶ್ರೀ ನಟರಾಜು ಎಚ್.ಎಸ್. ಅವರು ಮಾತನಾಡಿ 2024-25ನೇ ಸಾಲಿನಿಂದ ಬೇಕಾದರೆ ಅಧಿಸೂಚನೆ ಹೊರಡಿಸಿ ಅದರಂತೆ ಕ್ರಮವಹಿಸುವುದು. ಈಗ ಸಲ್ಲಿಸಿರುವ ಅರ್ಜಿಗಳ ಪ್ರಕಾರ ಎಲ್ಲರಿಗೂ ಶಿಷ್ಯವೇತನವನ್ನು ನೀಡಲು ಕ್ರಮವಹಿಸುವಂತೆ ಸಭೆಯಲ್ಲಿ ಕೋರಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ ಪ್ರಸ್ತುತ ಸಂದರ್ಭದಲ್ಲಿ 40 ಮಂದಿಗೆ ಶಿಷ್ಯವೇತನವನ್ನು ನೀಡುವುದು ಕಷ್ಟಸಾಧ್ಯ. ಆದರೆ 20 ಮಂದಿಗೆ ಶಿಷ್ಯವೇತನವನ್ನು ಕೊಡಬಹುದು ಎಂದು ತಿಳಿಸಿದರು.<br><br>ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಸಂಶೋಧನಾ ವಿದ್ಯಾರ್ಥಿಗಳಾದ 40 ಮಂದಿಗೆ ಶಿಷ್ಯವೇತನವನ್ನು ನೀಡಿದ್ದಲ್ಲಿ ಓಬಿಸಿ ಸಂಶೋಧನಾ ವಿದ್ಯಾರ್ಥಿಗಳೂ ಸಹ ನಮಗೂ ಶಿಷ್ಯವೇತನವನ್ನು ನೀಡುವಂತೆ ಆಗ್ರಹಿಸುತ್ತಾರೆ. ಅವರುಗಳಿಗೆ ರೂ. 23,000/-ಗಳ ಶಿಷ್ಯವೇತನವನ್ನು ನೀಡುತ್ತಿದ್ದೀರಿ, ಸರ್ಕಾರದಿಂದ ಅನುದಾನವು ಸಹ ಬಂದಿರುವುದಿಲ್ಲ. ಅಂಕಿ-ಅಂಶಗಳ ಪ್ರಕಾರ ನಾವು ಬಡವರಿದ್ದೀವಿ, ಓದುತ್ತಾ ಇದ್ದೀವಿ. ನಮಗೆ ಕೇವಲ ರೂ. 12,000/-ಗಳ ಶಿಷ್ಯವೇತನವನ್ನು ನೀಡುತ್ತಿದ್ದೀರಿ. ಅದಕ್ಕೆ 10,000/ಗಳನ್ನಾದರೂ ಅಥವಾ ರೂ. 3,000/-ಗಳನ್ನಾದರೂ ಸೇರಿಸಿ ನೀಡಿ ಎಂದು ಕೇಳುತ್ತಿದ್ದಾರೆ. ಜೊತೆಗೆ 20 ಮಂದಿ ವಿದ್ಯಾರ್ಥಿಗಳಿಗೆ ನೀಡುತ್ತಿರುವ ಶಿಷ್ಯವೇತನವನ್ನು 40 ಮಂದಿಗೂ ಸಹ ನೀಡಿ ಎಂದು ಕೇಳುತ್ತಿದ್ದಾರೆ ಎಂದು ತಿಳಿಸಿದರು. ಎಲ್ಲಾ ವಿದ್ಯಾರ್ಥಿಗಳ, ಉಪನ್ಯಾಸಕರುಗಳ, ಸಿಬ್ಬಂದಿಗಳ ಹಾಗೂ ವಿಶ್ವವಿದ್ಯಾನಿಲಯದ ಹಿತಾಸಕ್ತಿಯೇ ಮುಖ್ಯವಾಗಿರುತ್ತದೆ ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ ಕಾನೂನಾತ್ಮಕವಾಗಿ ಹಾಗೂ ನಿಯಮದ ಪ್ರಕಾರ ಏನು ಲಭ್ಯವಿದೆಯೋ ಅದರಂತೆ ಕ್ರಮವಹಿಸಬೇಕು. ಎಲ್ಲರನ್ನು ಸಂತೋಷಗೊಳಿಸಬೇಕು ಎಂಬ ನಿಟ್ಟಿನಲ್ಲಿ ತೀರ್ಮಾನ ತೆಗೆದುಕೊಳ್ಳಬಾರದು ಎಂದು ತಿಳಿಸಿದರು. ಶಿಷ್ಯವೇತನವನ್ನು ನೀಡುವುದಕ್ಕಾಗಿ ಒಟ್ಟು ರೂ. 8.00 ಕೋಟಿಗಳು ಬೇಕಾಗುತ್ತದೆ ಅದನ್ನು ಎಲ್ಲಿಂದ ಭರಿಸುವುದು, ಹಾಗೆಯೇ ಶಿಷ್ಯವೇತನವನ್ನು 3 ವರ್ಷಗಳಿಗೆ ನಿಗಧಿಪಡಿಸಲಾಗಿತ್ತು ಆದರೆ ಅದನ್ನು ಐದು ವರ್ಷಗಳಿಗೆ ಹೆಚ್ಚಿಸಿ ನೀಡಲಾಗಿದೆ. ಸರ್ಕಾರದಿಂದ ರೂ. 10,000/-ಗಳು ಪ್ರತಿ ವಿದ್ಯಾರ್ಥಿಗೆ ಬರುತ್ತದೆ ಎಂದು ತಿಳಿಸಿದೆ. ಆ ಹಣವು ಬಂದಾಗಲು ವಿದ್ಯಾರ್ಥಿಗಳು ವಾಪಸ್ಸು ನೀಡಿರುವುದಿಲ್ಲ. ಈ ಎಲ್ಲಾ ಹಣವನ್ನು ಎಲ್ಲಿಂದ ಭರಿಸಲಿಕ್ಕೆ ಸಾಧ್ಯ? ಎಂದು ತಿಳಿಸಿದರು. |
| ತೀರ್ಮಾನ | **ಸುದೀರ್ಘ ಚರ್ಚೆಯ ನಂತರ 2022-23ನೇ ಸಾಲಿನ 20 ಸಂಶೋಧನಾ ವಿದ್ಯಾರ್ಥಿಗಳಿಗೆ ಪ್ರಸ್ತುತ ವರ್ಷದಲ್ಲಿ ಶಿಷ್ಯವೇತನವನ್ನು ನೀಡುವುದು. 2023-24ನೇ ಸಾಲಿನ 20 ಸಂಶೋಧನಾ ವಿದ್ಯಾರ್ಥಿಗಳಿಗೆ ಏಪ್ರಿಲ್ 2024ರ ನಂತರ ಶಿಷ್ಯವೇತನವನ್ನು ವಿಶ್ವವಿದ್ಯಾನಿಲಯದ ಮಾರ್ಗಸೂಚಿಯನುಸಾರ ನೀಡಲು ತೀರ್ಮಾನಿಸಿತು. ಹಾಗೂ ಹೊರ ವಿಶ್ವವಿದ್ಯಾನಿಲಯ ಮತ್ತು ಖಾಸಗಿ ವಿದ್ಯಾಸಂಸ್ಥೆಗಳಲ್ಲಿ ಸ್ನಾತಕೋತ್ತರ ಪದವಿ ಪಡೆದು ನಮ್ಮ ವಿಶ್ವವಿದ್ಯಾನಿಲಯದಲ್ಲಿ ಸಂಶೋಧನೆ ನಡೆಸುವ ವಿದ್ಯಾರ್ಥಿಗಳಿಗೆ ಶಿಷ್ಯವೇತನವನ್ನು ನೀಡುವ ಸಂಬಂಧ ಒಂದು ಸಮಿತಿಯನ್ನು ರಚಿಸಿ, ಸಮಿತಿಯ ವರದಿಯನ್ವಯ ಕ್ರಮಕೈಗೊಳ್ಳಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು.** |

| | |
|---|---|
| **ಸಾಮಾನ್ಯ ಸಭೆ 2024/1.24** | ಶ್ರೀ ಶಿವಕುಮಾರ್ ಜೆ., ಪ್ರಥಮ ದರ್ಜೆ ಸಹಾಯಕ, ಯುವರಾಜ ಕಾಲೇಜು, ಮೈಸೂರು ಇವರು ಕಾಲೇಜಿನ ಆವರಣದಲ್ಲಿ ಆತ್ಮಹತ್ಯೆಗೆ ಪ್ರಯತ್ನಿಸಿರುವ ಪ್ರಕರಣದ ಬಗೆಗೆ. |
| | ಕುಲಸಚಿವರು ಮಾತನಾಡಿ, ಯುವರಾಜ ಕಾಲೇಜಿನ ಪ್ರಭಾರ ಪ್ರಾಂಶುಪಾಲರಾದ ಡಾ. ಹೆಚ್.ಸಿ.ದೇವರಾಜೇಗೌಡ ಇವರ ವಿರುದ್ಧ ಆರೋಪಣಾ ಮತ್ತು ದೋಷಾರೋಪಣಾ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ. ಈ ಹಂತದಲ್ಲಿ ಡಾ. ಹೆಚ್.ಸಿ.ದೇವರಾಜೇಗೌಡ ಇವರು ಮಾನ್ಯ ಕುಲಪತಿ ಹಾಗೂ ಕುಲಸಚಿವರಿಗೆ ಮನವಿ ಸಲ್ಲಿಸಿದ್ದು, ಹಾಗೂ ಈ ಸಂಬಂಧ ಮಾಹಿತಿ/ದಾಖಲೆಯುಳ್ಳ 04 ಪುಸ್ತಕಗಳನ್ನು speed post ಮುಖಾಂತರ ಸಲ್ಲಿಸಿರುತ್ತಾರೆ. ಸದರಿ ದಾಖಲೆಗಳಲ್ಲಿ ಏನಿದೆ ಇನ್ನು ಪರಿಶೀಲಿಸಿಲ್ಲ. ವಿಶ್ವವಿದ್ಯಾನಿಲಯದಿಂದ ಜಾರಿಗೊಳಸಲಾದ ಕಾರಣ ಕೇಳ ನೋಟೀಸಿಗೆ ಲಿಖಿತ ಸಮಜಾಯಿಷಿ ಸಲ್ಲಿಸುವಾಗ ಯಾವುದೇ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಸದರಿ ವಿಷಯವು ಹಣಕಾಸಿಗೆ ಸಂಬಂಧಿಸಿದ (ರೂ. 10.00 ಲಕ್ಷ, 2.00 ಲಕ್ಷ ಅಥವಾ 50.00 ಲಕ್ಷಗಳದ್ದಾಗಿರಬಹುದು) ವಿಚಾರವಾಗಿರುವುದರಿಂದ ಹಾಗೂ ಮಾನ್ಯ ಕುಲಪತಿಗಳು ಸೂಚನೆ ನೀಡಿರುವುದರಿಂದ ಸಂಪೂರ್ಣವಾಗಿ ವಿಚಾರಣೆಗೊಳಪಡಬೇಕು. ಪ್ರಾಂಶುಪಾಲರು ಸಲ್ಲಿಸಿರುವ ದಾಖಲೆಗಳನ್ನು ತನಿಖೆಯಲ್ಲಿ ಹಾಜರುಪಡಿಸಲಾಗುವುದೆಂದು ತಿಳಿಸಿದ್ದೇನೆ. ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುವ booklet ಗಳನ್ನು ತಮಗೂ ನೀಡಲಾಗಿದೆ ಎಂದು ಸಭೆಯ ಗಮನಕ್ಕೆ ತಂದರು.<br><br>ಶ್ರೀ ನಟರಾಜು ಹೆಚ್.ಎಸ್. ರವರು ಮಾತನಾಡಿ, ಹಿಂದೆ ಸದರಿ ವಿಷಯದ ಬಗ್ಗೆ ಪ್ರಸ್ತಾಪಿಸಿದಾಗ ಶ್ರೀ ಶಿವಕುಮಾರ್ ಜೆ ಅವರ ಬಗ್ಗೆ ಪೂರ್ಣ ಮಾಹಿತಿ ಇರಲಿಲ್ಲ. ಹಾಗಾಗಿ ನಾನು ಶ್ರೀ ಶಿವಕುಮಾರ್ ಜೆ ಅವರ ಪರವಾಗಿ ಮಾತಾಡಿದ್ದೆ. ಆನಂತರದಲ್ಲಿ ನನಗೆ ಸಿಕ್ಕಂತಹ ಮಾಹಿತಿಯನ್ನು ಗಮನಿಸುತ್ತಾ ಹೋದರೆ ಸಭೆಯೇ ಬೆಚ್ಚುವಂತದ್ದಿದೆ. ಶ್ರೀ ಶಿವಕುಮಾರ್ ಜೆ ಇವರ ಮೇಲೆ ಅತ್ಯಾಚಾರ ಪ್ರಕರಣವಿರುತ್ತದೆ. ಎಫ್.ಐ.ಆರ್. ದಾಖಲಾಗಿರುತ್ತದೆ. ಆದರೂ ವಿಶ್ವವಿದ್ಯಾನಿಲಯವು ಐದು ವರ್ಷದ ನಂತರ ಪದೋನ್ನತಿ ನೀಡಿದೆ. ಜೊತೆಗೆ ಚೆಕ್ ಫೋರ್ಜರಿ ಕೇಸ್ ಇದ್ದು, ಲಕ್ಷಾಂತರ ಹಣವನ್ನು ಅವರ ಖಾತೆಗೆ ಜಮಾ ಮಾಡಿಕೊಂಡಿರುತ್ತಾರೆ. ನಗದು ಡೆಪಾಸಿಟ್ ಸುಮಾರು 80 ಲಕ್ಷ ರೂ.ಗಳಷ್ಟಿದೆ. ಈ ಹಣ ವಿದ್ಯಾರ್ಥಿಗಳ ಶುಲ್ಕವಾಗಿರುತ್ತದೆಂದು ತಿಳಿಸಿದರು.<br><br>ಡಾ. ಬಸವರಾಜು .ಸಿ ರವರು ಮಾತನಾಡಿ, ಇವುಗಳನ್ನೆಲ್ಲಾ ಗಮನಿಸಿದರೆ ಡಾ. ಹೆಚ್.ಸಿ. ದೇವರಾಜೇಗೌಡ ಅವರು ಪ್ರಾಂಶುಪಾಲರಾಗಿ charge ತೆಗೆದುಕೊಳ್ಳುವ ಮೊದಲೇ ಅಂದರೆ ಪ್ರೊ. ಯಶೋಧರವರು ಪ್ರಾಂಶುಪಾಲರಾದಾಗಿನಿಂದಲೂ ಹಣ ದುರುಪಯೋಗ ಮಾಡಿಕೊಂಡಿರುವುದು ಕಂಡು ಬಂದಿದೆಯೆಂದು ತಿಳಿಸಿದರು.<br><br>ಶ್ರೀ ಗೋಕುಲ್ ಗೋವರ್ಧನ್ ಮಾತನಾಡಿ, ವಿಚಾರಣಾ ವ್ಯಾಪ್ತಿಯಲ್ಲಿ ಪ್ರೊ. ಯಶೋಧ ಅವರನ್ನೊಳಗೊಂಡಂತೆ ತನಿಖೆ ಮಾಡಬೇಕಾಗಬಹುದು ಎಂದೆನ್ನಿಸುತ್ತಿದೆ. ಸದರಿ ವಿಷಯಕ್ಕೆ ಸಂಬಂಧಿಸಿದ ಕಡತವನ್ನು ಅಧ್ಯಯನ ಮಾಡುವುದಕ್ಕೋದರೆ ನಮಗೆ/ವಕೀಲರಿಗೆ ಬರುವ ಕೇಸ್‌ಗಿಂತ ಜಾಸ್ತಿ ಇವರ ಕೇಸ್‌ಅನ್ನು ಹೆಚ್ಚು ಅಧ್ಯಯನ ಮಾಡಬೇಕಾಗುತ್ತದೆಂದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಈ ಪ್ರಕರಣದಲ್ಲಿ ಹೆಚ್ಚು ವಿಚಾರಗಳು ಕಂಡುಬರುತ್ತಿರುವುದರಿಂದ ಹಾಗೂ ವಿಚಾರಣೆಯು ತರ್ಕಬದ್ಧವಾಗಿ ಅಂತ್ಯಗೊಳ್ಳಬೇಕಾಗಿರುವುದರಿಂದ ನಿವೃತ್ತ ನ್ಯಾಯಧೀಶರಾದ ಶ್ರೀ ವೆಂಕಟೇಶ್, Retired District and Session Judge ಇವರನ್ನು ವಿಚಾರಣೆಗೆ ನೇಮಕ ಮಾಡಲಾಗುತ್ತಿದ್ದು, ಈ ತನಿಖೆಯು ಪಾರದರ್ಶಕವಾಗಿರುತ್ತದೆ ಎಂದರು. ಪ್ರಸ್ತುತ ಪ್ರಕರಣದಲ್ಲಿ ಹಲವಾರು ಆಯಾಮಗಳು ವಿಚಾರಗಳು ಕಂಡುಬರುತ್ತಿರುವುದರಿಂದ ಇವುಗಳೆಲ್ಲವನ್ನು ಹೊರಚೆಲ್ಲುವಂತಹ ವ್ಯವಸ್ಥೆ ಮಾಡಬೇಕಾದಲ್ಲಿ ನ್ಯಾಯಾಧೀಶರನ್ನೇ ನೇಮಕ ಮಾಡಬೇಕಾಗುತ್ತದೆ. ಈ ಒಂದು ತನಿಖೆಯಿಂದ ವಿಚಾರಣೆಯಿಂದ ಇಂತಹ ಕಾರ್ಯವನ್ನುವೆಸಗುವವರಿಗೆ ಎಚ್ಚರಿಕೆಯ ಗಂಟೆಯಾಗಿರಬೇಕೆಂಬ ನಿಟ್ಟಿನಲ್ಲಿ ಕ್ರಮವನ್ನು |

| | |
|---|---|
| | ತೆಗೆದುಕೊಳ್ಳಬಹುದೆಂದು ತಿಳಿಸಿದರು.<br><br>ಮಾನ್ಯ ಎಲ್ಲಾ ಸದಸ್ಯರುಗಳು ಯುವರಾಜ ಕಾಲೇಜಿನಲ್ಲಿ ಮೊದಲು ಆಡಿಟ್ ಪ್ರಕ್ರಿಯೆಯು ಪೂರ್ಣಗೊಳ್ಳಬೇಕೆಂದು ಆಗ್ರಹಿಸಿದರು.<br><br>ಮಾನ್ಯ ಕುಲಪತಿಗಳು ಆಡಿಟ್ ನಡೆಸುವಾಗಲೇ ಶ್ರೀ ಶಿವಕುಮಾರ್ ಜೆ. ಇವರು ಎಸಗಿರುವ ಈ ಕೃತ್ಯಗಳು ಬೆಳಕಿಗೆ ಬಂದಿರುತ್ತದೆಂದರು.<br><br>ಶ್ರೀ ನಾಗರಾಜು .ಸಿ ರವರು ಮಾತನಾಡಿ, ಯುವರಾಜ ಕಾಲೇಜಿನಲ್ಲಿ 16 ಬ್ಯಾಂಕ್ ಖಾತೆಗಳಿವೆ. ಈ 16 ಬ್ಯಾಂಕ್ ಖಾತೆಗಳಿಂದ ಶ್ರೀ ಶಿವಕುಮಾರ್ ಜೆ ಅವರ ಖಾತೆಗೆ ಹಣ ಜಮಾವಾಗಿರುತ್ತದೆ. ಇದರಲ್ಲಿ ವಿದ್ಯಾರ್ಥಿಗಳು ಪಾವತಿಸಿರುವ ಶುಲ್ಕದ ಮೊತ್ತವು ಸೇರಿದೆ. ಹಾಗಾಗಿ ಮೊದಲು ಉನ್ನತ ಮಟ್ಟದ ಲೆಕ್ಕ ಪರಿಶೋಧನೆಯಾಗಬೇಕು. ಪ್ರಭಾರ ಪ್ರಾಂಶುಪಾಲರಾದ ಡಾ. ಹೆಚ್.ಸಿ. ದೇವರಾಜೇಗೌಡ ಇವರಿಗೆ ನಿರ್ದೇಶಿಸಲಾಗಿರುವ ಕಡ್ಡಾಯ ರಜೆಯನ್ನು ತೆರವುಗೊಳಿಸಿ, ಶ್ರೀ ಶಿವಕುಮಾರ್ ಜೆ. ಇವರು ಕಾಲೇಜಿನ ಹಣ ದುರುಪಯೋಗ ಪಡಿಸಿಕೊಂಡಿರುವುದಕ್ಕೆ ಸಾಕ್ಷಿಯಿರುವುದರಿಂದ ಕೂಡಲೇ ವಿಶ್ವವಿದ್ಯಾನಿಲಯದ ಸೇವೆಯಿಂದ ಅಮಾನತು ಮಾಡಬೇಕೆಂದರು.<br><br>ಡಾ. ಟಿ.ಆರ್. ಚಂದ್ರಶೇಖರ್ ರವರು ಮಾತನಾಡಿ, ವಿಚಾರಣೆ ಪೂರ್ಣಗೊಂಡು ವಿಶ್ವವಿದ್ಯಾನಿಲಯಕ್ಕೆ ವರದಿ ಸಲ್ಲಿಸಿದ ನಂತರ ಮುಂದಿನ ಕ್ರಮಕೈಗೊಳ್ಳುವುದು ಸೂಕ್ತವೆಂದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ವಿಚಾರಣೆ ಕೈಗೊಂಡು ವರದಿ ಸಲ್ಲಿಸುವವರೆಗೆ ಶ್ರೀ ಶಿವಕುಮಾರ್ ಜೆ ಇವರನ್ನು ಕೂಡಲೇ ವಿಶ್ವವಿದ್ಯಾನಿಲಯದ ಸೇವೆಯಿಂದ ಅಮಾನತು ಮಾಡುವುದಕ್ಕಾಗುವುದಿಲ್ಲ. ಡಾ. ಹೆಚ್.ಸಿ. ದೇವರಾಜೇಗೌಡ ಇವರು ಯುವರಾಜ ಕಾಲೇಜಿನಲ್ಲಿ ಪ್ರಭಾರ ಪ್ರಾಂಶುಪಾಲರಾಗಿ ಸುಮಾರು 16 ತಿಂಗಳುಗಳು ಸಂದಿವೆ. ಇದುವರೆವಿಗೂ ಡಾ. ಹೆಚ್.ಸಿ. ದೇವರಾಜೇಗೌಡ ಇವರು ಶ್ರೀ ಶಿವಕುಮಾರ್ ಜೆ. ಅವರ ಮೇಲೆ ವಿಶ್ವವಿದ್ಯಾನಿಲಯಕ್ಕೆ ಯಾವುದೇ ದೂರು ಸಲ್ಲಿಸಿರುವುದಿಲ್ಲ. ಈ ಸಂಬಂಧ ವಿಚಾರಣೆ ಕೈಗೊಳ್ಳಲು ತೀರ್ಮಾನಿಸಿದ ಹಿನ್ನೆಲೆಯಲ್ಲಿ ಶ್ರೀ ಶಿವಕುಮಾರ್ ಜೆ ಇವರ ಮೇಲೆ ದೂರುಗಳನ್ನು ಸಲ್ಲಿಸಿರುತ್ತಾರೆ. ಆದಷ್ಟು ಬೇಗ ತನಿಖೆ/ವಿಚಾರಣೆ ಪೂರ್ಣಗೊಳಿಸಿ ವರದಿ ಬಂದ ನಂತರ ತಪ್ಪಿತಸ್ಥರ ಮೇಲೆ ಕ್ರಮಕೈಗೊಂಡು ತಪ್ಪಿತಸ್ಥರಲ್ಲದವರನ್ನು ಪುನಃ ವಿಶ್ವವಿದ್ಯಾನಿಲಯಕ್ಕೆ ವಾಪಸ್ಸು ಕರೆಸಿಕೊಳ್ಳುವುದು ಸೂಕ್ತ ಎಂದು ತಿಳಿಸಿದರು.<br><br>ಶ್ರೀ ನಟರಾಜು .ಹೆಚ್.ಎಸ್ ರವರು ಮಾತನಾಡಿ, ಹಿಂದೆಯೂ ಇಂತಹ ಪ್ರಕರಣವು ಜರುಗಿತ್ತು. ವಿದ್ಯಾರ್ಥಿಯು ಕ್ರಾಫರ್ಡ್ ಭವನದ ಆವರಣದಲ್ಲಿ ಆತ್ಮಹತ್ಯೆ ಪ್ರಯತ್ನ ಮಾಡಿದ್ದ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯವು ವಿಚಾರಣೆ ನಡೆಸಿತ್ತು. ಆ ಅವಧಿಯಲ್ಲಿ ಪ್ರೊ. ವೆಂಕಟೇಶ್ ಅವರಿಗೆ ಕಡ್ಡಾಯ ರಜೆಯ ಮೇಲೆ ತೆರಳಲು ವಿಶ್ವವಿದ್ಯಾನಿಲಯವು ಯಾವುದೇ ನಿರ್ದೇಶನ ನೀಡಿರುವುದಿಲ್ಲವೆಂದರು.<br><br>ಡಾ. ಬಸವರಾಜು ಸಿ. ಅವರು ಮಾತನಾಡಿ, ಪ್ರೊ. ವೆಂಕಟೇಶ್ ಅವರನ್ನು ವಿಚಾರಣೆ ಮಾಡಲು ರಚಿಸಿದ ಸಮಿತಿ ವರದಿಯ ಬಗ್ಗೆ ತೆಗೆದುಕೊಂಡಿರುವ ಕ್ರಮವು ಏನಾಗಿದೆಯೆಂದು ತಿಳಿದುಬಂದಿಲ್ಲವೆಂದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಪ್ರೊ. ವೆಂಕಟೇಶ್ ಇವರ ಮೇಲೆ ವಿಚಾರಣೆ ಕೈಗೊಂಡ ಅವಧಿಯಲ್ಲಿ ತಾವು ಕರ್ತವ್ಯ ನಿರ್ವಹಿಸಿರುವುದಿಲ್ಲ. ಕಾನೂನಾತ್ಮಕವಾಗಿ ಹೇಳುವುದಾದರೆ ಪ್ರೊ. ವೆಂಕಟೇಶ್‌ರವರ ಮೇಲೆ ಎಫ್ಐಆರ್ ಆಗಿತ್ತು. ವಿಚಾರಣೆಯು ಜರುಗಿತ್ತು. ಒಂದು ಪರಿಶೀಲನಾ ಸಮಿತಿಯನ್ನು ರಚಿಸಲಾಯಿತು. ಸಮಿತಿಯು ಸಲ್ಲಿಸಿರುವ ವರದಿಯು "ಅಡ್ಡ ಗೋಡೆಯ ಮೇಲೆ ದೀಪವಿಟ್ಟಂತೆ" ವರದಿ ಸಲ್ಲಿಸಿರುತ್ತಾರೆ. ನೂತನವಾಗಿ ಸಮಿತಿಯನ್ನು ರಚಿಸಿ ಒಂದೆರಡು ತಿಂಗಳಾಗಿದೆ. ಡಾ. ದೇವರಾಜೇಗೌಡ ಅವರ ಪ್ರಕರಣದಲ್ಲಿ ಬೇರೆ ಬೇರೆ ಆಯಾಮವಿದ್ದರೂ ಸಹ ಶ್ರೀ ಶಿವಕುಮಾರ್ ಜೆ. ಅವರು ಆತ್ಮಹತ್ಯೆಗೆ ಪ್ರಯತ್ನಿಸಿದ್ದರಿಂದ ಅವರು ಸಾವು-ನೋವಿನಲ್ಲಿ ಹೋರಾಡುತ್ತಿದ್ದುದರಿಂದ ಹಾಗೂ ಎಫ್ಐಆರ್ ದಾಖಲಾಗಿದ್ದರಿಂದ ತುರ್ತಾಗಿ ಯಾವುದಾದರೊಂದು |

| | |
|---|---|
| | ತೀರ್ಮಾನವನ್ನು ಕೈಗೊಳ್ಳಬೇಕಾಗಿತ್ತು. ಕುಲಪತಿಯಾಗಿ ನಾನೇ ಕ್ರಮ ಜರುಗಿಸಿದರೆ ಪಕ್ಷಪಾತವಾಗಬಹುದೆಂದು ದಿನಾಂಕ : 3.1.2023 ರಂದು ನಡೆದ ವಿಶೇಷ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲಾಗಿತ್ತು. ಸಿಂಡಿಕೇಟ್ ಸಭೆಯ ತೀರ್ಮಾನದಂತೆ ತನಿಖೆ ನಡೆಸಲು ಕ್ರಮಕೈಗೊಳ್ಳಲಾಗಿದೆ. ಅದರಂತೆ ತನಿಖೆ ನಡೆಸುವ ಸಂದರ್ಭದಲ್ಲಿ ಆರೋಪ ಹೊತ್ತಂತವರು ಕರ್ತವ್ಯ ನಿರ್ವಹಿಸಬಾರದೆಂದು ಅವರಿಗೆ ಕಡ್ಡಾಯ ರಜೆಯ ಮೇಲೆ ಕಳುಹಿಸಲಾಗಿದೆ. ಡಾ. ದೇವರಾಜೇಗೌಡ ಅವರಿಗೆ ಮೊದಲೇ ನೋಟೀಸ್ ಜಾರಿ ಮಾಡಿದಾಗಲೂ ಸಹ ಅವರು ನೋಟಿಸ್‌ಗೆ ಉತ್ತರವನ್ನು ನೀಡಿರುವುದಿಲ್ಲ, ಯಾವುದೇ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಈ ಪ್ರಕರಣದಲ್ಲಿರುವ ಮಾಹಿತಿಯು ಸತ್ಯಕ್ಕೆ ದೂರ ಎಂದು ಒಂದು ಪತ್ರವನ್ನು ಸಲ್ಲಿಸಿರುತ್ತಾರೆ. ಈ ವಿಷಯವನ್ನು ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿದ ನಂತರ ಈ ಆಯಾಮಗಳೆಲ್ಲ ಜರುಗಿರುತ್ತದೆ ಹಾಗೂ ಕೆಲವು ಸಿಬ್ಬಂದಿಗಳು ಪ್ರೊ. ದೇವರಾಜೇ ಗೌಡರ ಮೇಲೂ ದೂರನ್ನು ನೀಡಿರುತ್ತಾರೆ. ಕಳೆದ ಸಿಂಡಿಕೇಟ್‌ನಲ್ಲಿ ತೆಗೆದುಕೊಂಡಂತಹ ತೀರ್ಮಾನದಂತೆ ಕ್ರಮಕೈಗೊಳ್ಳಲಾಗಿದೆ ಎಂದು ತಿಳಿಸಿದರು.<br><br>ಶ್ರೀ ನಾಗರಾಜು .ಸಿ ರವರು ಮಾತನಾಡಿ, ಮೊದಲು ಉನ್ನತ ಮಟ್ಟದ ಲೆಕ್ಕ ಪರಿಶೋಧನೆಯಾಗಬೇಕು. ಹಾಗೆಯೇ ಡಾ. ಹೆಚ್.ಸಿ. ದೇವರಾಜೇಗೌಡ ಕಡ್ಡಾಯ ರಜೆಯನ್ನು ತೆರವುಗೊಳಿಸುವುದು. ಒಂದು ವೇಳೆ ಡಾ. ಹೆಚ್.ಸಿ. ದೇವರಾಜೇಗೌಡರವರು ತಪ್ಪಿತಸ್ಥರೆಂದು ಕಂಡುಬಂದಲ್ಲಿ ಹುದ್ದೆಯಿಂದ ವಜಾಗೊಳಿಸಬಹುದೆಂದರು.<br><br>ಕುಲಸಚಿವರು ಮಾತನಾಡಿ, ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ತೆಗೆದುಕೊಂಡಿರುವ ನಿರ್ಣಯವನ್ನು ಪಾಲಿಸುವುದು ಉಚಿತವೆಂದು ತಿಳಿಸಿದರು.<br><br>ಶ್ರೀ ಗೋಕುಲ್ ಗೋವರ್ಧನ್ ರವರು ಮಾತನಾಡಿ, ಡಾ. ಹೆಚ್.ಸಿ. ದೇವರಾಜೇಗೌಡರವರು 16 ತಿಂಗಳನಿಂದಲೂ ಪ್ರಾಂಶುಪಾಲರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಹಾಗೆಯೇ ಪ್ರೊ. ಯಶೋಧ ಅವರು ಪ್ರಾಂಶುಪಾಲರಾಗಿದ್ದಾಗ ಡಾ. ಹೆಚ್.ಸಿ. ದೇವರಾಜೇಗೌಡ ಅವರು ಯುವರಾಜ ಕಾಲೇಜಿನಲ್ಲಿ ಆಡಳಿತಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದರು. ಆ ಅವಧಿಯಲ್ಲಿ ಡಾ. ಹೆಚ್.ಸಿ. ದೇವರಾಜೇಗೌಡ ಅವರು ಯಾವುದೇ ರೀತಿಯ ಪಕ್ಷಪಾತ ಮಾಡದೇ ಕಾಲೇಜಿನ ಹಿತದೃಷ್ಟಿಯಿಂದ ಆ ಅವಧಿಯಲ್ಲಿಯೇ ತನಿಖೆ ಮಾಡಬಹುದಾಗಿತ್ತು. ಪ್ರೊ. ಯಶೋಧರವರು ಪ್ರಾಂಶುಪಾಲರಾಗಿದ್ದ ಅವಧಿಯಿಂದಲೂ ಶ್ರೀ ಶಿವಕುಮಾರ್ .ಜೆ ನಿರಂತರವಾಗಿ ಸುಮಾರು ತಿಂಗಳಿಂದ 30 ರಿಂದ 40 ಸಾವಿರದವರೆಗೆ ಕಾಲೇಜಿನ ಹಣವನ್ನು ವರ್ಗಾವಣೆ ಮಾಡಿಕೊಂಡಿರುತ್ತಾರೆ. ಕೆಲವೊಂದು ತಿಂಗಳಲ್ಲಿ ಎರಡರಿಂದ ಎರಡುವರೆ ಲಕ್ಷದವರೆಗೆ ಡೆಪಾಸಿಟ್ ಮಾಡಿರುತ್ತಾರೆ. ಗುರುತರವಾದ ಇಷ್ಟೆಲ್ಲಾ ಬೆಳವಣಿಗೆಗಳು ನಡೆದಿದೆ. ಶ್ರೀ ಶಿವಕುಮಾರ್ .ಜೆ ಇವರ ಬಳಿ ಎರಡು ಕಾರುಗಳಿವೆ. ಆ ಅವಧಿಯಲ್ಲಿ ಸರಿಯಾದ ಕ್ರಮ ತೆಗೆದುಕೊಂಡಿದ್ದರೆ, ಡಾ. ಹೆಚ್.ಸಿ. ದೇವರಾಜೇಗೌಡ ಅವರನ್ನು ಕಡ್ಡಾಯ ರಜೆಯ ಮೇಲೆ ತೆರಳುವಂತೆ ನಿರ್ಣಯ ತೆಗೆದುಕೊಂಡಿರುವುದು ತಪ್ಪೆಂದು ಭಾವಿಸಬಹುದಾಗಿತ್ತು. ಕೆಲವೊಂದು ಅಂಶಗಳನ್ನು ಗಮನಿಸಿದಾಗ ಒಟ್ಟಾರೆ ಎಲ್ಲರೂ ಸೇರಿದಾಗ್ಗೆ ತಪ್ಪಾಗಿರುತ್ತದೆ ಎನಿಸುತ್ತದೆ. ಈ ತನಿಖೆಯನ್ನು ನಿಷ್ಪಕ್ಷಪಾತವಾಗಿ ಮೂರನೇ ವ್ಯಕ್ತಿಯಿಂದ ನಡೆಸಲಾಗುತ್ತಿದೆ. ಒಂದು ವೇಳೆ ಡಾ. ಹೆಚ್.ಸಿ. ದೇವರಾಜೇಗೌಡ ಅವರ ಕಡ್ಡಾಯ ರಜೆಯನ್ನು ತೆರವುಗೊಳಿಸಿದರೆ, ಶ್ರೀ ಶಿವಕುಮಾರ್ .ಜೆ ಅವರು ಭಿನ್ನಾಭಿಪ್ರಾಯ ಪಡುವುದು ಸಹಜ. ಆತ್ಮಹತ್ಯೆ ಪ್ರಯತ್ನದ ಅವಧಿಯಲ್ಲಿ ಶ್ರೀ ಶಿವಕುಮಾರ್ .ಜೆ ಅವರಿಗೆ ಬೆಂಬಲ ಸೂಚಿಸಿರುವ ಉದ್ಯೋಗಿಗಳು ಸಹ ಶ್ರೀ ಶಿವಕುಮಾರ್ .ಜೆ ಇವರ ಮೇಲೆ target ಮಾಡುತ್ತಿದ್ದಾರೆಂದು ಭಾವಿಸುತ್ತಾರೆ ಮತ್ತು ತನಿಖೆಗೆ ನಿಗಧಿತ ಅವಧಿಯನ್ನು ನೀಡಿ, ಅಂದರೆ ಒಂದು ತಿಂಗಳೊಳಗೆ ಪೂರ್ಣಗೊಳಿಸಿ ವಿಶ್ವವಿದ್ಯಾನಿಲಯಕ್ಕೆ ವರದಿ ಸಲ್ಲಿಸುವಂತೆ ತಿಳಿಸಬೇಕೆಂದರು.<br><br>ಡಾ. ಟಿ.ಆರ್. ಚಂದ್ರಶೇಖರ್ ರವರು ಮಾತನಾಡಿ, ಸಿಂಡಿಕೇಟ್ ಸಭೆಗೆ ಗೌರವವಿದೆ. ನಾವು ಅದನ್ನು ಪದೇ ಪದೇ ಬದಲಾವಣೆ ಮಾಡುವುದಕ್ಕಾಗುವುದಿಲ್ಲ. ಒಂದು ಒಂದೂವರೆ ತಿಂಗಳನಲ್ಲಿ ಕಳೆದುಕೊಳ್ಳುವುದೇನಿಲ್ಲ. ಈಗಾಗಲೇ ಸಿಂಡಿಕೇಟ್ ಸಭೆಯು ಸರ್ವಾನುಮತದಿಂದ ತೀರ್ಮಾನ ತೆಗೆದುಕೊಳ್ಳಲಾಗಿದೆ. ಇದನ್ನು ಬದಲಾವಣೆ |

| | |
|---|---|
| | ಮಾಡುವುದಾದರೆ ಮತ್ತೆ ಈ ರೀತಿಯ ನಿರ್ಧಾರಗಳು ಪುನರಾವರ್ತನೆಯಾಗುತ್ತದೆ ಹಾಗೂ ಸಿಂಡಿಕೇಟ್ ಸಭೆಯು ಮಾನ್ಯತೆಯನ್ನೆ ಕಳೆದುಕೊಳ್ಳುತ್ತದೆ. ಆ ಕಾರಣದಿಂದ ಸಿಂಡಿಕೇಟ್ ಸಭೆಗೆ ಗೌರವ ಕೊಟ್ಟು ಆ ಸಂಪ್ರದಾಯವನ್ನು ಮುಂದುವರೆಸಬೇಕು. ಈ ತನಿಖೆಯು ಹೆಚ್ಚು ಕಾಲಾವಕಾಶವನ್ನು ತೆಗೆದುಕೊಳ್ಳುವುದಿಲ್ಲ. ಏಕೆಂದರೆ ನ್ಯಾಯಾಧೀಶರ ಸಮ್ಮುಖದಲ್ಲಿ ನಡೆಯುವ ತನಿಖೆಯು ನ್ಯಾಯಯುತವಾಗಿರುತ್ತದೆ. ಇಬ್ಬರೂ ತಮ್ಮ ತಮ್ಮ ವಿಷಯವನ್ನು ಮಂಡಿಸಲಿ. ತದನಂತರ ವಿಚಾರಣೆ ತೀರ್ಪು ಬಂದಾಗ ಕ್ರಮ ವಹಿಸುವುದು ಸೂಕ್ತವೆಂದು ಅಭಿಪ್ರಾಯಿಸಿದರು.<br><br>ಶ್ರೀ ನಾಗರಾಜು .ಸಿ ರವರು ಮಾತನಾಡಿ, ಆಡಿಟ್ ವಿಷಯ ಬಂದಾಗ ಈ ಸಮಸ್ಯೆ ಉದ್ಭವವಾಗಿದೆ. ಶ್ರೀ ಶಿವಕುಮಾರ್.ಜೆ ವಿದ್ಯಾರ್ಥಿಗಳ ಶುಲ್ಕ ಮತ್ತು ಕಾಲೇಜಿನ ಸರ್ಕಾರಿ ಹಣವನ್ನು ದುರುಪಯೋಗ ಪಡಿಸಿಕೊಂಡಿರುವುದಕ್ಕೆ ದಾಖಲೆಗಳಿವೆ. ಈ ಕೃತ್ಯವನ್ನು ಮುಚ್ಚಿ ಹಾಕುವುದಕ್ಕೋಸ್ಕರ ಇಂತಹ ನಾಟಕೀಯ ಬೆಳವಣಿಗೆ ನಡೆದಿರುವುದೆಂದು ಗಮನಕ್ಕೆ ಬಂದಿದೆ. ಮಾನವೀಯತೆ ದೃಷ್ಟಿಯಿಂದ ಕಾಲೇಜಿನ ಅಧ್ಯಾಪಕರು ಮತ್ತು ಅಧ್ಯಾಪಕೇತರರು ಶ್ರೀ ಶಿವಕುಮಾರ್ .ಜೆ ಪರವಾಗಿ ಸಹಿ ಮಾಡಿದ್ದಾರೆ. ಈತನ ಹಣ ದುರುಪಯೋಗದ ದಾಖಲಾತಿಗಳು ಸಿಕ್ಕಿದಾಗ ಅವರುಗಳೆಲ್ಲ ಬದಲಾಗಿದ್ದಾರೆ ಎಂದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ದಾಖಲೆಗಳು ದಾಖಲೆ ಮಾತ್ರವಾಗಿದೆ. ದಾಖಲೆಗಳಲ್ಲಿರುವಂತಹ ವಿಚಾರವೆಲ್ಲವೂ ನಿಜವೋ ಅಥವಾ ಸುಳ್ಳೋ ಎಂಬುದಾಗಿ ಪರಿಶೀಲನೆ ಮಾಡಬೇಕಾಗಿದೆ. ಇದಕ್ಕೆಲ್ಲಾ ದಾಖಲೆ ಪುರಾವೆಗಳಿರಬೇಕು. ಮಾನ್ಯ ಸದಸ್ಯರುಗಳು ಸಿಂಡಿಕೇಟ್ ಸಭೆಯಲ್ಲಾದ ತೀರ್ಮಾನವನ್ನು ಯಾವುದೇ ಕಾರಣಕ್ಕೂ ಹಿಂಪಡೆಯಬಾರದು. ಆದ್ದರಿಂದ ಆದಷ್ಟು ಬೇಗ ತನಿಖೆ ಮಾಡಿ ಒಂದು ತಿಂಗಳೊಳಗೆ ವರದಿ ಸಲ್ಲಿಸುವಂತೆ ತನಿಖಾಧಿಕಾರಿಗಳಿಗೆ ತಿಳಿಸಲಾಗುವುದೆಂದರು.<br><br>ಪ್ರೊ. ಯಜ್ಞಮೂರ್ತಿ ಶ್ರೀಕಾಂತ್ ರವರು ಮಾತನಾಡಿ, ಕಡ್ಡಾಯ ರಜೆಯು ಶಿಕ್ಷೆಯಲ್ಲ. ಇದು ಕೇವಲ ಸತ್ಯಾಸತ್ಯತೆಗಳನ್ನು ಗುರುತಿಸುವುದಕ್ಕೋಸ್ಕರ ಪ್ರಾಂಶುಪಾಲರು ಮತ್ತು ಉದ್ಯೋಗಿಯನ್ನು ಕಡ್ಡಾಯ ರಜೆಯ ಮೇಲೆ ತೆರಳುವಂತೆ ಸೂಚಿಸಲಾಗಿದೆ ಎಂದರು.<br><br>ಶ್ರೀ ನಟರಾಜು .ಹೆಚ್.ಎಸ್ ಅವರು ಮಾತನಾಡಿ, ಸಿಂಡಿಕೇಟ್ ಸಭೆಯ ತೀರ್ಮಾನವು ಎಲ್ಲರಿಗೂ ಒಂದೇಯಾಗಿರಬೇಕು. ಪ್ರೊ. ವೆಂಕಟೇಶ್ ಅವರಿಗೆ ಕಡ್ಡಾಯ ರಜೆ ಮೇಲೆ ತೆರಳಲು ಸೂಚಿಸಿರುವುದಿಲ್ಲ. ಡಾ. ಹೆಚ್.ಸಿ. ದೇವರಾಜೇಗೌಡ ಅವರಿಗೆ ಕಡ್ಡಾಯ ರಜೆ ಮೇಲೆ ತೆರಳುವಂತೆ ಸೂಚಿಸಿರುವುದು ಸರಿಯಲ್ಲವೆಂದು ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಪ್ರೊ. ವೆಂಕಟೇಶ್‌ರವರ ಪ್ರಕರಣದ ಅವಧಿಯಲ್ಲಿ ನಾನಿರುವುದಿಲ್ಲವೆಂದು ತಿಳಿಸಿದರು.<br><br>ಕುಲಸಚಿವರು ಮಾತನಾಡಿ, ಸದರಿ ಪ್ರಕರಣದ ಸಂಬಂಧ ಈ ಹಿಂದಿನ ಪರಿಶೀಲನಾ ಸಮಿತಿಯನ್ನು ಸಿಂಡಿಕೇಟ್ ಸದಸ್ಯರನ್ನು ಒಳಗೊಂಡಂತೆ ರಚಿಸಲಾಗಿತ್ತು. ಸಮಿತಿಯು sealed cover ನಲ್ಲಿ ಸಲ್ಲಿಸಿದ ವರದಿಯನ್ನು ಸಿಂಡಿಕೇಟ್ ಸಭೆಯಲ್ಲಿಯೇ ತೆರೆಯಲಾಯಿತು. ಸಮಿತಿಯ ವರದಿಯ ಬಗ್ಗೆ ಸಿಂಡಿಕೇಟ್ ಸಭೆಯು ವ್ಯತಿರಿಕ್ತ ಅಭಿಪ್ರಾಯ ವ್ಯಕ್ತಪಡಿಸಿದಾಗ ಪುನಃ ಪರಿಷ್ಕೃತ ಉಪ ಸಮಿತಿಯನ್ನು ರಚಿಸಲಾಯಿತು. ದಿನಾಂಕ : 22.12.2023 ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಸಮಿತಿಯು ರಚನೆಯಾಗಿದ್ದು, ಸದರಿ ಸಮಿತಿಯು ಸಲ್ಲಿಸುವ ವರದಿಯನ್ನು ಸಹ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲಾಗುವುದೆಂದು ತಿಳಿಸಿದರು.<br><br>ಡಾ. ಬಸವರಾಜು .ಸಿ ರವರು ಮಾತನಾಡಿ ಪ್ರೊ. ವೆಂಕಟೇಶ್ ಬಗ್ಗೆಯೂ ದೊಡ್ಡ ಮಟ್ಟದ ತನಿಖೆಯಾಗಿ ತೀರ್ಮಾನವಾಗಬೇಕು. ಇಷ್ಟು ದಿನವಾದರೂ ತೀರ್ಮಾನವಾಗದಿರುವುದು ವಿಶ್ವವಿದ್ಯಾನಿಲಯಕ್ಕೆ ಅಗೌರವ ತೋರಿಸಿದಂತಾಗುತ್ತದೆ. ನಿಷ್ಪಕ್ಷಪಾತವಾಗಿ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಎರಡು ಪ್ರಕರಣಗಳು ಸಹ ಗಂಭೀರ ಪ್ರಕರಣಗಳಾಗಿರುತ್ತದೆ. ಪ್ರೊ. ವೆಂಕಟೇಶ್ ತನಿಖೆಯಲ್ಲಿ ಏಕೆ ಇದುವರೆವಿಗೂ ಸಮಿತಿಯು ವರದಿ ಸಲ್ಲಿಸಿರುವುದಿಲ್ಲ. ಕೂಡಲೇ ವರದಿ ಸಲ್ಲಿಸುವಂತೆ ತಿಳಿಸಿ, ತಪ್ಪು ಎಸಗಿರುವವರ ಮೇಲೆ |

ಕ್ರಮ ತೆಗೆದುಕೊಳ್ಳಬೇಕೆಂದು ಆಗ್ರಹಿಸಿದರು. ಇಂತಹ ಸಮಸ್ಯೆಗಳು ಎದುರಾಗುತ್ತಲೇ ಇರುತ್ತವೆ. ಆದ್ದರಿಂದ ಇಂತಹ ಪ್ರಕರಣಗಳು ಪುನರಾವರ್ತನೆ ಆಗದ ರೀತಿಯಲ್ಲಿ ಕ್ರಮವಹಿಸಬೇಕೆಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಆದಷ್ಟು ಬೇಗ ಸಮಿತಿಯಿಂದ ವರದಿ ಪಡೆದುಕೊಂಡು ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲಾಗುವುದೆಂದರು.

ಶ್ರೀ ನಟರಾಜು .ಹೆಚ್.ಎಸ್. ರವರು ಮಾತನಾಡಿ, ಹಿಂದಿನ ಸಭೆಯಲ್ಲಿ ಪ್ರೊ. ವೆಂಕಟೇಶ್ ಅವರ ಪ್ರಕರಣದಲ್ಲಿ ಅವರಿಗೇ ಬೇರೆ ತೆರನಾದ ಕ್ರಮವನ್ನು ಹಾಗೂ ಪ್ರಸ್ತುತ ಡಾ. ಹೆಚ್.ಎಸ್. ದೇವರಾಜೇಗೌಡ ಹಾಗೂ ಶಿವಕುಮಾರ ಜೆ. ಅವರ ಪ್ರಕರಣದಲ್ಲಿ ಕ್ರಮವನ್ನು ಬೇರೆ ಬೇರೆಯಾಗಿ ತೆಗೆದುಕೊಂಡಿರುತ್ತೀರಿ. ಆದರೆ ಈ ಎರಡೂ ಪ್ರಕರಣಗಳು ಒಂದೇ ರೀತಿಯ ಪ್ರಕರಣಗಳಾಗಿದೆ ಎಂದರು,

ಮಾನ್ಯ ಕುಲಪತಿಗಳು ಮಾತನಾಡಿ ಪ್ರೊ. ವೆಂಕಟೇಶ್ ಹಾಗೂ ಡಾ. ಹೆಚ್.ಸಿ.ದೇವರಾಜೇಗೌಡ ಪ್ರಕರಣಗಳು ಬೇರೆ ಬೇರೆಯಾಗಿದೆ. ಪ್ರೊ. ವೆಂಕಟೇಶ್ ಪ್ರಕರಣವು ವಿದ್ಯಾರ್ಥಿಯ ಕಿರುಕುಳದ ಪ್ರಕರಣವಾಗಿದೆ ಹೊರತು ವಿಶ್ವವಿದ್ಯಾನಿಲಯದ ಹಣಕಾಸಿಗೆ ಸಂಬಂಧಿಸಿದ ಪ್ರಕರಣವಾಗಿರುವುದಿಲ್ಲ. ಡಾ. ಹೆಚ್.ಸಿ. ದೇವರಾಜೇಗೌಡ ಪ್ರಕರಣದಲ್ಲಿ ಉದ್ಯೋಗಿಯು ಕಾಲೇಜಿನ ಹಣ ದುರುಪಯೋಗ ಮಾಡಿಕೊಂಡಿರುವುದಾಗಿದೆ. ಡಾ. ಹೆಚ್.ಸಿ. ದೇವರಾಜೇಗೌಡ ಪ್ರಕರಣದಲ್ಲಿ ಏಕಪಕ್ಷೀಯವಾಗಿ ಕ್ರಮ ತೆಗೆದುಕೊಂಡಿದ್ದರೆ, ತೆಗೆದುಕೊಳ್ಳುವ ಕ್ರಮವು ವಿಭಿನ್ನವಾಗಿರುತ್ತಿತ್ತು. ಅದರ ಬದಲು ಸಿಂಡಿಕೇಟ್ ಸಭೆಯು ತೀರ್ಮಾನ ತೆಗೆದುಕೊಳ್ಳುವುದು ಸೂಕ್ತ. ಕಡ್ಡಾಯ ರಜೆಯು ಶಿಕ್ಷೆಯಲ್ಲ. ಏಕೆಂದರೆ, ವಿಚಾರಣೆಯು ಪಾರದರ್ಶಕವಾಗಿರಬೇಕೆನ್ನುವ ದೃಷ್ಟಿಯಿಂದ ಮಾತ್ರ ಕಡ್ಡಾಯ ರಜೆಯನ್ನು ಸೂಚಿಸಲಾಗಿದೆ. ವಿಚಾರಣೆಯೊಂದಿಗೆ ಲೆಕ್ಕ ಪರಿಶೋಧನೆಯು ಸಹ ಮಾಡಿಸಲಾಗುವುದೆಂದರು.

ಡಾ. ನಾಗರಾಜು ಸಿ. ಅವರು ಮಾತನಾಡಿ ತುರ್ತಾಗಿ ಸಿಂಡಿಕೇಟ್ ಸಭೆಯನ್ನು ಕರೆದುದರಿಂದ, ಆ ಸಭೆಯಲ್ಲಿ ಮಾಹಿತಿ ಕೊರತೆ ಇದ್ದುದರಿಂದ ತೀರ್ಮಾನ ತೆಗೆದುಕೊಳ್ಳುವುದರಲ್ಲಿ ತಪ್ಪಾಗಿರಬಹುದೆಂದರು.

ಮಾನ್ಯ ಕುಲಪತಿಗಳು ಮಾತನಾಡಿ ಪ್ರೊ. ಹೆಚ್.ಎಸ್. ದೇವರಾಜೇಗೌಡರವರಿಗೆ ನೋಟಿಸ್‌ಅನ್ನು ನೀಡಿದ ಸಂದರ್ಭದಲ್ಲಿ ಅವರು ದಾಖಲೆಗಳನ್ನು ನೀಡಬೇಕಾಗಿತ್ತು ಆದರೆ ಅವರು ದಾಖಲೆಗಳನ್ನು ನೀಡದೆ ಪತ್ರವನ್ನು ಬರೆದಿರುತ್ತಾರೆ. ಮತ್ತು ಕಳೆದ ಸಿಂಡಿಕೇಟ್‌ನ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯದಲ್ಲಿ ಇದ್ದಂತಹ ದಾಖಲೆಗಳನ್ನು ಸಿಂಡಿಕೇಟ್ ಸಭೆಗೆ ಒದಗಿಸಲಾಗಿದೆ ಅವರಿಗೆ ನೀಡಿರುವಂತಹ ನೋಟಿಸ್‌ಅನ್ನು ಹಾಗೂ ಅದರ ಲಿಖಿತ ಸಮಜಾಯಿಷಿಯನ್ನು ಸಹ ನೀಡಲಾಗಿದೆ. ಎಂದು ತಿಳಿಸಿದರು.

ಕುಲಸಚಿವರು ಮಾತನಾಡಿ ಡಾ. ಹೆಚ್.ಎಸ್. ದೇವರಾಜೇಗೌಡರು ಹಿಂದೆ ಯುವರಾಜ ಕಾಲೇಜಿನಲ್ಲಿ ಆಡಳಿತಾಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸಿದ್ದಾರೆ. ಜೊತೆಗೆ ಸುಮಾರು 15 ತಿಂಗಳಿಂದ ಪ್ರಭಾರ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಆದರೆ ಪ್ರಾಂಶುಪಾಲರಾದ ಡಾ. ದೇವರಾಜೇಗೌಡರವರು ಪ್ರಕರಣದ ಮಾಹಿತಿಯು ತಮಗಿಲ್ಲವೆಂದರೆ ತಪ್ಪಾಗುತ್ತದೆ.

ಶ್ರೀ ನಾಗರಾಜು .ಸಿ ರವರು ಮಾತನಾಡಿ, ತಾವು ತನಿಖೆಯನ್ನು ಮಾಡಲು ಕ್ರಮಕೈಗೊಳ್ಳುವುದಾಗಿ ತಿಳಿಸಿರುತ್ತೀರಿ. ಹಾಗೆಯೇ ಮೊದಲಿಗೆ ಉನ್ನತ ಮಟ್ಟದ ಲೆಕ್ಕಪರಿಶೋಧನೆಯನ್ನು ಮಾಡಲು ಕ್ರಮಕೈಗೊಳ್ಳುವಂತೆ ತಿಳಿಸಿದರು. ವಿಚಾರಣೆಗೆ ನಿವೃತ್ತ ನ್ಯಾಯಾಧೀಶರ ಹೆಸರನ್ನು ಶಿಫಾರಸ್ಸು ಮಾಡಲು ಅವಕಾಶ ನೀಡಬೇಕೆಂದು ಕೋರಿದರು.

ಮಾನ್ಯ ಕುಲಪತಿಗಳು ಸರ್ವಾನುಮತದಿಂದ ಹೆಸರನ್ನು ತಿಳಿಸಬೇಕೆಂದು ಸೂಚಿಸಿದರು.

ಪ್ರೊ. ಶಬ್ಬೀರ್ ಮೊಹಮದ್ ಮುಸ್ತಫಾ ರವರು ಮಾತನಾಡಿ, ಆಡಿಟ್‌ಗೆ State

Accountant ಸೇರ್ಪಡೆ ಮಾಡಿಕೊಂಡು ಆಡಿಟ್ ಮಾಡಿಸುವುದು ಸೂಕ್ತವೆಂದರು.

ಮಾನ್ಯ ಕುಲಪತಿಗಳು ಮಾತನಾಡಿ ವಿಚಾರಣೆಯಲ್ಲಿ ನ್ಯಾಯಾಧೀಶರ ಜೊತೆಗೆ ಒಬ್ಬ ನುರಿತ ರಾಜ್ಯ ಲೆಕ್ಕಾಧಿಕಾರಿಯನ್ನು ಸೇರ್ಪಡೆಗೊಳಿಸಿ ತನಿಖೆ ನಡೆಸಲು ಕ್ರಮಕೈಗೊಳ್ಳುವುದಾಗಿ ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ರವರು ಮಾತನಾಡಿ, ಆಡಿಟ್‌ಗೆ State Accountant ಹಾಕಿಕೊಳ್ಳುವುದರಿಂದ ನ್ಯಾಯ ಸಿಕ್ಕಿದಂತಾಗುತ್ತದೆ ಎಂದರು.

ಶ್ರೀ ನಟರಾಜು ಹೆಚ್.ಎಸ್. ಅವರು ಮಾತನಾಡಿ ಕಡ್ಡಾಯ ರಜೆಯ ಬದಲಿಗೆ ಬೇರೆ ಯಾವುದೇ ಪರ್ಯಾಯ ಮಾರ್ಗವಿರುವುದಿಲ್ಲವೇ ಎಂದು ಕೇಳಿದರು. ಜೊತೆಗೆ ಡಾ. ಹೆಚ್.ಎಸ್. ದೇವರಾಜೇಗೌಡರು ಮನವಿಯನ್ನು ಸಲ್ಲಿಸಿದ್ದು, ನಾನು ಇಷ್ಟು ವರ್ಷಗಳ ಕಾಲ ವಿಶ್ವವಿದ್ಯಾನಿಲಯದಲ್ಲಿ ಸೇವೆಯನ್ನು ಸಲ್ಲಿಸಿದ್ದು, ನನ್ನ ಮೇಲೆ ಈ ರೀತಿ ಕ್ರಮಕೈಗೊಂಡಿರುವುದಕ್ಕೆ ಮನನೊಂದಿದೆ ಎಂದು ತಿಳಿಸಿದ್ದಾರೆ.

ಮಾನ್ಯ ಕುಲಪತಿಗಳು ಮಾತನಾಡಿ ಹಿಂದೆ ನಡೆದಂತಹ ಸಭೆಯಲ್ಲಿ ಕೆಲವು ಸದಸ್ಯರುಗಳು ಡಾ. ದೇವರಾಜೇ ಗೌಡರವರನ್ನು ಅಮಾನತ್ತುಗೊಳಿಸುವಂತೆ ತಿಳಿಸಿದ್ದೀರಿ, ಆದರೆ ಸಭೆಯಲ್ಲಿ ಅಮಾನತ್ತುಗೊಳಿಸುವುದು ಬೇಡ ತನಿಖೆ ನಡೆಸಲು ಅನುಕೂಲವಾಗುವ ರೀತಿಯಲ್ಲಿ ಇಬ್ಬರಿಗೂ ಕಡ್ಡಾಯ ರಜೆಯಮೇಲೆ ಕಳುಹಿಸುವುದು ಎಂದು ತೀರ್ಮಾನವಾಗಿತ್ತು ಎಂದು ತಿಳಿಸಿದರು.

ಡಾ. ಬಸವರಾಜು ಸಿ. ಅವರು ಮಾತನಾಡಿ, ಹಿಂದೆ ನಡೆದಂತಹ ಸಂದರ್ಭದಲ್ಲಿ ನೀವು ನೀಡಿದ ಮಾಹಿತಿಯ ಆಧಾರದ ಮೇಲೆ ಹಾಗೂ ಶ್ರೀ ಶಿವಕುಮಾರ್ ಜೆ. ಅವರು ಆತ್ಮಹತ್ಯೆಗೆ ಪ್ರಯತ್ನಿಸಿದ್ದಾರೆ ಮತ್ತು ಅವರ ಡೆತ್‌ನೋಟ್‌ನ ಆಧಾರದ ಮೇಲೆ ನಾವು ಮಾತನಾಡಿರುವುದು ಎಂದು ತಿಳಿಸಿದರು.

ಕುಲಸಚಿವರು ಮಾತನಾಡಿ ಅಂದಿನ ಸಭೆಗೆ ಡಾ. ಹೆಚ್.ಎಸ್. ದೇವರಾಜೇ ಗೌಡರಿಗೆ ನೋಟಿಸ್ ನೀಡಿರುವುದು, ಹಾಗೂ ಪ್ರಾಂಶುಪಾಲರು ನೀಡಿದಂತಹ ಲಿಖಿತ ಸಮಜಾಯಿಷಿಯನ್ನು ಕೂಡ ಕಾರ್ಯಸೂಚಿಯೊಂದಿಗೆ ಮಂಡಿಸಲಾಗಿದೆ.

ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ ಶ್ರೀ ಶಿವಕುಮಾರ್ ಜೆ. ಅವರು ಮಾತ್ರೆ ತೆಗೆದುಕೊಂಡು ಆತ್ಮಹತ್ಯೆಗೆ ಪ್ರಯತ್ನಿಸಿದ್ದಾರೆ ಎಂಬ ಕಾರಣಕ್ಕೆ ಅವರನ್ನು ನಿರಪರಾಧಿ ಎಂದು ಪರಿಗಣಿಸಬಾರದೆಂದು ತಿಳಿಸಿದ್ದೆ, ಅಂದರೆ ಜೀವನ್ಮರಣದ ವಿರುದ್ಧ ಹೋರಾಡುತ್ತಿರುವವರ ವಿರುದ್ಧ ಮಾತಾಡಿದ್ದೀರಾ? ಎಂಬ ವಿಷಯವು ಹೊರಗಡೆ ಹೋಗಿತ್ತು. ಆದರೆ ನಾವು ಸಭೆಯಲ್ಲಿ ಎಲ್ಲಾ ವಿಷಯಗಳನ್ನು ಸೂಕ್ಷ್ಮವಾಗಿ ಗಮನಿಸಿ ಮಾತನಾಡಬೇಕಾಗುತ್ತದೆ ಎಂದು ತಿಳಿಸಿದರು. ನಮಗೆ ಶಿವಕುಮಾರ್ ಅವರಾಗಲಿ ಅಥವಾ ಪ್ರಾಂಶುಪಾಲರಾಗಲಿ ಪರಿಚಯವಿಲ್ಲ. ಆದರೆ ನಾವು ಎರಡೂ ಕಡೆಯು ಗಮನಹರಿಸಿ ತೀರ್ಮಾನವನ್ನು ತೆಗೆದುಕೊಳ್ಳಬೇಕಾಗುತ್ತದೆ ಎಂದು ತಿಳಿಸಿದರು. ಆದಷ್ಟು ಬೇಗ ಒಂದು ಅವಧಿಯನ್ನು ನಿಗಧಿಪಡಿಸಿ ವಿಚಾರಣೆಯನ್ನು ಪೂರ್ಣಗೊಳಿಸಿ ವರದಿಯನ್ನು ನೀಡಬೇಕೆಂದು ತಿಳಿಸಿದರು.

ಶ್ರೀ ನಟರಾಜು ಹೆಚ್.ಎಸ್. ಅವರು ಮಾತನಾಡಿ ಸಮಿತಿಯ ವರದಿಯನ್ವಯ ವಿಶ್ವವಿದ್ಯಾನಿಲಯವು ತೆಗೆದುಕೊಳ್ಳುವ ಕ್ರಮದ ಬಗ್ಗೆ ಅವರುಗಳು ಕೋರ್ಟ್‌ಗೆ ಹೋಗಲು ಅವಕಾಶವಿದೆಯೇ ಎಂದು ಕೇಳಿದರು.

ಸಭೆಯು ಅವರುಗಳು ಕೋರ್ಟ್‌ಗೆ ಹೋಗಲು ಅವಕಾಶವಿದೆ ಎಂದು ತಿಳಿಸಿತು.

ಕುಲಸಚಿವರು ಮಾತನಾಡಿ ಕೋರ್ಟ್ ಬಗ್ಗೆ ಮಾತನಾಡುತ್ತಿರುವುದರಿಂದ, ತಮಗೆಲ್ಲಾ ಬಂದಿರುವ ಮಾಹಿತಿಯಂತೆ ಇಷ್ಟೊಂದು ಹಣಕಾಸಿನ ವಿಷಯದಲ್ಲಿ ದುರ್ವ್ಯವಹಾರ ನಡೆದಿರುವುದರಿಂದ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾದಲ್ಲಿ ಇನ್ನಷ್ಟು ಸಮಯವನ್ನು ತೆಗೆದುಕೊಳ್ಳುವ ಸಾಧ್ಯತೆಯಿರುತ್ತದೆ. ನಮಗೆಲ್ಲಾ ಬುಕ್‌ಲೆಟ್‌ಗಳನ್ನು ನೀಡಿದ್ದು, ಅದರಲ್ಲಿ

ಹಣಕಾಸು ದುರ್ಬಳಕೆಯಾಗಿರುವುದರ ಮಾಹಿತಿಯನ್ನು ನೀಡಿರುವುದರಿಂದ ಇನ್ನಷ್ಟು ಸಮಯಾವಕಾಶ ಬೇಕಾಗುತ್ತದೆ ಎಂದು ತಿಳಿಸಿದರು.

ಪ್ರೊ. ಯಜ್ಞಮೂರ್ತಿ ಶ್ರೀಕಾಂತ್ ಅವರು ಮಾತನಾಡಿ ಹಣಕಾಸಿನ ವ್ಯವಹಾರವನ್ನು ಮಾಡುವ ಅಧಿಕಾರ ಯಾರದ್ದಾಗಿರುತ್ತದೆ ಎಂದು ಸಭೆಗೆ ಕೇಳಿದರು.

ಕುಲಸಚಿವರು ಮಾತನಾಡಿ ಯುವರಾಜ ಕಾಲೇಜಿನ ಹಣಕಾಸಿನ ವ್ಯವಹಾರದ ಅಧಿಕಾರದ ಹೊಣೆ ಪೂರ್ಣ ಪ್ರಾಂಶುಪಾಲರದ್ದಾಗಿರುತ್ತದೆ ಎಂದು ತಿಳಿಸಿದರು.

ಶ್ರೀ ನಾಗರಾಜು ಸಿ. ಅವರು ಮಾತನಾಡಿ ಹಣವನ್ನು ದುರುಪಯೋಗಪಡಿಸಿಕೊಂಡಿರುವ ಪ್ರಕರಣವನ್ನು ವಿಶ್ವವಿದ್ಯಾನಿಲಯದ ಗಮನಕ್ಕೆ ತರುತ್ತಾರೆ ಎಂಬ ಉದ್ದೇಶದಿಂದ ಶ್ರೀ ಶಿವಕುಮಾರ್ ಜೆ. ಅವರು ಬ್ಲಾಕ್‌ಮೇಲೆ ಮಾಡಲು ಆತ್ಮಹತ್ಯೆಗೆ ಪ್ರಯತ್ನಿಸಿರುತ್ತಾರೆ. ಪ್ರಾಂಶುಪಾಲರು ಕಟ್ಟುನಿಟ್ಟಾಗಿ ಕಾರ್ಯವೈಖರಿ ಮಾಡುತ್ತಿರುವುದಕ್ಕೆ ಈ ಎಲ್ಲಾ ಪ್ರಕರಣಗಳು ನಡೆದಿದೆಯೆಂದು ತಿಳಿಸುತ್ತಾ, ವಿಚಾರಣೆಗೆ ನಿವೃತ್ತ ನ್ಯಾಯಾಧೀಶರ ಹೆಸರನ್ನು ಶಿಫಾರಸ್ಸು ಮಾಡಲು ಅವಕಾಶ ನೀಡಬೇಕೆಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ನಿವೃತ್ತ ಜಿಲ್ಲಾ ಹಾಗೂ ಸೆಷನ್ಸ್ ನ್ಯಾಯಧೀಶರಾದ ಶ್ರೀ ವೆಂಕಟೇಶ್ ಅವರನ್ನು ಈಗಾಗಲೇ ಸಮಿತಿಗೆ ಹೆಸರನ್ನು ಶಿಫಾರಸ್ಸು ಮಾಡಲಾಗಿದೆ ಹಾಗೂ ಒಂದು ತಿಂಗಳೊಳಗೆ ವರದಿಯನ್ನು ಸಹ ಸಲ್ಲಿಸಬೇಕೆಂದು ತಿಳಿಸಿರುವುದಕ್ಕೆ ಅವರು ಒಪ್ಪಿಗೆಯನ್ನು ನೀಡಿರುತ್ತಾರೆ ಎಂದು ತಿಳಿಸಿದರು.

ಶ್ರೀ ಗೋಕುಲ್ ಗೋವರ್ಧನ್ ರವರು ಮಾತನಾಡಿ, ನ್ಯಾಯಾಧೀಶರನ್ನು ಆಯ್ಕೆ ಮಾಡಬೇಕಾದರೆ ಯಾವ ಮಾನದಂಡವನ್ನು ಅನುಸರಿಸಿರುತ್ತೀರಿ. ಅಂದರೆ ನಮ್ಮ ವಿಶ್ವವಿದ್ಯಾನಿಲಯಕ್ಕೆ ಮೊದಲಿನಿಂದಲೂ ಈ ರೀತಿಯ ಸಮಸ್ಯೆ ಬಂದಾಗ ಯಾವ ನಿವೃತ್ತ ನ್ಯಾಯಾಧೀಶರು service ಕೊಡುತ್ತಿರುತ್ತಾರೋ ಅವರನ್ನು ಆಯ್ಕೆ ಮಾಡಿಕೊಳ್ಳುತ್ತೀರೋ ಅಥವಾ ನಮ್ಮ ವಿಶ್ವವಿದ್ಯಾನಿಲಯಕ್ಕೆ ವಕೀಲರಾಗಿ ನೇಮಕಗೊಂಡಿದ್ದಾರೋ ಅವರನ್ನು ಕೇಳಿ, ಅವರು ಏನಾದರೂ ಇಂತಹ ನ್ಯಾಯಾಧೀಶರುಗಳು ಇರುವುದರಲ್ಲಿ ಉತ್ತಮವಾದ service ಮಾಡುತ್ತಾರೆ ಹಾಗೂ ವಿಚಾರಣೆಗಳಿಗೆ ಬೇರೆ ಬೇರೆ ಆಯೋಗಗಳಿಗೆ ಹೋಗುತ್ತಾರೆಂದು ಹೇಳಿಯೋ? ಯಾವ ಮಾನದಂಡದ ಮೇಲೆ ಆಯ್ಕೆ ಮಾಡುತ್ತೀರಾ ಹಾಗೂ ತಾವು ಈಗ ಶಿಫಾರಸ್ಸು ಮಾಡಿರುವ ನ್ಯಾಯಾಧೀಶರು ಹಿಂದೆ ಏನಾದರೂ ವಿಶ್ವವಿದ್ಯಾನಿಲಯದಲ್ಲಿ ವಿಚಾರಣೆ ನಡೆಸಿದ್ದಾರೆಯೇ ಎಂದು ಕೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ, ವಕೀಲರಿಂದ ಹೆಸರುಗಳನ್ನು ಪಡೆದುಕೊಂಡು ಯಾರೂ ಬೇಗ ವಿಚಾರಣೆಯನ್ನು ನಡೆಸಿ ವರದಿಯನ್ನು ನೀಡುತ್ತಾರೆಯೋ ಅಂತಹವರನ್ನು ಪರಿಗಣಿಸಿ ಆಯ್ಕೆ ಮಾಡಲಾಗಿದೆ. ಅಷ್ಟೇ ಅಲ್ಲದೆ ಈ ನ್ಯಾಯಾಧೀಶರು ಪಾರದರ್ಶಕವಾಗಿ ವಸ್ತುನಿಷ್ಠವಾಗಿ ವಿಚಾರಣೆ ಮಾಡುತ್ತಾರೆಂದು ವಕೀಲರು ತಿಳಿಸಿರುತ್ತಾರೆ ಎಂದು ತಿಳಿಸುತ್ತಾ, ಒಂದು ತಿಂಗಳೊಳಗೆ ವರದಿ ನೀಡುತ್ತಾರೆ.

ಶ್ರೀ ನಾಗರಾಜು .ಸಿ ರವರು ಮಾತನಾಡಿ, ಸಿಂಡಿಕೇಟ್ ಸದಸ್ಯರುಗಳಿಗೂ ನಿವೃತ್ತ ನ್ಯಾಯಾಧೀಶರ ಹೆಸರನ್ನು ಸೂಚಿಸಲು ಕಾಲಾವಕಾಶ ಮಾಡಿಕೊಡಬೇಕು ಎಂದು ತಿಳಿಸಿದರು.

ಶ್ರೀ ಗೋಕುಲ್ ಗೋವರ್ಧನ್ ಹಾಗೂ ಕುಲಸಚಿವರು ಮಾತನಾಡಿ ನೀವುಗಳು ಸೂಚಿಸುವ ಹೆಸರು ಮತ್ತೆ ಸಿಂಡಿಕೇಟ್‌ನ ಗಮನಕ್ಕೆ ತಂದು ಮುಂದಿನ ಪ್ರಕ್ರಿಯೆಯನ್ನು ಕೈಗೊಳ್ಳಬೇಕಾಗುತ್ತದೆ. ಅಲ್ಲಿಯವರೆಗೂ ಹೆಚ್ಚಿನ ಸಮಯ ಬೇಕಾಗುತ್ತದೆಂದು ತಿಳಿಸಿದರು.

ಕುಲಸಚಿವರು ಮಾತನಾಡಿ ಹಿಂದಿನ ಸಭೆಯಲ್ಲಿ ಮಾನ್ಯ ಕುಲಪತಿಗಳ ವಿವೇಚಾನುಸಾರ ವಿಚಾರಣೆಗೆ ಸಂಬಂಧಿಸಿದಂತೆ ನ್ಯಾಯಮೂರ್ತಿಗಳನ್ನು ನೇಮಿಸಲು ಸಿಂಡಿಕೇಟ್ ಸಭೆಯೇ ಅನುಮತಿ ನೀಡಿತ್ತು ಎಂದು ಸಭೆಗೆ ತಿಳಿಸಿದರು.

ಶ್ರೀ ನಾಗರಾಜು ಸಿ. ಅವರು ಮಾತನಾಡಿ ತಾವು ಸೂಚಿಸಿರುವಂತಹ ನಿವೃತ್ತ

ನ್ಯಾಯಾಧೀಶರಾದ ವೆಂಕಟೇಶ್ ಅವರು ಶ್ರೀ ಶಿವಕುಮಾರ್ ಜೆ. ಮತ್ತು ಅವರ ತಂಡದವರೊಂದಿಗೆ ಸಂಪರ್ಕವಿದೆ ಎಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಆಟಿಟ್ ವರದಿ ಬಂದ ನಂತರ ಯಾರದು ತಪ್ಪು ಯಾರದೂ ತಪ್ಪಿಲ್ಲವೆಂದು ಗೊತ್ತಾಗುತ್ತದೆ ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯವು ಒಂದು ಮಾದರಿ ವಿಶ್ವವಿದ್ಯಾನಿಲಯವಾಗಿದೆ. ತಾವುಗಳು ಹಿಂದಿನ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ ಕ್ರಮವಹಿಸಲಾಗಿದೆ. ತಾವು ಈಗ ಮನಸ್ಸು ಬದಲಾವಣೆ ಮಾಡಿಕೊಳ್ಳುತ್ತಿದ್ದೀರಿ. ಈಗಾಗಲೇ ಈ ವಿಷಯದ ಬಗ್ಗೆ ಅರ್ಧ ಗಂಟೆಯಿಂದ ಚರ್ಚೆ ನಡೆಸಲಾಗಿದೆ. ನೀವು ಅವರಿಬ್ಬರ ಬಗ್ಗೆ ಯಾವುದೇ ಕ್ರಮವನ್ನು ತೆಗೆದುಕೊಳ್ಳುವುದು ಬೇಡವೆಂದರೆ ಬಿಟ್ಟು ಬಿಡೋಣ. ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ತೆಗೆದುಕೊಂಡಂತಹ ನಿರ್ಧಾರಗಳಿಗೆ ಏನು ಬೆಲೆಯಿದೆ. ಪದೇ ಪದೇ ಆ ವಿಷಯವನ್ನು ಚರ್ಚಿಸುತ್ತಾ ಇದ್ದರೆ ಸಮಯ ವ್ಯರ್ಥವಾಗುವುದು ಹಾಗೂ ಇನ್ನೂ ಹಲವು ವಿಷಯಗಳಿವೆ. ಪ್ರೊ. ಹೆಚ್.ಎಸ್. ದೇವರಾಜೇಗೌಡ ಹಾಗೂ ಶ್ರೀ ಶಿವಕುಮಾರ ಜೆ. ಅವರುಗಳು ತಪ್ಪೆಸಗದಿದ್ದಲ್ಲಿ ಇಲ್ಲಿಗೆ ವಿಷಯವನ್ನು ಬಿಟ್ಟುಬಿಡಿ. ತನಿಖೆಯೂ ನಡೆಸುವುದು ಬೇಡ ಎಂದು ತಿಳಿಸಿದರು. ತಮಗೆ ಮಾತಾಡಲು ಈಗಾಗಲೇ ಸಾಕಷ್ಟು ಸಮಯವನ್ನು ನೀಡಲಾಗಿದೆ. ಹಿಂದೆ ತೆಗೆದುಕೊಂಡು ತೀರ್ಮಾನವನ್ನು ವಾಪಸ್ಸು ತೆಗೆದುಕೊಳ್ಳಿ ಎಂದು ತಿಳಿಸುತ್ತಿದ್ದೀರಿ. ಆದರೆ ಆ ರೀತಿ ಮಾಡಬಾರದು ಯಾವ ವಿಷಯವಾದರೂ ತಪ್ಪಾಗಿದೆ ಎಂದಲ್ಲಿ ಅದಕ್ಕೆ ನಾವು ಬದ್ಧರಾಗಿರಬೇಕಾಗುತ್ತದೆ. ವಾಪಸ್ಸು ತೆಗೆದುಕೊಂಡರೆ ಸಿಂಡಿಕೇಟ್‌ಗೆ ಕೊಡುವ ಗೌರವವಲ್ಲ. ಪ್ರಾಂಶುಪಾಲರಿಗೆ ನೋಟೀಸ್ ನೀಡಿರುವುದು ನೋಟಿಸ್ ನೀಡಿದ ಐದು ದಿನಗಳ ನಂತರ ಸಭೆಯನ್ನು ಕರೆದಿರುವುದು. ಅಂದೇ ಅವರು ದಾಖಲಾತಿಗಳನ್ನು ವಿಶ್ವವಿದ್ಯಾನಿಲಯಕ್ಕೆ ಒದಗಿಸಬಹುದಾಗಿತ್ತು. ಸಭೆಯ ತೀರ್ಮಾನವಾದ ನಂತರವೇಕೆ ದಾಖಲಾತಿಗಳನ್ನು ಸಲ್ಲಿಸಿದ್ದಾರೆ. ಹಿಂದಿನ ಸಿಂಡಿಕೇಟ್ ಸಭೆಯ ತೀರ್ಮಾನವನ್ನು ವಾಪಸ್ಸು ತೆಗೆದುಕೊಳ್ಳಬಾರದೆಂದು ಸಭೆಗೆ ತಿಳಿಸಿದರು.

ಡಾ. ಶಿಲ್ಪಾ ಜೆ. ಅವರು ಮಾತನಾಡಿ ಡಾ. ಹೆಚ್.ಎಸ್. ದೇವರಾಜೇಗೌಡರು ಅವರು 32 ವರ್ಷಗಳ ಸೇವೆಯನ್ನು ಸಲ್ಲಿಸಿರುವುದರಿಂದ ಅವರಿಗೆ ಬೇರೆಡೆಗೆ ಪೋಸ್ಟಿಂಗ್ ನೀಡಬಹುದೇ? ಎಂದು ಕೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ ಮತ್ತೆ ತಾವು ಸಹ ಹಿಂದೆ ನಡೆದಂತಹ ಸಭೆಯಲ್ಲಿನ ತೀರ್ಮಾನವನ್ನು ವಾಪಸ್ಸು ತೆಗೆದುಕೊಳ್ಳುವಂತೆ ಹೇಳುತ್ತಿದ್ದೀರಿ ಎಂದು ತಿಳಿಸಿದರು. ಈ ರೀತಿಯಾದಲ್ಲಿ ಈ ರೀತಿಯ ಪ್ರಕರಣಗಳನ್ನು ಸಿಂಡಿಕೇಟ್‌ಗೆ ತರುವಂತಹ ಪ್ರಸಂಗವೇ ಬರುವುದಿಲ್ಲವೆಂದು ಹಾಗೂ ಕಾನೂನಾತ್ಮಕವಾಗಿ ನಾವು ಈ ರೀತಿಯ ತೀರ್ಮಾನ ಕೈಗೊಳ್ಳಬೇಕಾಗುತ್ತದೆ ಎಂದು ತಿಳಿಸಿದರು.

ಕುಲಸಚಿವರು ಮಾತನಾಡಿ ಶ್ರೀ ಶಿವಕುಮಾರ್ ಜೆ. ಅವರು ಆತ್ಮಹತ್ಯೆಗೆ ಪ್ರಯತ್ನಿಸಿದ ಸಂದರ್ಭದಲ್ಲಿ ಅವರ ಪ್ರಾಣಕ್ಕೆ ಹಾನಿ ಉಂಟಾದಲ್ಲಿ ಏನು ಕ್ರಮಕೈಗೊಳ್ಳಬೇಕಾಗುತ್ತಿತ್ತು? ಹಾಗೂ ಸಿಸಿಎ ಅನ್ವಯ ಕ್ರಮವಹಿಸಬೇಕೆಂದು ತಿಳಿಸಿದರು. ಮತ್ತು ಅವರಿಗೆ ನೋಟೀಸ್‌ಅನ್ನು ಜಾರಿಮಾಡಿದಾಗ ಅವರು ಪೂರಕ ದಾಖಲೆಗಳನ್ನು ನೀಡಬೇಕಾದ್ದು ಅವರ ಜವಾಬ್ದಾರಿಯಾಗಿರುತ್ತದೆ. ಆ ದಾಖಲೆಗಳನ್ನು ಅವರು ಅಂದೇ ನೀಡಿದ್ದರೆ ನಿಮಗೆ ಆ ದಾಖಲೆಗಳನ್ನು ನೀಡಬಹುದಾಗಿತ್ತು ಎಂದು ತಿಳಿಸಿದರು.

ಡಾ. ಬಸವರಾಜು .ಸಿ ರವರು ಮಾತನಾಡಿ, ಶ್ರೀ ಶಿವಕುಮಾರ್ ಜೆ. ಅವರ ಪ್ರಾಣಕ್ಕೆ ಹಾನಿ ಉಂಟಾಗಿದ್ದರೆ ಕಾನೂನಾತ್ಮಕವಾಗಿ ಕ್ರಮಕೈಗೊಳ್ಳಬಹುದಾಗಿತ್ತು. ಈ ವಿಚಾರಣೆಯನ್ನು ಪೂರ್ಣಗೊಳಿಸುವುದಕ್ಕೆ ಎಷ್ಟು ಕಾಲಾವಕಾಶವಾಗುತ್ತದೆ ಮತ್ತು ವಿಚಾರಣೆಯಲ್ಲಿ ಯಾರನ್ನೂ ಸೇರ್ಪಡೆಗೊಳಿಸುತ್ತೀರಾ ಎಂದು ಸಭೆಯಲ್ಲಿ ಕೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ, ವಿಚಾರಣೆಯನ್ನು ಒಂದು ತಿಂಗಳೊಳಗೆ ಪೂರ್ಣಗೊಳಿಸಲಾಗುವುದು. ವಿಚಾರಣಾ ಸಮಿತಿಯಲ್ಲಿ ಒಬ್ಬರು ನಿವೃತ್ತ ನ್ಯಾಯಾಧೀಶರು

| | |
|---|---|
| | ಮತ್ತು ಒಬ್ಬರು ಲೆಕ್ಕಾಧಿಕಾರಿಯನ್ನು ನೇಮಕ ಮಾಡಿಕೊಳ್ಳಲಾಗುವುದೆಂದು ತಿಳಿಸಿದರು.<br><br>ಡಾ. ಬಸವರಾಜು ಸಿ. ಅವರು ಮಾತನಾಡಿ ಮಾನ್ಯ ಕುಲಪತಿಗಳಾದ ತಾವು ಶ್ರೀ. ವೆಂಕಟೇಶ್, ನಿವೃತ್ತ ನ್ಯಾಯಾಧೀಶರನ್ನು ನೇಮಿಸಲು ಸೂಚಿಸಿದ್ದೀರಿ. ಶ್ರೀ. ನಾಗರಾಜು ಸಿ. ಸಿಂಡಿಕೇಟ್ ಸದಸ್ಯರು ತಾವು ಒಂದು ಹೆಸರನ್ನು ಸೂಚಿಸುವುದಾಗಿ ತಿಳಿಸಿರುತ್ತಾರೆ ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ ತಾವು ಯಾರಾದರ ಹೆಸರನ್ನು ಸೂಚಿಸುವುದಾದರೆ ಇಂದೇ ಸೂಚಿಸಬೇಕು ಇಲ್ಲವಾದಲ್ಲಿ ಇದಕ್ಕಾಗಿ ಮತ್ತೊಂದು ಸಿಂಡಿಕೇಟ್ ಸಭೆಯನ್ನು ಕರೆಯಬೇಕಾಗುತ್ತದೆ ಎಂದು ತಿಳಿಸಿದರು.<br><br>ಶ್ರೀ ನಾಗರಾಜು .ಸಿ ರವರು ಮಾತನಾಡಿ, ತಾವು ಯಾವ ತೀರ್ಮಾನವನ್ನು ತೆಗೆದುಕೊಳ್ಳುತ್ತೀರೋ ಅಂತೆಯೇ ತೀರ್ಮಾನವನ್ನು ತೆಗೆದುಕೊಳ್ಳಿ ಎಂದು ತಿಳಿಸಿ, ಯುವರಾಜ ಕಾಲೇಜಿನ ಪ್ರಭಾರ ಪ್ರಾಂಶುಪಾಲರಾದ ಡಾ. ಹೆಚ್.ಸಿ. ದೇವರಾಜೇಗೌಡರವರನ್ನು ಕಡ್ಡಾಯ ರಜೆಯ ಮೇಲೆ ಕಳುಹಿಸಲಾಗಿದೆ. ಈಗ ಕಾಲೇಜಿನ incharge ಅನ್ನು ಯಾರಿಗೆ ನೀಡಲಾಗಿದೆಯೆಂದು ಕೇಳಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಪ್ರಸ್ತುತ ಆಡಳಿತಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವ ಪ್ರೊ. ಮಹೇಶ್ ಅವರನ್ನು ಪ್ರಭಾರ ಪ್ರಾಂಶುಪಾಲರಾಗಿ incharge ನೀಡಲಾಗಿದೆಯೆಂದರು.<br><br>ಶ್ರೀ ನಾಗರಾಜು .ಸಿ ರವರು ಮಾತನಾಡಿ, ಪ್ರಭಾರ ಪ್ರಾಂಶುಪಾಲರ ಹುದ್ದೆಗೆ ಒಂದೇ ಅರ್ಹತೆಯುಳ್ಳವರನ್ನು ಮಾತ್ರ ನೇಮಕ ಮಾಡಬೇಕಲ್ಲವೇ ಎಂದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಿಗೆ ಖಾಯಂ ಪ್ರಾಂಶುಪಾಲರನ್ನು ನೇಮಕ ಮಾಡಿರುವುದಿಲ್ಲ ಹಾಗೂ ಪ್ರಭಾರ ಪ್ರಾಂಶುಪಾಲರು ನೇಮಕಗೊಳ್ಳುವವರೆಗೆ ಆಯಾ ಕಾಲೇಜಿನ ಆಡಳಿತಾಧಿಕಾರಿಯವರಿಗೆ incharge ನೀಡಲಾಗುವುದೆಂದರು.<br><br>ಡಾ. ಬಸವರಾಜು ಸಿ. ಅವರು ಮಾತನಾಡಿ ಈಗ incharge ನೀಡಿರುವ ಪ್ರೊ. ಮಹೇಶ್ ಅವರ ಮೇಲೆ ದೂರುಗಳಿವೆಯೇ ಎಂದು ಕೇಳಿದರು.<br><br>ಶ್ರೀ ನಾಗರಾಜು .ಸಿ ರವರು ಮಾತನಾಡಿ, ಪ್ರಸ್ತುತ ಯುವರಾಜ ಕಾಲೇಜಿಗೆ ತಾವು incharge ನೀಡಲಾಗಿರುವ ಆಡಳಿತಾಧಿಕಾರಿಯಾಗಿರುವ ಪ್ರೊ. ಮಹೇಶ್ ಅವರು ಸಹ ಶ್ರೀ ಶಿವಕುಮಾರ್ .ಜೆ ರೊಂದಿಗೆ ಇರುತ್ತಾರೆ ಎಂದರು.<br><br>ಶ್ರೀ ಗೋಕುಲ್ ಗೋವರ್ಧನ್ ರವರು ಮಾತನಾಡಿ, ಯಾರು ಯಾರೊಂದಿಗಾದರೂ ಸಂಪರ್ಕವಿದ್ದರೂ ದಾಖಲೆಗಳ ಪುರಾವೆಗಳಿರುತ್ತದೆ ಎಂದರು.<br><br>ಡಾ. ಟಿ.ಆರ್. ಚಂದ್ರಶೇಖರ್ ರವರು ಮಾತನಾಡಿ, ಒಬ್ಬರು ಒಬ್ಬರ ಪರವಾಗಿ ಇರುತ್ತಾರೆ. ಇದಕ್ಕೆ ಅಂತ್ಯವಿರುವುದಿಲ್ಲ. ಮೊದಲು ನಾವು ವ್ಯವಸ್ಥೆ ಮೇಲೆ ನಂಬಿಕೆಯಿಡಬೇಕಾಗುತ್ತದೆ. ಜೊತೆಗೆ ಸಿಂಡಿಕೇಟ್ ಸಭೆಗೆ ಮಾನ್ಯತೆ ನೀಡುವುದು ಸಂಪ್ರದಾಯ. ಕಡ್ಡಾಯ ರಜೆಯು ಶಿಕ್ಷೆಯಲ್ಲ. ವಿಚಾರಣೆಯು ಸುಲಲಿತವಾಗಿ ನಡೆದು, ಹಸ್ತಾಕ್ಷೇಪವಾಗಬಾರದೆಂಬ ಉದ್ದೇಶದಿಂದ ಮಾತ್ರ ಕಡ್ಡಾಯ ರಜೆಯನ್ನು ಸೂಚಿಸಿರುವುದು. ಈ systemಗೆ ಬೆಲೆ ನೀಡೋಣ. ಮುಂದಿನ ದಿನಗಳಿಗೆ ನಿರ್ಣಯವನ್ನು ಹಿಂಪಡೆಯುವುದು reference ಆಗಬಹುದು ಎಂದರು.<br><br>ಶ್ರೀ ನಾಗರಾಜು .ಸಿ ರವರು ಮಾತನಾಡಿ, ಮಾನ್ಯ ಕುಲಪತಿಗಳು ತೆಗೆದುಕೊಳ್ಳುವ ನಿರ್ಣಯಕ್ಕೆ ನಾವುಗಳು ಬದ್ಧರಾಗಿರೋಣ. ಆದರೂ ನಮ್ಮ ಮನವಿಯಿದೆ. ಸರ್ಕಾರವು ನಾಮನಿರ್ದೇಶನ ಮಾಡಿರುವುದು ಸರಿಯೋ ಅಥವಾ ತಪ್ಪೋ ಎಂದು ಚರ್ಚೆ |

| | |
|---|---|
| | ಮಾಡುವುದಕ್ಕೆ. ಆದ್ದರಿಂದ ಈ ದಿನ ಸಂಜೆಯೊಳಗೆ ನಿವೃತ್ತ ನ್ಯಾಯಾಧೀಶರ ಹೆಸರನ್ನು ಶಿಫಾರಸ್ಸು ಮಾಡುವುದಕ್ಕೆ ಕಾಲಾವಕಾಶ ನೀಡಬೇಕೆಂದರು.<br><br>ಡಾ. ಟಿ.ಆರ್. ಚಂದ್ರಶೇಖರ್ ರವರು ಮಾತನಾಡಿ, ನಮ್ಮ ಮನವಿಗಳನ್ನು ಸಮಿತಿಯವರಿಗೆ ಸಲ್ಲಿಸೋಣ. ಏಕೆಂದರೆ ನಮ್ಮ ಭಾವನೆಗಳೇ ತೀರ್ಮಾನವಾಗಿರುತ್ತದೆ ಎಂದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಯಾವುದೇ ಕಾರಣಕ್ಕೂ ಒಂದು ಸಿಂಡಿಕೇಟ್ ಸಭೆಯಲ್ಲಾದ ನಿರ್ಣಯವನ್ನು ಇನ್ನೊಂದು ಸಿಂಡಿಕೇಟ್ ಸಭೆಯಲ್ಲಿ ಹಿಂಪಡೆಯುವುದಕ್ಕೆ ಅವಕಾಶವಿಲ್ಲವೆಂದರು.<br><br>ಶ್ರೀ ನಟರಾಜು .ಹೆಚ್.ಎಸ್ ರವರು ಮಾತನಾಡಿ, ವಿಚಾರಣೆಗೆ ಮುಂಚೆ ಆಡಿಟ್ ಮಾಡಿಸುವುದು ಉತ್ತಮ. ಆಡಿಟ್ ಮಾಡಿಸಿದ್ದಾಗ ಮಾತ್ರ ಸತ್ಯ ಹೊರಬೀಳುತ್ತದೆ ಎಂದರು.<br><br>ಕುಲಸಚಿವರು ಮಾತನಾಡಿ, ಆಡಿಟ್ ಆಗುತ್ತಿರುವಾಗಲೇ ಈ ಎಲ್ಲಾ ಅಂಶಗಳು ಹೊರಬಂದಿದೆ. ಈ ಆಡಿಟ್ ಅನ್ನು ಮುಂದುವರೆಸಿ ವರದಿ ಪಡೆಯಲಾಗುವುದೆಂದರು.<br><br>ಡಾ. ಟಿ.ಆರ್. ಚಂದ್ರಶೇಖರ್ ರವರು ಮಾತನಾಡಿ, ಆಡಿಟ್‌ನವರು ಖಾಸಗಿಯಾಗಿರುತ್ತಾರೆ. ಆಡಿಟ್ ನಡೆಸಿ ವರದಿ ಸಲ್ಲಿಸುವುದು ಅವರ ಕರ್ತವ್ಯವಾಗಿದೆ. ಆಡಿಟ್ ಅವರೊಂದಿಗೆ State Accountant ಸಹ ಇರುತ್ತಾರೆ. State Accountant ಗೆ ಯಾರೂ influence ಮಾಡಲಾಗುವುದಿಲ್ಲವೆಂದರು.<br><br>ಶ್ರೀ ಗೋಕುಲ್ ಗೋವರ್ಧನ್ ರವರು ಮಾತನಾಡಿ, ಈ ಹಣ ದುರುಪಯೋಗವು ಪ್ರೊ. ಯಶೋಧ ಮೇಡಂ ಅವರು ಪ್ರಾಂಶುಪಾಲರಾಗಿದ್ದರಿಂದಲೂ ನಡೆಯುತ್ತಿದೆ. ಹಣ ವೆಚ್ಚವಾಗಿರುವ ರಶೀದಿಗಳನ್ನು ನೀಡಬೇಕೆಂದಾಗ clash ಪ್ರಾರಂಭವಾಗಿರುತ್ತದೆ ಎಂದರು.<br><br>ಸುದೀರ್ಘವಾಗಿ ಚರ್ಚಿಸಿದ ಸಭೆಯು ಅಂತಿಮವಾಗಿ ಈ ಕೆಳಕಂಡಂತೆ ನಿರ್ಣಯಿಸಿತು. |
| ತೀರ್ಮಾನ | **ಸುದೀರ್ಘ ಚರ್ಚೆಯ ನಂತರ, ಶ್ರೀ ವೆಂಕಟೇಶ್, ನಿವೃತ್ತ ಜಿಲ್ಲಾ ಹಾಗೂ ಸೆಷನ್ಸ್ ನ್ಯಾಯಾಧೀಶರು ಇವರನ್ನು ಇಲಾಖಾ ವಿಚಾರಣಾಧಿಕಾರಿಯಾಗಿ ನೇಮಿಸಲು ಹಾಗೂ ಈ ಪ್ರಕರಣಕ್ಕೆ ಮಂಡನಾಧಿಕಾರಿಯನ್ನು ನೇಮಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲು ತೀರ್ಮಾನಿಸಿತು.**<br><br>**ಮುಂದುವರೆದು, ಹಣ ದುರುಪಯೋಗದಂತಹ ಆರೋಪವು ಇರುವುದರಿಂದ ಸದರಿ ಇಲಾಖಾ ವಿಚಾರಣಾ ಸಮಿತಿಗೆ ಯುವರಾಜ ಕಾಲೇಜಿನಲ್ಲಿನ ಲೆಕ್ಕಪತ್ರಗಳನ್ನು ತಪಾಸಣೆ ಮಾಡುವ ಸಲುವಾಗಿ ರಾಜ್ಯ ಲೆಕ್ಕಪತ್ರ ಇಲಾಖೆಯಿಂದ ಒಬ್ಬರು ನಿವೃತ್ತ ಅಧಿಕಾರಿ ಅಥವಾ ಅದೇ ಇಲಾಖೆಯ ನುರಿತವರೊಬ್ಬರನ್ನು ನೇಮಿಸಿ, ತುರ್ತಾಗಿ ವರದಿ ಸಲ್ಲಿಸುವಂತೆ ತಿಳಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲಾಯಿತು ಮತ್ತು ವಿಚಾರಣಾ ಪ್ರಕ್ರಿಯೆ ಪೂರ್ಣಗೊಳಿಸಿ ಇಲಾಖಾ ವಿಚಾರಣಾ ವರದಿಯನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲು ಒಂದು ತಿಂಗಳು ಕಾಲಮಿತಿಗೊಳಿಸುವಂತೆ, ಆ ವರದಿಯ ಆಧಾರದ ಮೇಲೆ ನಿಯಮಗಳನುಸಾರ ಶಿಸ್ತುಕ್ರಮ ತೆಗೆದುಕೊಳ್ಳಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು.** |
| ಸಾಮಾನ್ಯ ಸಭೆ<br>2024/1.25 | ಶ್ರೀ ಎಸ್.ಜೆ.ಶಿವಣ್ಣೇಗೌಡ, ಸಂಶೋಧನಾ ವಿದ್ಯಾರ್ಥಿ, ಕ್ರೀಡಾ ವಿಜ್ಞಾನ ಮತ್ತು ದೈಹಿಕ ಶಿಕ್ಷಣ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಮಾರ್ಗದರ್ಶನಕರನ್ನು ನೇಮಿಸಿಕೊಡುವಂತೆ ಮತ್ತು ಮಹಾಪ್ರಬಂಧವನ್ನು ದಂಡರಹಿತವಾಗಿ ಸಲ್ಲಿಸಲು ಅನುಮತಿಯನ್ನು ಕೋರಿರುವ ಬಗ್ಗೆ. |
| | ಕುಲಸಚಿವರು (ಪರೀಕ್ಷಾಂಗ) ರವರು ಶ್ರೀ ಎಸ್.ಜೆ. ಶಿವಣ್ಣೇಗೌಡ, ಸಂಶೋಧನಾ ವಿದ್ಯಾರ್ಥಿ ಇವರು ದಿನಾಂಕ : 19.5.2013ರಿಂದ ಪಿಎಚ್.ಡಿ. ಖಾಯಂ ನೋಂದಣಿಯನ್ನು ಮಾಡಿಕೊಂಡಿರುತ್ತಾರೆ. ಡಾ. ಚಂದ್ರಕುಮಾರ್, ನಿವೃತ್ತ ಪ್ರಾಧ್ಯಾಪಕರು |

| | |
|---|---|
| | ಇವರಲ್ಲಿ ಮಾರ್ಗದರ್ಶನವನ್ನು ಪಡೆದಿದ್ದು ಇಲ್ಲಿಗೆ 10 ವರ್ಷಗಳಾಗಿದೆ. ಇವರು ಈಗಾಗಲೇ ಎರಡು-ಮೂರು ಬಾರಿ ಹಾಗೂ ಕೋವಿಡ್-19 ಸಾಂಕ್ರಾಮಿಕ ಪಿಡುಗಿನ ಹಿನ್ನೆಲೆಯಲ್ಲಿ ಮಹಾಪ್ರಬಂಧವನ್ನು ಸಲ್ಲಿಸಲು ದಿನಾಂಕ : 31.12.2022ರವರೆಗೆ ಕಾಲಾವಕಾಶವನ್ನು ನೀಡಲಾಗಿರುತ್ತದೆ. ಸದರಿ ವಿದ್ಯಾರ್ಥಿಗೆ ರೂ. 87,648/-ಗಳ ಶುಲ್ಕವನ್ನು ಪಾವತಿಸಲು 'ಅಧಿಕೃತ ಜ್ಞಾಪನಾ ಪತ್ರವನ್ನು' ಹೊರಡಿಸಲಾಗಿದ್ದರೂ ಯಾವುದೇ ಶುಲ್ಕವನ್ನು ಪಾವತಿಸಿರುವುದಿಲ್ಲ. ಹಾಗೂ 6 ಮತ್ತು 7ನೇ ವರ್ಷದ ವಾರ್ಷಿಕ ಶುಲ್ಕವನ್ನಾಗಲಿ ಅಥವಾ ವಿಶೇಷ ದಂಡ ಶುಲ್ಕವನ್ನು ಪಾವತಿಸಿರುವುದಿಲ್ಲ. ಶ್ರೀ ಎಸ್.ಜೆ. ಶಿವಣ್ಣೇಗೌಡ ಅವರ Pre-Thesis Colloquium ನಡೆಸಲು ಮಾರ್ಗದರ್ಶಕರು ನಿರಾಕರಿಸುತ್ತಿರುವುದರಿಂದ ಎಕ್ಸ್‌ಪರ್ಟ್ ಕಮಿಟಿಯನ್ನು ಆಯೋಜಿಸಿ ಮಹಾಪ್ರಬಂಧವನ್ನು ಸಲ್ಲಿಸಲು ಅವಕಾಶವನ್ನು ನೀಡಬೇಕೆಂದು ಕೋರಿದ ಹಿನ್ನೆಲೆಯಲ್ಲಿ ದಿನಾಂಕ : 22.06.2023 ರಂದು ವಿಚಾರಣ ಸಮಿತಿ ಸಭೆಯನ್ನು ನಡೆಸಲಾಗಿದೆ. ನಂತರ ಮಾರ್ಗದರ್ಶಕರು ಸದರಿ ವಿದ್ಯಾರ್ಥಿಯ ಸಂಶೋಧನಾ ಕಾರ್ಯವು ತೃಪ್ತಿಕರವಾಗಿಲ್ಲದ ಕಾರಣ ಸಹಿ ಹಾಕಲಾಗುವುದಿಲ್ಲ ಎಂದು ತಿಳಿಸಿರುತ್ತಾರೆ. ಸದರಿ ವಿಷಯಕ್ಕೆ ಅಧ್ಯಕ್ಷರು ಹಾಗೂ ಡೀನರು ಸಹ ಮಾರ್ಗದರ್ಶಕರ ಅಭಿಪ್ರಾಯಕ್ಕೆ ಸಮ್ಮತಿಸಿದ್ದಾರೆ.<br><br>ಶ್ರೀ ಎಸ್.ಜೆ. ಶಿವಣ್ಣೇಗೌಡ ರವರು ಮಹಾಪ್ರಬಂಧವನ್ನು ಸಲ್ಲಿಸಲು ವಿಶೇಷ ದಂಡ ಶುಲ್ಕ ರಹಿತವಾಗಿ ಹಾಗೂ ಬೇರೊಬ್ಬ ಮಾರ್ಗದರ್ಶಕರನ್ನು ನೇಮಿಸಿಕೊಡುವಂತೆ ಕೋರಿರುತ್ತಾರೆ. ಮಾರ್ಗದರ್ಶಕರಾಗಿದ್ದ ಡಾ. ಚಂದ್ರಕುಮಾರ್ ರವರು NOCಯನ್ನು ನೀಡಲಾಗುವುದಿಲ್ಲ ಎಂದು ತಿಳಿಸಿರುತ್ತಾರೆ ಎಂಬ ವಿಷಯವನ್ನು ಸಿಂಡಿಕೇಟ್ ಸಭೆಗೆ ಮಂಡಿಸಿದರು.<br><br>ಕುಲಸಚಿವರು ಮಾತನಾಡಿ ಸಂಶೋಧನಾ ವಿದ್ಯಾರ್ಥಿಯು 10 ವರ್ಷ ಕಳೆದರು ಸಂಶೋಧನಾ ಕಾರ್ಯವನ್ನು ಮುಗಿಸದೆ ಇರುವುದನ್ನು ಸಭೆಯು ಗಮನಿಸಬೇಕು ಎಂದು ತಿಳಿಸಿದರು.<br><br>ಪ್ರೊ. ಶಬ್ಬೀರ್ ಮೊಹಮ್ಮದ್ ಮುಸ್ತಾಫ ಅವರು ಮಾತನಾಡಿ ಇವರಿಗೆ ಮಹಾಪ್ರಬಂಧವನ್ನು ಮಂಡಿಸಲು ಹಾಗೂ ಬೇರೊಬ್ಬ ಮಾರ್ಗದರ್ಶಕರನ್ನು ನೇಮಿಸಲು ಅವಕಾಶವಿದೆಯೇ ಎಂದು ಸಭೆಯಲ್ಲಿ ಕೇಳಿದರು.<br><br>ಕುಲಸಚಿವ (ಪರೀಕ್ಷಾಂಗ) ಅವರು ಮಾತನಾಡಿ ಮಹಾಪ್ರಬಂಧವನ್ನು ಮಂಡಿಸಲು ಹಾಗೂ ಬೇರೊಬ್ಬ ಮಾರ್ಗದರ್ಶಕರನ್ನು ನೇಮಿಸಲು ಅವಕಾಶವಿದೆ. ಆದರೆ ಶ್ರೀ ಎಸ್.ಜೆ. ಶಿವಣ್ಣೇಗೌಡರಿಗೆ ಮಾರ್ಗದರ್ಶನ ನೀಡುತ್ತಿದ್ದ ಡಾ. ಚಂದ್ರಶೇಖರ್ ಅವರು ಬೇಬಾಕಿಯನ್ನು (NOC) ನೀಡಬೇಕಾಗುತ್ತದೆ. ಅವರು ಎನ್.ಓ.ಸಿ.ಯನ್ನು ನೀಡದೆ ಇರುವುದು ಸಮಸ್ಯೆಯಾಗಿದೆ ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ ಪ್ರಸ್ತುತ ಮಾರ್ಗದರ್ಶನ ನೀಡುತ್ತಿದ್ದವರು ಎನ್‌ಓಸಿಯನ್ನು ಏಕೆ ನೀಡುತ್ತಿಲ್ಲವೆಂದರೆ 5 ವರ್ಷಗಳ ಅವಧಿಯವರೆಗೆ ಸಂಶೋಧನಾ ಕಾರ್ಯವನ್ನು ನಡೆಸಲು ಅವಕಾಶವಿರುತ್ತದೆ. ನಂತರ 7 ವರ್ಷಗಳವರೆಗೆ ವಿಸ್ತರಣೆ ನೀಡಲಾಗಿರುತ್ತದೆ. ತಾನು ನಿವೃತ್ತಿ ಹೊಂದಿ 10 ವರ್ಷಗಳಾಗುತ್ತ ಬಂದಿದೆ. ಆದ್ದರಿಂದ ನಾನು ಏಕೆ ಎನ್‌ಓಸಿಯನ್ನು ನೀಡಲಿ ಎಂದು ಡಾ. ಚಂದ್ರಕುಮಾರ್‌ರವರು ಕೇಳುತ್ತಿದ್ದಾರೆ. ಇದು ಸತ್ಯ ಸಂಗತಿ ಎಂದು ತಿಳಿಸಿದರು.<br><br>ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ಹಿಂದೆಯೂ ಬೇರೊಬ್ಬ ಮಾರ್ಗದರ್ಶಕರನ್ನು ನೀಡಲು ಹಾಗೂ 10-15 ವರ್ಷಗಳವರೆಗೆ ಸಂಶೋಧನಾ ಕಾರ್ಯಗಳನ್ನು ವಿಸ್ತರಿಸಿಕೊಂಡಿರುವುದಕ್ಕೆ ಉದಾಹರಣೆಗಳಿವೆ. ನಾನು ಪಿಎಚ್.ಡಿ. ಮಾಡಿದಂತಹ ಸಂದರ್ಭದಲ್ಲಿ ನನ್ನ ಮಾರ್ಗದರ್ಶಕರಾಗಿದ್ದ ಪ್ರೊ. ಆರ್. ಎನ್. ದಿನೇಶ್ ಅವರು ನಾನು 15 ವರ್ಷಗಳವರೆಗೆ ಪಿಎಚ್.ಡಿ. ಮಾಡಿದ್ದೆ ಹಾಗೂ ಮೂವರು ಮಾರ್ಗದರ್ಶಕರನ್ನು ಬದಲಾವಣೆ ಮಾಡಿಕೊಂಡಿದ್ದೆ ಎಂದು ತಿಳಿಸಿದರು. ಆದ್ದರಿಂದ |

| | |
|---|---|
| | ಮಾರ್ಗದರ್ಶಕರನ್ನು ಬದಲಾವಣೆ ಮಾಡಿಕೊಳ್ಳಲು ಹಾಗೂ ಅವಧಿ ವಿಸ್ತರಿಸಲು ಅವಕಾಶವಿದೆ ಎಂದು ತಿಳಿದು ಬಂದಿದೆ. ಆದ್ದರಿಂದ ಡಾ. ಚಂದ್ರಕುಮಾರ್ ಅವರು ನಿವೃತ್ತಿ ಹೊಂದಿರುವುದರಿಂದ ಅವರಿಂದ ಎನ್.ಓ.ಸಿ. ಪಡೆಯದೆ ಮಾರ್ಗದರ್ಶಕರನ್ನು ಬದಲಾವಣೆ ಮಾಡಬಹುದೇ ಎಂಬುದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಿ ಮತ್ತೆ ಡಾ. ಚಂದ್ರಕುಮಾರ್ ಅವರಿಂದ ಏಕೆ ಎನ್.ಓ.ಸಿ.ಯನ್ನು ಪಡೆಯಬೇಕು ಎಂದು ಸಭೆಯ ಗಮನಕ್ಕೆ ತಂದರು.<br><br>ಮಾನ್ಯ ಕುಲಪತಿಗಳು ಮಾತನಾಡಿ ನಿವೃತ್ತಿ ಹೊಂದಿರುವುದರಿಂದ ಎನ್‌ಓಸಿ ಪಡೆಯದೆ ಇರುವ ಬಗ್ಗೆ ಮಾಹಿತಿಯನ್ನು ಪಡೆಯುವುದಾಗಿ ತಿಳಿಸಿ, ಒಬ್ಬ ಮಾರ್ಗದರ್ಶಕರಿಂದ ಎನ್.ಓ.ಸಿ.ಯನ್ನು ಏಕೆ ಪಡೆಯಬೇಕು ಎಂದರೆ ಸಂಶೋಧನಾ ವಿದ್ಯಾರ್ಥಿಯು ಕೈಗೊಂಡಿರುವ ಸಂಶೋಧನಾ ಕಾರ್ಯದ ದೃಢೀಕರಣವಾಗಿರುತ್ತದೆ. ಆದ್ದರಿಂದ ಸಂಶೋಧನಾ ವಿದ್ಯಾರ್ಥಿಯು ನಮ್ಮಲ್ಲಿ ಸಂಶೋಧನಾ ಕಾರ್ಯವನ್ನು ಪೂರ್ಣಪ್ರಮಾಣದಲ್ಲಿ ನಿರ್ವಹಿಸುತ್ತಿದ್ದಾಗ ಅವರು ನಡೆಸುತ್ತಿದ್ದ ಸಂಶೋಧನಾ ಕಾರ್ಯವು ತೃಪ್ತಿಕರವಾಗಿರದೆ ಇದ್ದಲ್ಲಿ ಹಾಗೂ ಕೆಲಸವನ್ನು ಸರಿಯಾಗಿ ನಿರ್ವಹಿಸದಿದ್ದಲ್ಲಿ ಹೇಗೆ ಎನ್.ಓ.ಸಿ.ಯನ್ನು ನೀಡಲು ಸಾಧ್ಯ? ಎಂದು ತಿಳಿಸಿದರು.<br><br>ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ಇಬ್ಬರಲ್ಲೂ ವೈಯಕ್ತಿಕ ದ್ವೇಷಗಳಿಂದ ಸಮಸ್ಯೆ ಬಗೆಹರಿಯದಿರುವುದರಿಂದ ಪ್ರಸ್ತುತ ವಿಷಯಕ್ಕೆ ಯಾವುದಾದರೂ ಒಂದು ಮಾರ್ಗೋಪಾಯವನ್ನು ಕಂಡುಕೊಳ್ಳಬೇಕಾಗುತ್ತದೆ. ಆದ್ದರಿಂದ ಒಂದು ಸಮಿತಿ ರಚಿಸಿ ಸಮಿತಿಗೆ ನೀಡಬೇಕೆಂದು ತಿಳಿಸಿದರು.<br><br>ಡಾ. ವಿಜಯಲಕ್ಷ್ಮಿ ಅವರು ಮಾತನಾಡಿ ಈಗಾಗಲೇ 7 ವರ್ಷಗಳ ಕಾಲಾವಕಾಶವನ್ನು ನೀಡಿದ್ದು ಸುಮಾರು 10 ವರ್ಷಗಳೇ ಆಗಿದೆ. ಆದ್ದರಿಂದ ಹೇಗೆ ಮತ್ತೊಮ್ಮೆ ಕಾಲಾವಕಾಶವನ್ನು ನೀಡಲು ಸಾಧ್ಯವೆಂದರು.<br><br>ಮಾನ್ಯ ಕುಲಪತಿಗಳು ಮಾತನಾಡಿ ಇವರು ವಕೀಲರಾಗಿದ್ದು, ದೈಹಿಕ ಶಿಕ್ಷಣ ವಿಭಾಗದಲ್ಲಿ ಅತಿಥಿ ಉಪನ್ಯಾಸಕರಾಗಿಯೂ ಕರ್ತವ್ಯವನ್ನು ನಿರ್ವಹಿಸುತ್ತಿದ್ದಾರೆ ಎಂದು ತಿಳಿಸಿದರು.<br><br>ಡಾ. ಮುಜಿದಾ ಭಾನು ರವರು ಮಾತನಾಡಿ ಪ್ರಸ್ತುತ ಶ್ರೀ ಎಸ್.ಜೆ. ಶಿವಣ್ಣೇಗೌಡರವರಿಗೆ ಮಾರ್ಗದರ್ಶನ ನೀಡುತ್ತಿರುವ ಡಾ. ಚಂದ್ರಕುಮಾರ್ ಅವರು ಎನ್‌ಓಸಿಯನ್ನು ನೀಡಬೇಕು, ಇಲ್ಲವಾದಲ್ಲಿ ಅವರೇ ಜವಾಬ್ದಾರಿ ತೆಗೆದುಕೊಂಡು ಮಾರ್ಗದರ್ಶನವನ್ನು ಮುಗಿಸಿ ಮಹಾಪ್ರಬಂಧವನ್ನು ಮಂಡಿಸಲು ಅವಕಾಶ ಮಾಡಿಕೊಡಬೇಕೆಂದು ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ ಡಾ. ಚಂದ್ರಕುಮಾರ್ ಅವರು ನಿವೃತ್ತಿ ಹೊಂದಿ ಈಗಾಗಲೇ 10 ವರ್ಷಗಳು ಕಳೆದಿವೆ. ಅವರಿಗೆ ಹೇಗೆ ಮಾರ್ಗದರ್ಶನವನ್ನು ನೀಡಲು ಸಾಧ್ಯ. ನಿವೃತ್ತಿ ಹೊಂದಿ 10 ವರ್ಷಗಳಾಗಿರುವುದರಿಂದ ಮಾರ್ಗದರ್ಶನವನ್ನು ಮಾಡಲು ಕಾಲಾವಕಾಶವು ಮುಗಿದಿರುತ್ತದೆ. ಇದು ವಿಶ್ವವಿದ್ಯಾನಿಲಯದಿಂದಲೂ ತಪ್ಪಾಗಿದೆ ಎಂದು ತಿಳಿಸಿದರು.<br><br>ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ಹಿಂದೆ ನಡೆದ ಸಿಂಡಿಕೇಟ್ ಸಭೆಗಳಲ್ಲಿ ಇಂತಹ ಪ್ರಕರಣಗಳಲ್ಲಿ ಸಂಶೋಧನೆ ಮುಂದುವರಿಸಲು ಕಾಲಾವಕಾಶ ನೀಡಿರುವುದನ್ನು ಸಭೆಯ ಗಮನಕ್ಕೆ ತಂದರು.<br><br>ಮಾನ್ಯ ಕುಲಪತಿಗಳು ಮಾತನಾಡಿ ಪಿಎಚ್.ಡಿ. ಸಂಶೋಧನಾ ವಿದ್ಯಾರ್ಥಿಗಳು ತಡವಾಗಿ ಮಹಾಪ್ರಬಂಧವನ್ನು ಮಂಡಿಸಲು ಕೋರಿದ್ದರಿಂದ ಅವರುಗಳಿಗೆ ರೂ. 1,00,000/- ದಂಡ ಶುಲ್ಕ ವಿಧಿಸಿ 6 ತಿಂಗಳುಗಳ ಕಾಲಾವಕಾಶವನ್ನು ನೀಡಲಾಗಿದೆ ಎಂದು ತಿಳಿಸಿದರು.<br><br>ಕುಲಸಚಿವ (ಪರೀಕ್ಷಾಂಗ) ಅವರು ಮಾತನಾಡಿ ಸಂಶೋಧನಾ ಪ್ರಗತಿಗೆ ಮಾರ್ಗದರ್ಶಕರು ತೃಪ್ತಿಕರವಾಗಿದೆ ಎಂದು ಸಹಿ ಮಾಡಿರುತ್ತಾರೆ, ನಂತರ Pre-Thesis Colloquium ಮಾಡುವಲ್ಲಿ ತಡವಾಗಿದೆ ಎಂದು ತಿಳಿಸಿದ್ದಾರೆ. 5 ವರ್ಷಗಳ |

| | |
|---|---|
| | ಅವಧಿಯಲ್ಲಿ ಇವರು ಮಾಡಿದಂತಹ ಸಂಶೋಧನಾ ಕಾರ್ಯವು ತೃಪ್ತಿಕರವಾಗಿದೆ ಎಂದು ಮಾರ್ಗದರ್ಶಕರು ಈಗ ಎನ್‌ಓಸಿ ನೀಡುತ್ತಿಲ್ಲ ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ ಸಂಶೋಧನಾ ವಿದ್ಯಾರ್ಥಿಯು ನೀಡಿರುವಂತಹ ವರದಿಗೆ ತೃಪ್ತಿಕರ (Satisfied)ವಾಗಿದೆ ಎಂದು ನೀಡಿರುತ್ತಾರೆ. ಆದರೆ ಮಾರ್ಗದರ್ಶಕರು ಸಂಶೋಧನಾ ವಿದ್ಯಾರ್ಥಿಯು ಕೈಗೊಂಡಿರುವ ವಿಷಯವು ಪ್ರಕಟಣೆಗೆ ಯೋಗ್ಯವಾಗಿದೆ ಹಾಗೂ ಮಹಾಪ್ರಬಂಧವನ್ನು ಸಲ್ಲಿಸಲು ಯೋಗ್ಯವಾಗಿದೆ ಎಂದು ತಿಳಿಸಿದ್ದಾರೆಯೇ ಎಂದು ಕುಲಸಚಿವ (ಪರೀಕ್ಷಾಂಗ)ರವರನ್ನು ಕೇಳಿದರು. ಮಾರ್ಗದರ್ಶಕರಾದ ಡಾ. ಚಂದ್ರಕುಮಾರ್ ಅವರು ನಾನು ನಿವೃತ್ತಿಯನ್ನು ಹೊಂದಿರುವುದರಿಂದ ಎನ್‌ಓಸಿಯನ್ನು ನೀಡುವುದಿಲ್ಲ ಎಂದು ತಿಳಿಸಿರುತ್ತಾರೆ.<br><br>ಕುಲಸಚಿವ (ಪರೀಕ್ಷಾಂಗ) ಅವರು ಇಲ್ಲವೆಂದು ತಿಳಿಸಿದರು.<br><br>ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ ಇಂತಹ ಪ್ರಕರಣಗಳಲ್ಲಿ ಹಿಂದೆ ಸಿಂಡಿಕೇಟ್ ಸಭೆಯಲ್ಲಿ ಯಾವ ರೀತಿಯ ಕ್ರಮವನ್ನು ಅನುಸರಿಸುತ್ತಿತ್ತೋ ಅದೇ ರೀತಿ ಇವರ ಕೇಸ್‌ನಲ್ಲೂ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ ಎಂದು ತಿಳಿಸಿದರು. ಸದರಿ ವಿಷಯಕ್ಕೆ ಡಾ. ಟಿ.ಆರ್. ಚಂದ್ರಶೇಖರ್ ಅವರು ದನಿಗೂಡಿಸಿದರು.<br><br>ಡಾ. ಮುಜಿದಾ ಬಾನು ಅವರು ಮಾತನಾಡಿ ಸಂಶೋಧನಾ ವಿದ್ಯಾರ್ಥಿಯು ಮಹಾಪ್ರಬಂಧವನ್ನು ಸಲ್ಲಿಸಲು ಅರ್ಹರಾಗಿದ್ದಾರೆಯೇ ಎಂದರು. ಹಾಗೆಯೇ ಮಾರ್ಗದರ್ಶಕರು ಎನ್‌ಓಸಿ ನೀಡಲು ಸಾಧ್ಯವಾಗದಿದ್ದಲ್ಲಿ ವಿಶ್ವವಿದ್ಯಾನಿಲಯವೇ ಎನ್‌ಓಸಿಯನ್ನು ನೀಡಿ ಸಂಶೋಧನಾ ವಿದ್ಯಾರ್ಥಿಗೆ ಮಹಾಪ್ರಬಂಧವನ್ನು ಸಲ್ಲಿಸಲು ಅವಕಾಶ ಮಾಡಿಕೊಡಬಹುದಲ್ಲವೇ ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಗಳು ಈಗಾಗಲೇ 10 ವರ್ಷಗಳಾಗಿರುವುದರಿಂದ ಅರ್ಹರಾಗಿರುವುದಿಲ್ಲವೆಂದು ತಿಳಿಸಿದರು. ಈಗಾಗಲೇ ಅವರಿಗೆ 3 ವರ್ಷಗಳಿಂದ 5 ವರ್ಷ ಹಾಗೆಯೇ 5 ವರ್ಷದಿಂದ 7 ವರ್ಷಗಳವರೆಗೆ ಕಾಲಾವಕಾಶವನ್ನು ನೀಡಲಾಗಿದೆ. 7 ವರ್ಷಗಳು ಮುಗಿದು 11 ವರ್ಷಗಳಾಗುತ್ತ ಬಂದಿದೆ. ತದನಂತರ ಅವರು ಮಾರ್ಗದರ್ಶಕರಿಂದ ಎನ್‌ಓಸಿಯನ್ನು ಕೇಳಿರಲಿಲ್ಲ. ಆದರೆ ಈಗ ಅವರಿಂದ ಎನ್‌ಓಸಿಯನ್ನು ಕೇಳುತ್ತಿದ್ದಾರೆ. ಆದ್ದರಿಂದ ಮಾರ್ಗದರ್ಶಕರು ಇಷ್ಟು ವರ್ಷಗಳು ಕಳೆದಿವೆ, ಸಂಶೋಧನಾ ಕಾರ್ಯವನ್ನು ಸರಿಯಾಗಿ ನಿರ್ವಹಿಸಿರುವುದಿಲ್ಲ ಆದ್ದರಿಂದ ನಾನು ಸಹಿ ಮಾಡುವುದಿಲ್ಲ ಎಂದು ತಿಳಿಸಿರುತ್ತಾರೆ. ಆದ್ದರಿಂದ ಎನ್‌ಓಸಿ ನೀಡಲು ಮಾರ್ಗಸೂಚಿಯನ್ನು ಗಮನಿಸಬೇಕಾಗುತ್ತದೆ ಎಂದು ತಿಳಿಸಿದರು. ನಿವೃತ್ತಿಯಾದ ನಂತರ ಮಾರ್ಗದರ್ಶನವನ್ನು ನೀಡಲು 4 ವರ್ಷಗಳ ಕಾಲಾವಕಾಶವಿರುತ್ತದೆ ಜೊತೆಗೆ ಯಾವುದೇ ಆರೋಪಗಳಿದ್ದರೂ ಆ ಸಮಯದಲ್ಲೆ ಮಾಡಬೇಕಾಗುತ್ತದೆ ಎಂದು ತಿಳಿಸಿದರು. ಶ್ರೀ ಎಸ್.ಜೆ. ಶಿವಣ್ಣೇಗೌಡ, ಸಂಶೋಧನಾ ವಿದ್ಯಾರ್ಥಿಗೆ ಸಂಬಂಧಿಸಿದಂತೆ ಎರಡು ವಿಷಯಗಳಿದ್ದು, ಅದರಲ್ಲಿ ಒಂದು ಮಹಾಪ್ರಬಂಧವನ್ನು ಮಂಡಿಸಲು 11 ವರ್ಷಗಳಾಗಿರುವುದು ಮತ್ತು ಅವರಿಗೆ ಯಾರು ಮಾರ್ಗದರ್ಶಕರಾಗುತ್ತಾರೆ ಎಂಬುದು ಎಂದು ತಿಳಿಸಿದರು. ಜೊತೆಗೆ ಅಲ್ಲಿರುವಂತಹ ಪ್ರಾಧ್ಯಾಪಕರುಗಳು ನಾವು ಮಾರ್ಗದರ್ಶನ ಮಾಡುವುದಿಲ್ಲವೆಂದು ಸಮಿತಿಯಲ್ಲಿ ತಿಳಿಸಿರುತ್ತಾರೆ ಎಂಬ ವಿಷಯವನ್ನು ಸಭೆಯ ಗಮನಕ್ಕೆ ತಂದರು.<br><br>ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ ಶ್ರೀ ಎಸ್.ಜೆ. ಶಿವಣ್ಣೇಗೌಡರವರಿಗೆ ಅವರ ಮಾರ್ಗದರ್ಶಕರಿಂದ ಎನ್‌ಓಸಿ ಪಡೆಯಲು ಒಂದು ತಿಂಗಳ ಕಾಲಾವಕಾಶ ಕೊಟ್ಟು, ಅವರ ಮಾರ್ಗದರ್ಶಕರ ಮನವೊಲಿಸಿ ಎನ್‌ಓಸಿ ಪಡೆದುಕೊಂಡು ಬರಲಿ ಎಂದು ತಿಳಿಸಿದರು.<br><br>ಡಾ. ಬಸವರಾಜು ಸಿ. ಅವರು ಮಾತನಾಡಿ ಅವರಿಗೆ ಒಂದು ತಿಂಗಳ ಕಾಲಾವಕಾಶವನ್ನು ನೀಡೋಣ. ಅವರು ಹಾಗೂ ಅವರ ಮಾರ್ಗದರ್ಶಕರು ಯಾವ ರೀತಿಯ ತೀರ್ಮಾನ ತೆಗೆದುಕೊಳ್ಳುತ್ತಾರೋ ಅದರಂತೆ ಮುಂದಿನ ಕ್ರಮವಹಿಸಬಹುದು ಎಂದು ತಿಳಿಸಿದರು. |

| | |
|---|---|
| ತೀರ್ಮಾನ | **ಸುದೀರ್ಘ ಚರ್ಚೆಯ ನಂತರ ಶ್ರೀ ಎಸ್.ಜೆ. ಶಿವಣ್ಣೇಗೌಡ ಸಂಶೋಧನಾ ವಿದ್ಯಾರ್ಥಿ, ಕ್ರೀಡಾ ವಿಜ್ಞಾನ ಮತ್ತು ದೈಹಿಕ ಶಿಕ್ಷಣ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಪ್ರಸ್ತುತ ಮಾರ್ಗದರ್ಶಕರಾಗಿದ್ದ ಡಾ. ಚಂದ್ರಕುಮಾರ್ ಅವರ ಮನವೊಲಿಸಿ ಎನ್‌ಓಸಿ ಯನ್ನು ಪಡೆಯಲು ಒಂದು ತಿಂಗಳ ಕಾಲಾವಕಾಶವನ್ನು ನೀಡಲು ಹಾಗೂ ಎನ್‌ಓಸಿಯನ್ನು ಪಡೆದ ನಂತರ ದಂಡ ಶುಲ್ಕ ಹಾಗೂ ಮಾರ್ಗದರ್ಶಕರನ್ನು ಬದಲಾಯಿಸುವ ಬಗೆಗಿನ ತೀರ್ಮಾನವನ್ನು ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸುವಂತೆ ಸಿಂಡಿಕೇಟ್ ಸಭೆಯು ತೀರ್ಮಾನಿಸಿತು.** |
| ಸಾಮಾನ್ಯ ಸಭೆ 2024/1.26 | ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರುಗಳನ್ನು ಮುಂದುವರೆಸುವ ಸಂಬಂಧ, ಸಮಿತಿಯು ಸಲ್ಲಿಸಿರುವ ವರದಿಯನ್ನು ಮಂಡಿಸುವುದರ ಬಗ್ಗೆ. |
| | ಕುಲಸಚಿವರು ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರುಗಳನ್ನು ಮುಂದುವರೆಸುವ ಸಂಬಂಧ ಸಮಿತಿಯು ಸಲ್ಲಿಸಿರುವ ವರದಿ ಹಾಗೂ ಶಿಫಾರಸ್ಸುಗಳನ್ನು ಸಭೆಗೆ ಮಂಡಿಸಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರುಗಳನ್ನು ನೇಮಕಾತಿ ಮಾಡಿಕೊಂಡಿರುವ ಪ್ರಕ್ರಿಯೆಯೆ ಸರಿಯಾಗಿರುವುದಿಲ್ಲ. ಮೊದಲು 5 ವರ್ಷಗಳ ಅವಧಿಗೆ ತದನಂತರದಲ್ಲಿ ಅವರುಗಳನ್ನು 2 ವರ್ಷಗಳ ಅವಧಿಯವರೆಗೆ ತಾತ್ಕಾಲಿಕ ಪ್ರಾಧ್ಯಾಪಕರುಗಳನ್ನು ನೇಮಕಾತಿ ಮಾಡಿ, ಅವರುಗಳಿಗೆ ರೂ. 50,000/-ಗಳ ವೇತನವನ್ನು ನಿಗಧಿಪಡಿಸಿ ವೇತನವನ್ನು ನೀಡಲಾಗಿದೆ. ತದನಂತರದಲ್ಲಿ ತಾತ್ಕಾಲಿಕ ಪ್ರಾಧ್ಯಾಪಕರುಗಳು ನ್ಯಾಯಾಲಯದ ಮೊರೆ ಹೋದರು. ಅಲ್ಲಿಯೂ ಕೇಸ್ ನಡೆಯಲಿಲ್ಲ. ತದನಂತರದಲ್ಲಿ ಅವರುಗಳನ್ನು 2 ವರ್ಷಗಳ ಅವಧಿಗೆ ಮುಂದುವರಿಸುವಂತೆ ಕೋರಿದ್ದಾರೆ. ಆದರೆ ನಾನು ಕೆಲವು ವಿಭಾಗಗಳಲ್ಲಿ ವಿಚಾರಣೆ ನಡೆಸಿದಾಗ ಕೆಲವು ತಾತ್ಕಾಲಿಕ ಪ್ರಾಧ್ಯಾಪಕರುಗಳು ತರಗತಿಯನ್ನೇ ತೆಗೆದುಕೊಳ್ಳುತ್ತಿಲ್ಲ. ಆದರೆ ವಿಶ್ವವಿದ್ಯಾನಿಲಯದಿಂದ ಅವರಿಗೆ ರೂ. 50,000/-ಗಳ ವೇತನವನ್ನು ನೀಡಲಾಗುತ್ತಿದೆ. ವೆಕೆಷನಲ್ ಕೆಲಸ ಮಾಡುತ್ತಿಲ್ಲ. ವಿಶ್ವವಿದ್ಯಾನಿಲಯದಲ್ಲಿ ಅತಿಥಿ ಉಪನ್ಯಾಸಕರುಗಳಾಗಿ ಕರ್ತವ್ಯ ನಿರ್ವಹಿಸುತ್ತಿರುವಂತವರು ವೇತನದ ತಾರತಮ್ಯವೇಕೆ ಎಂದು ಪ್ರಶ್ನಿಸುತ್ತಿದ್ದು, ನಮಗೂ ಸಹ ರೂ. 50,000/-ಗಳ ವೇತನವನ್ನು ನೀಡಬೇಕೆಂದು ಕೇಳುತ್ತಿದ್ದಾರೆ ಎಂದು ತಿಳಿಸಿದರು.<br><br>ಮುಂದುವರೆದು, ತಾತ್ಕಾಲಿಕ ಪ್ರಾಧ್ಯಾಪಕರುಗಳನ್ನು ಮುಂದುವರೆಸುವ ಬಗೆಗಿನ ನನ್ನ ಅಭಿಪ್ರಾಯವೆಂದರೆ, ಇವರನ್ನು ಈ ವರ್ಷದ ಶೈಕ್ಷಣಿಕ ಸಾಲಿನವರೆಗೂ ಇವರುಗಳನ್ನು ಮುಂದುವರೆಸಿ, ವೆಕೆಷನಲ್ ಪಿರಿಯಡ್‌ನ ವೇತನವನ್ನು ಕಟಾವು ಮಾಡಿ ಉಳಿಕೆ ಸಂಬಳವನ್ನು ನೀಡಲು ಕ್ರಮವಹಿಸಬಹುದೆಂದು ತಿಳಿಸಿದರು.<br><br>ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ನ್ಯಾಯಾಲಯದ ಆದೇಶದಲ್ಲೇನಿದೆ ಎಂದು ಕೇಳಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ ತಾತ್ಕಾಲಿಕ ಪ್ರಾಧ್ಯಾಪಕರುಗಳು ನ್ಯಾಯಾಲಯದಲ್ಲಿ ಒಂದು ಬಾರಿ ದಾವೆಯನ್ನು ಹೂಡಿದಾಗ ನ್ಯಾಯಾಲಯವು ದಾವೆಯನ್ನು ವಜಾಗೊಳಿಸಿದೆ. ನಂತರ ವಿಶ್ವವಿದ್ಯಾನಿಲಯವು ಅವರುಗಳನ್ನು 2 ವರ್ಷಗಳ ಅವಧಿಗೆ ಮುಂದುವರಿಸಲಾಗಿದೆ. ಮತ್ತು ಮರು ದಾವೆಯನ್ನು ಹೂಡಿದಾಗ ನ್ಯಾಯಾಲಯವು 'Consider' ಎಂದು ಹೇಳಿದೆ ಎಂದು ತಿಳಿಸಿದರು.<br><br>ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ಈ ವಿಷಯವು ನ್ಯಾಯಾಲಯದ ವ್ಯಾಪ್ತಿಗೆ ಬರುವುದರಿಂದ ಅದನ್ನು ನಾವು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ ಎಂದು ತಿಳಿಸಿದರು.<br><br>ಕುಲಸಚಿವರು ಮಾತನಾಡಿ ನ್ಯಾಯಾಲಯದಿಂದ ಬಂದಿರುವ ತೀರ್ಪು 'the representations, it would also be appropriate for respondent |

| | |
|---|---|
| | No.3 to consider the recommendations made for extending the services of the petitioners as indicated in Annexures 'G', 'G1' and 'G2'' ಅನ್ನು ಸಭೆಯ ಗಮನಕ್ಕೆ ತಂದರು. ಜೊತೆಗೆ ಯಾರು ಯಾರು ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರುಗಳಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೋ ಅವರಿಗೆ ವೇತನವನ್ನು ನೀಡಬೇಕು ಎಂದು ಹೇಳದೆ ಎಂದು ತಿಳಿಸಿದರು.<br><br>ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ನ್ಯಾಯಾಲಯದ ತೀರ್ಪಿನಲ್ಲಿ 'G', 'G1' and 'G2'' ಅನ್ನು consider ಮಾಡಿ ಅಂತ ಹೇಳಿದ್ದರೆ ಅದನ್ನು ನಾವು consider ಮಾಡಬೇಕಾಗುತ್ತದೆ. ಹಾಗೂ 'G', 'G1' and 'G2'' ಏನು ಹೇಳುತ್ತದೆ ಎಂದು ಕೇಳಿದರು.<br><br>ಕುಲಸಚಿವರು ಮಾತನಾಡಿ consider ಅಂದರೆ ವಿಶ್ವವಿದ್ಯಾನಿಲಯವು ನಿಯಮಾನುಸಾರ ಕ್ರಮಕೈಗೊಳ್ಳಬೇಕಾಗುವುದೆಂದು ತಿಳಿಸಿದರು.<br><br>ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ಒಟ್ಟು ಎಷ್ಟು ಮಂದಿ ತಾತ್ಕಾಲಿಕ ಪ್ರಾಧ್ಯಾಪಕರುಗಳಿದ್ದಾರೆಂದು, ಅದರಲ್ಲಿ ಎಷ್ಟು ಮಂದಿ ನ್ಯಾಯಾಲಯದ ಮೊರೆ ಹೋಗಿದ್ದಾರೆಂದು ಕೇಳಲಾಗಿ ಒಟ್ಟು 7 ಮಂದಿ ನ್ಯಾಯಾಲಯದ ಮೊರೆ ಹೋಗಿದ್ದಾರೆಂದು ತಿಳಿಸಿದರು. ಒಟ್ಟು 15 ಮಂದಿ ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರುಗಳಿದ್ದಾರೆಂದು ತಿಳಿಸಿದ್ದರಿಂದ ಅವರೆಲ್ಲರಿಗೂ ಒಂದೇ ತೆರನಾದ ಕ್ರಮವನ್ನು ಜರುಗಿಸಬೇಕಾಗುತ್ತದೆ ಎಂದು ತಿಳಿಸಿದರು. ಹಾಗೆಯೇ ಹಿಂದೆ ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರುಗಳನ್ನು ನೇಮಕ ಮಾಡುವಾಗ ಸರ್ಕಾರದ ಅನುಮೋದನೆಯನ್ನು ಪಡೆಯಲಾಗಿದೆಯೇ ಎಂದು ಕೇಳಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ ವಿಶ್ವವಿದ್ಯಾನಿಲಯದಲ್ಲಿ 5 ಹೊಸ ಅಧ್ಯಯನ ವಿಭಾಗಗಳನ್ನು ಪ್ರಾರಂಭಿಸಿದ ಸಂದರ್ಭದಲ್ಲಿ ಸ್ವಹಣಕಾಸಿನಿಂದ ಅಧ್ಯಯನ ವಿಭಾಗಗಳಿಗೆ ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರುಗಳಿಗೆ ವೇತನವನ್ನು ನೀಡುವಂತೆ ನೇಮಕ ಮಾಡಲಾಯಿತು. ಅದರ ಜೊತೆಗೆ ರಸಾಯನಶಾಸ್ತ್ರ ಅಧ್ಯಯನ ವಿಭಾಗ ಹಾಗೂ ಇತರೆ ಅಧ್ಯಯನ ವಿಭಾಗಗಳನ್ನು ಸೇರಿಸಿಕೊಂಡು ಶತಮಾನೋತ್ಸವವನ್ನು ವಿಶ್ವವಿದ್ಯಾನಿಲಯವು ಆಚರಿಸಿಕೊಳ್ಳುತ್ತಿರುವ ಸಂದರ್ಭದಲ್ಲಿ ಆಗಿದ್ದಂತಹ ಕುಲಪತಿಗಳು 5 ವರ್ಷಗಳ ಅವಧಿಗೆ ನೇಮಕಾತಿ ಜೊತೆಗೆ ರೂ. 50,000/-ಗಳ ವೇತನವನ್ನು ನಿಗದಿಪಡಿಸಿ ಆದೇಶವನ್ನು ನೀಡಿದ್ದಾರೆ ಎಂದು ತಿಳಿಸಿದರು.<br><br>ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ನ್ಯಾಯಾಲಯದ ತೀರ್ಪಿಗೆ ಕಾನೂನು ತಜ್ಞರ ಅಭಿಪ್ರಾಯವನ್ನು ಪಡೆಯಲಾಗಿದೆಯೇ ಎಂದು ಕೇಳಿದರು.<br><br>ಪ್ರೊ. ಟಿ.ಆರ್. ಮಾರುತಿಯವರು ಮಾತನಾಡಿ ಕಾನೂನು ತಜ್ಞರ ಅಭಿಪ್ರಾಯವನ್ನು ಪಡೆಯಲಾಗಿದೆ. ಅದರಲ್ಲಿ ನ್ಯಾಯಾಲಯದ ಆದೇಶವನ್ನು ಪಾಲಿಸದಿದ್ದಲ್ಲಿ Contempt of Court ಆಗುತ್ತದೆ ಎಂದು ತಿಳಿಸಿದ್ದಾರೆ ಎಂದು ತಿಳಿಸಿದರು.<br><br>ಕುಲಸಚಿವರು ಮಾತನಾಡಿ ಬೋಧನಾ ಕಾರ್ಯ ನಿರ್ವಹಿಸಿದ ಅವರಿಗೆ ವೇತನವನ್ನು ಕಡ್ಡಾಯವಾಗಿ ನೀಡಬೇಕೆಂದು ತಿಳಿಸಲಾಗಿದೆ ಎಂದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ನ್ಯಾಯಾಲಯದ ತೀರ್ಪಿನಲ್ಲಿ ತಾತ್ಕಾಲಿಕ ಉಪನ್ಯಾಸಕರುಗಳಿಗೆ ಇಲ್ಲಿಯವರೆಗೂ ಕರ್ತವ್ಯ ನಿರ್ವಹಿಸಿರುವುದಕ್ಕೆ ವೇತನವನ್ನು ನೀಡುವಂತೆ ಸೂಚಿಸಿದೆ. ಆದ್ದರಿಂದ ಪ್ರಸ್ತುತ ವರ್ಷದ ಶೈಕ್ಷಣಿಕ ಸಾಲಿನವರೆಗೆ ಅವರನ್ನು ಮುಂದುವರೆಸಿ ವೇತನವನ್ನು ನೀಡಲಾಗುವುದು. ಅದಕ್ಕೆ ನಮ್ಮ ಅಭ್ಯಂತರವೇನು ಇಲ್ಲವೆಂದು ತಿಳಿಸಿದರು. ಅವರ ಬೇಡಿಕೆ ಇರುವುದು ಮುಂದುವರೆಸುವಂತೆ. ಆದ್ದರಿಂದ ಮುಂದಿನ ವರ್ಷದಿಂದ ಎಲ್ಲರಿಗೂ ಸಂದರ್ಶನದ ಮುಖಾಂತರ ನೇಮಕಾತಿಯನ್ನು ಮಾಡಬೇಕಾಗುತ್ತದೆ, ಇಲ್ಲವಾದಲ್ಲಿ ಇಂತಹ ಪ್ರಸಂಗಗಳು ಮರುಕಳಿಸುವ ಸಂಭವವಿರುತ್ತದೆ ಎಂದು ತಿಳಿಸಿದರು. ಹಾಗೆಯೇ ತಾತ್ಕಾಲಿಕವಾಗಿ ಯಾವುದೇ |

| | |
|---|---|
| | ಹುದ್ದೆಯವರನ್ನು ನೇಮಕಾತಿ ಮಾಡುವ ಸಂದರ್ಭದಲ್ಲಿ ಒಂದು ವರ್ಷದ ಅವಧಿಗೆ ಮಾತ್ರ ನೇಮಕಾತಿ ಮಾಡಿಕೊಳ್ಳುವ ಕ್ರಮವಿದೆ. 2-5-10 ವರ್ಷಗಳವರೆಗೆ ನೇಮಕಾತಿ ಆದೇಶವನ್ನು ನೀಡಲಾಗುವುದಿಲ್ಲವೆಂದು ತಿಳಿಸಿದರು.<br><br>ಪ್ರೊ. ಟಿ.ಆರ್. ಮಾರುತಿಯವರು ಮಾತನಾಡಿ Pay Scale ಬಗ್ಗೆ ನ್ಯಾಯಾಲಯದಲ್ಲಿ ಕೇಳಿದ್ದಾರೆ. ಆದರೆ ನ್ಯಾಯಾಲಯವು ಒಪ್ಪಿರುವುದಿಲ್ಲ ಎಂದು ತಿಳಿಸಿದರು.<br><br>ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ನ್ಯಾಯಾಲಯದ ಆದೇಶವೇನಿದೆಯೋ ಅದನ್ನು ಪಾಲಿಸಬೇಕೆಂಬುದೇ ನನ್ನ ಅಭಿಮತ ಎಂದು ತಿಳಿಸಿದರು. |
| ತೀರ್ಮಾನ | **ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರುಗಳನ್ನು ಪ್ರಸಕ್ತ ವರ್ಷದ ಶೈಕ್ಷಣಿಕ ಸಾಲಿನವರೆಗೆ ಮುಂದುವರೆಸುವಂತೆ ಸಿಂಡಿಕೇಟ್ ಸಭೆಯು ತೀರ್ಮಾನಿಸಿತು.** |
| ಸಾಮಾನ್ಯ ಸಭೆ 2024/1.27 | ರೇಡಿಯೋ ಮಾನಸ ಸಮುದಾಯ ಬಾನುಲಿ ಕೇಂದ್ರ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು Mangalore Chemicals & Fertilizers Limited, Bengaluru ಮತ್ತು ಇವರುಗಳ ನಡುವೆ ಪರಸ್ಪರ ಒಡಂಬಡಿಕೆಯನ್ನು ಮಾಡಿಕೊಳ್ಳಲು ಕೋರಿರುವ ಬಗ್ಗೆ. |
| ತೀರ್ಮಾನ | **ರೇಡಿಯೋ ಮಾನಸ ಸಮುದಾಯ ಬಾನುಲಿ ಕೇಂದ್ರ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು Mangalore Chemicals & Fertilizers Limited, Bengaluru ಮತ್ತು ಇವರುಗಳ ನಡುವೆ ಪರಸ್ಪರ ಒಡಂಬಡಿಕೆಯನ್ನು ಮಾಡಿಕೊಳ್ಳಲು ಸಿಂಡಿಕೇಟ್ ಸಭೆಯು ಅನುಮತಿಸಿತು.** |
| ಸಾಮಾನ್ಯ ಸಭೆ 2024/1.28 | ಡಾ. ಹೆಚ್.ನಾಗರಾಜ್, ಪ್ರಾಧ್ಯಾಪಕರು, ಭೂಗೋಳಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರಿಗೆ ದೋಷಾರೋಪಣ ಪಟ್ಟಿ ನೀಡುವ ಬಗ್ಗೆ. |
| | ಕುಲಸಚಿವರು ಡಾ. ಹೆಚ್. ನಾಗರಾಜ್, ಪ್ರಾಧ್ಯಾಪಕರು, ಭೂಗೋಳಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು, ಇವರ ದೋಷಾರೋಪಣ ಪಟ್ಟಿಯ ಬಗ್ಗೆ ವಿವರಿಸುತ್ತಾ, ಡಾ. ಹೆಚ್. ನಾಗರಾಜ್ ರವರು ಧಾರವಾಡದ ಕರ್ನಾಟಕ ವಿಶ್ವವಿದ್ಯಾನಿಲಯದ ಕುಲಸಚಿವ (ಪರೀಕ್ಷಾಂಗ)ರಾಗಿದ್ದಾಗ ಕೆ.ಇ.ಎ. ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಪ್ರಶ್ನೆಪತ್ರಿಕೆ ಸೋರಿಕೆಯ ಸಂಬಂಧ ಪ್ರೊ. ಹೆಚ್. ನಾಗರಾಜರವರ ವಿರುದ್ಧ ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರಿ, ಬೆಂಗಳೂರು ಇವರು ದಾಖಲಿಸಿದ್ದ ದೂರಿನ ಸಂಬಂಧ ಪೋಲೀಸರು ದಸ್ತಗಿರಿ ಮಾಡಿದ್ದರಿಂದ ಕರ್ನಾಟಕ ಸರ್ಕಾರವು ಸದರಿಯವರ ಕುಲಸಚಿವ (ಪರೀಕ್ಷಾಂಗ) ಹುದ್ದೆಗೆ ಮಾಡಲಾಗಿದ್ದ ನೇಮಕಾತಿಯನ್ನು ಹಿಂಪಡೆದು ಮಾತೃ ಸಂಸ್ಥೆಯಾದ ಮೈಸೂರು ವಿಶ್ವವಿದ್ಯಾನಿಲಯದ ಪ್ರಾದ್ಯಾಪಕರ ಹುದ್ದೆಗೆ ಹಿಂದಿರುಗಿಸಿರುತ್ತಾರೆ. ನಂತರ ಸರ್ಕಾರದ ನಿರ್ದೇಶನದಂತೆ ಸಿಂಡಿಕೇಟ್ ಸಭೆಯ ತೀರ್ಮಾನವನ್ನು ಕಾಯ್ದಿರಿಸಿ ಸದರಿಯವರನ್ನು ವಿಶ್ವವಿದ್ಯಾನಿಲಯದ ಸೇವೆಯಿಂದ ಅಮಾನತ್ತುಗೊಳಿಸಿ ಆದೇಶ ಹೊರಡಿಸಲಾಗಿತ್ತು. ಸಿಂಡಿಕೇಟ್ ಸಭೆಯ ತೀರ್ಮಾನದನ್ವಯ ಶ್ರೀ ರಾಮಣ್ಣ, ನಿವೃತ್ತ ನ್ಯಾಯಾಧೀಶರು, ಮೈಸೂರು ಇವರನ್ನು ವಿಚಾರಣಾದಿಕಾರಿಯಾಗಿ ನೇಮಿಸಲಾಗಿತ್ತು.<br><br>ಮುಂದುವರೆದು, ಪ್ರೊ. ನಾಗರಾಜ್ ಹೆಚ್. ಇವರ ಬಗೆಗಿನ ಮತ್ತು ಸದರಿ ಪ್ರಕರಣಕ್ಕೆ ಸಂಬಂಧಿಸಿದ ಇತರೆ ಒಟ್ಟು 839 ಪುಟಗಳ ದಾಖಲಾತಿಗಳನ್ನು ದಿನಾಂಕ : 27.09.2023ರಂದು ಪತ್ರದ ಮುಖಾಂತರ ಲಗತ್ತಿಸಿ ನೀಡಿರುತ್ತಾರೆ. ಸದರಿ ವಿಷಯದ ದಾಖಲೆಗಳನ್ನು ಪರಿಶೀಲಿಸಿ ಸಿದ್ಧಪಡಿಸಿರುವಂತಹ ದೋಷಾರೋಪಣ ಪಟ್ಟಿಯನ್ನು ಸಿಂಡಿಕೇಟ್ ಸಭೆಯ ಗಮನಕ್ಕೆ ತಂದರು. ದೋಷಾರೋಪಣ ಪಟ್ಟಿಯು ದೀರ್ಘವಾಗಿರುವುದರಿಂದ ತಮಗೆ ಕಾಲಾವಕಾಶಬೇಕಾದಲ್ಲಿ ಸಮಯವನ್ನು ನೀಡಲಾಗುವುದು. ಸಮಯವು ಬೇಕಾದಲ್ಲಿ ಸದರಿ ವಿಷಯವನ್ನು ಮುಂದೂಡಬಹುದು ಎಂದು ತಿಳಿಸಿದರು.<br><br>ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ಈ ವಿಷಯದ ಬಗ್ಗೆ ಈಗಾಗಲೇ ವಿಚಾರಣೆಯನ್ನು ನಡೆಸಿರುವುದರಿಂದ ದೋಷಾರೋಪಣ ಪಟ್ಟಿಯನ್ನು |

| | |
|---|---|
| | ಅನುಮೋದಿಸಬಹುದೆಂದು ತಿಳಿಸಿದರು. |
| ತೀರ್ಮಾನ | **ಡಾ. ಹೆಚ್. ನಾಗರಾಜ್, ಪ್ರಾಧ್ಯಾಪಕರು, ಭೂಗೋಳಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು, ಇವರ ದೋಷಾರೋಪಣಾ ಪಟ್ಟಿಯನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| ಸಾಮಾನ್ಯ ಸಭೆ 2024/1.29 | PROMOTION BY SELECTION TO THE POSTS OF THE DEPUTY REGISTRARS |
| ತೀರ್ಮಾನ | **The Syndicate has approved the recommendations of the Board of Appointment, the meeting which was held on 11.01.2024, for promotion of Assistant Registrar to the post of Deputy Registrar from the date of the approval of the Syndicate.** |
| 1 | **ಇತರೆ ವಿಷಯ** |
| | |

ಮಾನ್ಯ ಕುಲಪತಿಗಳು ಮಾತನಾಡಿ ಕಳೆದ ವಿಶೇಷ ಸಿಂಡಿಕೇಟ್ ಸಭೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ತಾತ್ಕಾಲಿಕ ಅಧ್ಯಾಪಕೇತರ/ತಾಂತ್ರಿಕ/ವಿದ್ಯಾರ್ಥಿನಿಲಯದ ಉದ್ಯೋಗಿಗಳನ್ನು ಸೇವೆಯಿಂದ ದಿನಾಂಕ : 6.12.2023 ರಂದು ಬಿಡುಗಡೆಗೊಳಿಸಲಾಗಿದೆ. ಈಗಾಗಲೇ ಒಂದೂವರೆ ತಿಂಗಳಿಂದ ಸೇವೆಯನ್ನು ಎಲ್ಲಾ ಉದ್ಯೋಗಿಗಳು ಸಲ್ಲಿಸುತ್ತಿದ್ದಾರೆ. ಆದರೆ ಅವರುಗಳಿಗೆ ವೇತನವನ್ನು ನೀಡಲಾಗಿಲ್ಲ. ಈ ಸಂಬಂಧ ಒಂದು ಸಮಿತಿಯನ್ನು ಸಹ ರಚಿಸಲಾಗಿದೆ. ಈ ಸಮಿತಿಯ ವರದಿಯು ನೀಡುವಷ್ಟರಲ್ಲಿ ಚುನಾವಣೆ ಬರುವುದರಿಂದ ಅವರುಗಳಿಗೆ ವೇತನ ನೀಡಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಜೀವನ ನಡೆಸುವುದು ಕಷ್ಟಸಾಧ್ಯವಾಗುವುದರಿಂದ ಈ ಸಂದರ್ಭದಲ್ಲಿ ಅವರುಗಳ ಒಳಿತಿಗಾಗಿ ಏನಾದರೂ ಒಂದು ತೀರ್ಮಾನವನ್ನು ಕೈಗೊಳ್ಳಬೇಕಾಗಿದೆ ಎಂದು ಸಭೆಯ ಗಮನಕ್ಕೆ ತಂದರು.

ಡಾ. ಬಸವರಾಜು ಸಿ. ಅವರು ಮಾತನಾಡಿ ಹಿಂದಿನ ಸಭೆಯಲ್ಲಿ ತಾತ್ಕಾಲಿಕ ಉದ್ಯೋಗಿಗಳ ಬಗ್ಗೆ ಏನೇನು ಚರ್ಚಿಸಲಾಗಿದೆ ಎಂದು ಮಾನ್ಯ ಕುಲಪತಿಯವರನ್ನು ಕೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ ಉದ್ಯೋಗಿಗಳನ್ನು ತರ್ಕಬದ್ಧಗೊಳಿಸು(rationalize)ವುದರ ಬಗ್ಗೆ ಸರ್ಕಾರದಿಂದ ಪತ್ರ ಬಂದಿದ್ದು, ಉದ್ಯೋಗಿಗಳನ್ನು ತರ್ಕಬದ್ಧಗೊಳಿಸುವ ಬಗ್ಗೆ ತಿಳಿಸಿರುವುದರಿಂದ ಮೊದಲಬಾರಿಗೆ ಈ ವಿಷಯವನ್ನು ಸಿಂಡಿಕೇಟ್ ಸಭೆಗೆ ಮಂಡಿಸಲಾಗಿತ್ತು. ಸಿಂಡಿಕೇಟ್ ಸಭೆಯಲ್ಲಿ ಒಂದು ಸಮಿತಿಯನ್ನು ರಚಿಸುವಂತೆ ಹಾಗೂ ಆ ಸಮಿತಿಯಲ್ಲಿ ತಜ್ಞರನ್ನೊಳಗೊಂಡ ಸಮಿತಿಯನ್ನು ರಚಿಸುವಂತೆ ಸೂಚಿಸಿದ್ದರಿಂದ ಈ ನಿಟ್ಟಿನಲ್ಲಿ ಕ್ರಮಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಡಾ. ಬಸವರಾಜು ಸಿ. ಅವರು ಮಾತನಾಡಿ ಈ ಸಮಿತಿಯಲ್ಲಿ ಯಾವ ಯಾವ ಸದಸ್ಯರುಗಳಿದ್ದಾರೆಂಬ ಮಾಹಿತಿಯನ್ನು ಕೋರಿದರು.

ಮಾನ್ಯ ಕುಲಪತಿಯವರು ಮಾತನಾಡಿ ಸಮಿತಿಯಲ್ಲಿ ಪ್ರೊ. ಅಂಬಳಿಕೆ ಹಿರಿಯಣ್ಣ, ವಿಶ್ರಾಂತ ಕುಲಪತಿಗಳು ಇವರು ಇದ್ದು, ಇವರನ್ನು ಸಮಿತಿಯ ಅಧ್ಯಕ್ಷರನ್ನಾಗಿ ಮಾಡಲಾಗಿದೆ ಎಂದು ತಿಳಿಸಿದರು.

ಕುಲಸಚಿವರು ಮಾತನಾಡಿ ಶ್ರೀ ರಾಮು, ನಿವೃತ್ತ ಐಎಎಸ್ ಅಧಿಕಾರಿ, ಇವರು ನಮ್ಮ ವಿಶ್ವವಿದ್ಯಾನಿಲಯದಲ್ಲಿ ಹಿಂದೆ ಕುಲಸಚಿವ (ಪರೀಕ್ಷಾಂಗ)ರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ. ಹಾಗೂ ನಿವೃತ್ತ ರಾಜ್ಯ ಲೆಕ್ಕಪತ್ರ ಇಲಾಖಾ ಅಧಿಕಾರಿ, ಈ ಮೂವರುಗಳಿಗೂ ತಾತ್ಕಾಲಿಕ ಉದ್ಯೋಗಿಗಳನ್ನು ತರ್ಕಬದ್ಧಗೊಳಿಸುವ ನಿಟ್ಟಿನಲ್ಲಿ ವರದಿಯು ತುರ್ತಾಗಿ ಬೇಕಾಗಿರುವುದರಿಂದ, ಅವರನ್ನು ಕೋರಿದಾಗ ಅವರುಗಳು ಸಹ ಒಪ್ಪಿಕೊಂಡಿರುತ್ತಾರೆ. ಹಾಗೂ ಸಮಿತಿಯನ್ನು ನಡೆಸಲು ಸಹ ದಿನಾಂಕವನ್ನು ನಿಗದಿಪಡಿಸಲಾಗಿದೆ ಎಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ಕುಲಸಚಿವರಿಗೆ ತಾವು ಹೇಳಿದ್ದೀರಿ, ಸಿಂಡಿಕೇಟ್

ಸದಸ್ಯರುಗಳನ್ನು ಸಮಿತಿಗಳಿಗೆ ನೇಮಕ ಮಾಡುವ ನಿಯಮವಿಲ್ಲವೆಂದು. ಸದರಿ ವಿಷಯಕ್ಕೆ ಸಂಬಂಧಿಸಿದಂತಹ ಸರ್ಕಾರವು ಹೊರಡಿಸಿದ ಸುತ್ತೋಲೆಯು ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಿಗೂ ತಲುಪಿರುತ್ತದೆ. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸಿಂಡಿಕೇಟ್ ಸದಸ್ಯರುಗಳನ್ನು ಸಮಿತಿಗಳಿಗೆ ನೇಮಕ ಮಾಡಿರುತ್ತಾರೆ. ಆದ್ದರಿಂದ ಈ ವಿಷಯವನ್ನು ಪರಿಶೀಲಿಸಿ ನಮ್ಮಲ್ಲಿ ಯಾರನ್ನಾದರೂ ಒಬ್ಬರನ್ನು ಸಮಿತಿಗೆ ನೇಮಕ ಮಾಡಬೇಕೆಂದು ತಿಳಿಸಿದರು.

ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ ತಾವು ತನಿಖಾ ಸಮಿತಿ ವರದಿಗೆ Short time ನೀಡಿರುವುದು ಸರಿ. ಡಾ. ಬಸವರಾಜು ಅವರು ಹೇಳದಂತೆ ಈಗಾಗಲೇ ಸಾಕಷ್ಟು ಸಿಬ್ಬಂದಿಗಳು ವಯೋನಿವೃತ್ತಿಯ ಅಂಚಿನಲ್ಲಿದ್ದು, ಅವರ ಜೀವನ ಪ್ರತಿ ತಿಂಗಳ ವೇತನದ ಆಧಾರದ ಮೇಲೆ commitment list ಹಾಕಿಕೊಂಡಿರುತ್ತಾರೆ. ಹೆಚ್ಚುವರಿಯಾಗಿರುವಂತಹ ಸಿಬ್ಬಂದಿಗಳು ಅಂದರೆ ಕೊನೆಯಲ್ಲಿ ನೇಮಕವಾಗಿರುವವರು. ಆದ್ದರಿಂದ ಮೊದಲಿನಿಂದ ಇರುವಂತಹ ಸಿಬ್ಬಂದಿಗಳು ಹಾಗೂ ನಿವೃತ್ತಿಯ ಅಂಚಿನಲ್ಲಿರುವವರು ಇಲ್ಲೇ ಇರುತ್ತಾರೆ. ಅವರನ್ನು ಯಾವುದೇ ಸಮಿತಿಯ ವರದಿ ಬಂದರು ಅವರು 'ಅಭಾದಿತವಾದಂತಹ' ಜಾಗದಲ್ಲಿರುತ್ತಾರೆ. ಆದ್ದರಿಂದ ಸಿಬ್ಬಂದಿಗಳಿಗೆ ಒಂದು ಷರತ್ತನ್ನು ವಿಧಿಸಿ ಸಮಿತಿಯ ವರದಿ ಹಾಗೂ ಸಿಂಡಿಕೇಟ್‌ನ ತೀರ್ಮಾನಕ್ಕೆ ಬದ್ಧರಾಗಿರುವಂತೆ ಎಲ್ಲಾ ಸಿಬ್ಬಂದಿಗಳಿಗೂ ಆದೇಶವನ್ನು ನೀಡುವುದು ಸೂಕ್ತವೆಂದು ತಿಳಿಸಿದರು. ಹಾಗೂ ಸಿಬ್ಬಂದಿಗಳ ಜೀವನ ನಿರ್ವಹಣೆಗಾಗಿ ಸಮಿತಿಯ ವರದಿ ಬರುವವರೆಗೂ ಆದೇಶ ನೀಡುವುದು ಸೂಕ್ತ ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಡಾ. ಬಸವರಾಜು ಸಿ. ಅವರು ಮಾತನಾಡಿ ಸಮಿತಿಯ ವರದಿ ಹಾಗೂ ಸಿಂಡಿಕೇಟ್‌ನ ತೀರ್ಮಾನದಂತೆ ಬದ್ಧರಾಗಿರಬೇಕೆಂಬ ಷರತ್ತಿನೊಂದಿಗೆ ಆದೇಶವನ್ನು ಹೊರಡಿಸುವಂತೆ ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ಸಮಿತಿಗೆ ಸಿಂಡಿಕೇಟ್‌ನ ಒಬ್ಬ ಸದಸ್ಯರನ್ನು ಸಹ ನೇಮಕ ಮಾಡಬೇಕೆಂದು ತಿಳಿಸಿದರು.

| | |
|---|---|
| ತೀರ್ಮಾನ | **ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸೇವೆಯನ್ನು ಸಲ್ಲಿಸುತ್ತಿರುವ ಎಲ್ಲಾ ತಾತ್ಕಾಲಿಕ ಸಿಂಬ್ಬಂದಿಗಳಿಗೆ ಸಮಿತಿಯ ವರದಿ ಹಾಗೂ ಸಿಂಡಿಕೇಟ್‌ನ ತೀರ್ಮಾನಕ್ಕೆ ಬದ್ಧರಾಗಿರಬೇಕೆಂಬ ಷರತ್ತುಬದ್ಧ ಆದೇಶವನ್ನು ನೀಡುವಂತೆ ಸಿಂಡಿಕೇಟ್ ಸಭೆಯು ತೀರ್ಮಾನಿಸಿತು.** |
| 2 | **ಇತರೆ ವಿಷಯಗಳು** |
| | ಶ್ರೀ ಮಹಾದೇಶು ಅವರು ಮಾತನಾಡಿ ಇಎಂಆರ್‌ಸಿ, ಸಿಡಿಸಿ ಹಾಗೂ ಅಕಾಡೆಮಿಕ್ ಸ್ಟಾಫ್ (ಹೆಚ್‌ಆರ್‌ಡಿಸಿ) ಕಾಲೇಜಿನಲ್ಲಿ ಸುಮಾರು 7-8 ವರ್ಷಗಳಿಂದ ಪ್ರಭಾರ ನಿರ್ದೇಶಕರುಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಆದ್ದರಿಂದ ತಾವು ಈ ವಿಭಾಗಗಳಿಗೆ ಖಾಯಂ ನಿರ್ದೇಶಕರನ್ನು ನೇಮಕ ಮಾಡಬೇಕೆಂದು ವಿಷಯವನ್ನು ಪ್ರಸ್ತಾಪಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ ಹೆಚ್‌ಆರ್‌ಡಿಸಿಗೆ 5 ವರ್ಷಗಳ ವರೆಗೂ ಹೊಸ ನಿರ್ದೇಶಕರನ್ನು ನೇಮಕ ಮಾಡಬಾರದು ಎಂಬ ಹೊಸ ನಿಯಮಾವಳಿ ಬಂದಿದೆ. ಹಾಗೂ ಇಎಂಆರ್‌ಸಿ ಯ ನಿರ್ದೇಶಕರನ್ನು ಬದಲಾವಣೆ ಮಾಡಬೇಕೆಂದು ಸುಮಾರು ವರ್ಷಗಳಿಂದ ಪ್ರಕ್ರಿಯೆ ನಡೆಯುತ್ತಿದೆ ಆದರೂ ಅದು ನಡೆದಿರುವುದಿಲ್ಲ. ಆದ್ದರಿಂದ ಜಾಹಿರಾತು ನೀಡಿ ಖಾಯಂ ನಿರ್ದೇಶಕರನ್ನು ನೇಮಕ ಮಾಡುವ ನಿಟ್ಟಿನಲ್ಲಿ ಕ್ರಮಕೈಗೊಳ್ಳಬೇಕಾಗಿದೆ ಎಂದು ತಿಳಿಸಿದರು.<br><br>ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ಹಿಂದೆ ನಾವು ಎರಡೆರಡು ಕಡೆ ಅತಿಥಿ ಉಪನ್ಯಾಸಕರುಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ ಎಂಬ ವಿಷಯದ ಬಗ್ಗೆ ಪ್ರಸ್ತಾಪ ಮಾಡಲಾಗಿತ್ತು. ಅದರ ಬಗ್ಗೆ ಯಾವ ರೀತಿಯ ಕ್ರಮವನ್ನು ಕೈಗೊಂಡಿದ್ದೀರ ಎಂದು ಸಭೆಯಲ್ಲಿ ಕೇಳಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ ಸಮಿತಿ ವರದಿಯನ್ವಯ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.<br><br>ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ಮಹಾರಾಜ ಕಾಲೇಜಿನ ಅರ್ಥಶಾಸ್ತ್ರ ವಿಭಾಗದಲ್ಲಿ ಮೂರು ಅತಿಥಿ ಉಪನ್ಯಾಸಕರುಗಳು ಕೆಲಸಕ್ಕೆ ಬರುತ್ತಿಲ್ಲ ಎಂಬ ಮಾಹಿತಿ |

| | |
|---|---|
| | ಇದ್ದು, ಪ್ರಾಂಶುಪಾಲರು ಅವರುಗಳ ವೇತನವನ್ನು ಕಟಾವುಗೊಳಿಸಲು ಪತ್ರವನ್ನು ಬರೆದಿದ್ದಾರೆ ಎಂದು ತಿಳಿಸಿದ್ದಾರೆ. ಅಂತಹ ಅಧ್ಯಾಪಕರುಗಳನ್ನು ಟರ್ಮಿನೇಟ್ ಮಾಡಿ ಕಾರ್ಯಭಾರದ ಅನುಸಾರ ಬೇರೆಯವರಿಗಾದರೂ ಹುದ್ದೆಯನ್ನು ನೀಡಿದರೆ ವಿದ್ಯಾರ್ಥಿಗಳಿಗೂ ಹಾಗೂ ಕಡಿಮೆ ಕಾರ್ಯಭಾರ ನೀಡಿರುವ ಅತಿಥಿ ಉಪನ್ಯಾಸಕರುಗಳ ಜೀವನಕ್ಕೂ ಆಧಾರವಾಗುತ್ತದೆ ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ ನಾವು ಇದುವರೆಗೂ ಯಾವುದೇ ಹೊಸ ನೇಮಕಾತಿಯನ್ನು ಮಾಡಿಲ್ಲ, ಇರುವಂತಹ ಬೋಧಕ ಸಿಬ್ಬಂದಿಗಳಿಗೆ ಕಾರ್ಯಭಾರವನ್ನು ಹಂಚಿಕೆ ಮಾಡಲಾಗಿದೆ. ಎಲ್ಲಿ ಕಡಿಮೆ ಬೋಧಕರು ಎದ್ದಾರೆಯೋ ಅಂತಹ ಹುದ್ದೆಗಳಿಗೆ ಸಂದರ್ಶನ ನಡೆಸುವ ಮುಖಾಂತರ ನೇಮಕ ಮಾಡಲಾಗುವುದೆಂದು ತಿಳಿಸಿದರು.<br><br>ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ಎರಡು ಕಡೆ ಅತಿಥಿ ಉಪನ್ಯಾಸಕರುಗಳಾಗಿ ಕರ್ತವ್ಯ ನಿರ್ವಹಿಸುತ್ತಿರುವವರು ಎಷ್ಟು ಮಂದಿ ಇದ್ದಾರೆ ಎಂದು ಕೇಳಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ 3-4 ಮಂದಿ ಇದ್ದಾರೆ ಅಷ್ಟೆ. ದೊಡ್ಡಮಟ್ಟದಲ್ಲಿಲ್ಲ. ಹಾಗೂ 4 ಗಂಟೆಗಳ ಕಾರ್ಯಭಾರದಲ್ಲಿ ಕರ್ತವ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳು ಬೇರೆ ಕಾಲೇಜುಗಳಲ್ಲೂ ಕರ್ತವ್ಯ ನಿರ್ವಹಿಸುತ್ತಿದ್ದಾರೆ ಎಂದು ತಿಳಿಸಿದರು. ಹಾಗೂ ಯಾರು ಪೂರ್ಣ ಪ್ರಮಾಣದಲ್ಲಿ ಅಂದರೆ 12 ಗಂಟೆಗಳ ಕಾರ್ಯಭಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೋ ಅಂತಹ ಅತಿಥಿ ಉಪನ್ಯಾಸಕರುಗಳು ಬೇರೆಡೆ ಕರ್ತವ್ಯ ನಿರ್ವಹಿಸುವಂತಿಲ್ಲ ಎಂದು ತಿಳಿಸಿದರು. 4-8 ಗಂಟೆಗಳ ಕಾರ್ಯಭಾರ ನಡೆಸುವ ಅತಿಥಿ ಉಪನ್ಯಾಸಕರುಗಳಿಗೆ ದೊರಕುತ್ತಿರುವ ವೇತನ ಕಡಿಮೆ ಇರುವುದರಿಂದ ಅವರ ಜೀವನ ನಿರ್ವಹಣೆಗಾಗಿ ಬೇರೆಡೆ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. ಆದರೆ ಅವರುಗಳಿಗೆ ನಾವು ಬೇರೆಡೆಯೂ ಸಹ ಕರ್ತವ್ಯ ನಿರ್ವಹಿಸುವಂತೆ ತಿಳಿಸಿಲ್ಲ ಎಂದು ತಿಳಿಸಿದರು.<br><br>ಶ್ರೀ ನಾಗರಾಜು ಸಿ. ಅವರು ಮಾತನಾಡಿ ಶ್ರೀ ಮಹಾದೇವಯ್ಯ, ನಿವೃತ್ತ ನ್ಯಾಯಾಧೀಶರು, ನಾಗರಬಾವಿ, ಬೆಂಗಳೂರು ಇವರ ಹೆಸರನ್ನು ಡಾ. ಹೆಚ್.ಎಸ್. ದೇವರಾಜೇಗೌಡ ಅವರ ಕೇಸಿಗೆ ಸಂಬಂಧಿಸಿದಂತೆ ವಿಚಾರಣಾಧಿಕಾರಿಯನ್ನಾಗಿ ನೇಮಿಸಲು ಸೂಚಿಸಿದರು. ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಶ್ರೀ ನಾಗರಾಜು ಸಿ. ಅವರು ನೀಡಿರುವ ಹೆಸರಿಂದ ಪರ-ವಿರೋಧವೆಲ್ಲವೂ ಪ್ರಾರಂಭವಾಗುತ್ತದೆ ಎಂದು ತಿಳಿಸಿದರು.<br><br>ಶ್ರೀ ನಾಗರಾಜು ಸಿ ಅವರು ಮಾತನಾಡಿ ಸಭೆಯಲ್ಲಿ ನ್ಯಾಯಾಧೀಶರ ಹೆಸರನ್ನು ಸೂಚಿಸಿ ಎಂದು ಹೇಳಿದ್ದರಿಂದ ನಾನು ಈ ಹೆಸರನ್ನು ಸೂಚಿಸಿದ್ದೇನೆ ಎಂದು ತಿಳಿಸಿದರು.<br><br>ಡಾ. ಬಸವರಾಜು ಸಿ. ಅವರು ಮಾತನಾಡಿ ಈಗಾಗಲೇ ಸಭೆಯ ಸಮಯವೂ ಹೆಚ್ಚಾಗಿರುವುದರಿಂದ ಸಭೆಯಲ್ಲಿ ವಿಷಯಗಳ ಬಗ್ಗೆ ಬೇಗ ತೀರ್ಮಾನ ತೆಗೆದುಕೊಳ್ಳುವುದು ಒಳಿತು ಎಂದು ತಿಳಿಸಿದರು.<br><br>ಶ್ರೀ ನಾಗರಾಜು ಸಿ. ಅವರು ಮಾತನಾಡಿ ನಮಗೆ ಮಾನ್ಯ ಕುಲಪತಿಗಳ ಮೇಲೆ ಗೌರವವಿದೆ. ವಿಶ್ವವಿದ್ಯಾನಿಲಯದ ಅಭಿವೃದ್ಧಿಗಾಗಿ ತಾವು ಏನು ಕ್ರಮಕೈಗೊಳ್ಳುತ್ತೀರೋ ಅದಕ್ಕೆ ನಮ್ಮ ಸಹಕಾರವಿರುತ್ತದೆ ಎಂದು ಮೊದಲೇ ತಿಳಿಸಿದ್ದೇವೆ. ನಾವು ಅವರು ತೆಗೆದುಕೊಂಡಿರುವ ನಿರ್ಧಾರಗಳಿಗೆ ನಾವು ಬೇಡ ಎಂದು ತಿಳಿಸುತ್ತಿಲ್ಲಾ, ಆದರೆ ನೀವು ಹೆಸರನ್ನು ಸೂಚಿಸಿ ಎಂದು ಹೇಳಿದ್ದರಿಂದ ನಾನು ಹೆಸರನ್ನು ಸೂಚಿಸುತ್ತಿದ್ದೇನೆ ಎಂದು ತಿಳಿಸಿದರು.<br><br>ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ತಾವೂ ಹೆಸರನ್ನು ಸೂಚಿಸಬಹುದು. ಅಂತಿಮವಾಗಿ ಮಾನ್ಯ ಕುಲಪತಿಗಳ ವಿವೇಚನೆಗೆ ಬಿಟ್ಟಿದ್ದು ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ ಡಾ. ಹೆಚ್.ಎಸ್. ದೇವರಾಜೇಗೌಡರ ಹಾಗೂ ಶ್ರೀ |

ಶಿವಕುಮಾರ ಜೆ. ಅವರ ವಿಚಾರಣೆಯು ಶೀಘ್ರವಾಗಿ ನಡೆಯಬೇಕಾಗಿರುವುದರಿಂದ ಹಾಗೂ ಹಲವು ವಕೀಲರ ಅಭಿಪ್ರಾಯ ತೆಗೆದುಕೊಂಡು ಶ್ರೀ ವೆಂಕಟೇಶ್, ನಿವೃತ್ತ ನ್ಯಾಯಾಧೀಶರವರೊಂದಿಗೆ ಮಾತಾಡಿ ವರದಿಯು ತುರ್ತಾಗಿ ಬೇಕು ಎಂದು ತಿಳಿಸಿದಾಗ ಅವರು ನೀಡುವುದಾಗಿ ತಿಳಿಸಿರುತ್ತಾರೆ. ಹಾಗೆ ಶ್ರೀ ವೆಂಕಟೇಶ್ ಅವರು ನನಗೆ ಸಂಬಂಧಿಕರು ಅಲ್ಲವೆಂದು ತಿಳಿಸಿದರು. ಜೊತೆಗೆ ಮೈಸೂರಿನಲ್ಲಿರುವಂತಹ ನ್ಯಾಯಾಧೀಶರ ಹೆಸರನ್ನು ಸೂಚಿಸಿದರೆ ಒಳಿತು ಎಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಹಾಗೂ ಶ್ರೀ ಮಹಾದೇಶು ರವರುಗಳು ಈಗ ಮಾನ್ಯ ಕುಲಪತಿಗಳು ಸೂಚಿಸಿರುವಂತಹ ನಿವೃತ್ತ ನ್ಯಾಯಾಧೀಶರ ಬಗ್ಗೆ ಭಿನ್ನಾಭಿಪ್ರಾಯಗಳನ್ನು ವ್ಯಕ್ತಪಡಿಸಬಾರದು ಎಂದು ತಿಳಿಸಿದರು.

ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ ನ್ಯಾಯಾಧೀಶರನ್ನು ನೇಮಕ ಮಾಡುವ ಸಂಬಂಧ ಬೇರೆಯವರ ಸೂಚಿಸಬೇಕಾದರೆ ಈಗಲೇ ತಿಳಿಸಬೇಕಾಗುತ್ತದೆ. ಸಭೆಯ ನಂತರ ಅಥವಾ ಎರಡು-ಮೂರು ದಿನಗಳ ನಂತರ ಸೂಚಿಸಿದರೆ ಮತ್ತೊಂದು ವಿಶೇಷ ಸಿಂಡಿಕೇಟ್ ಸಭೆಯ ಕರೆಯಬೇಕಾಗುತ್ತದೆ. ಆ ಸಭೆಗೆ ಲಕ್ಷಾಂತರ ರೂ.ಗಳು ವೆಚ್ಚವಾಗುತ್ತದೆ. ಸಿಂಡಿಕೇಟ್ ಸದಸ್ಯರುಗಳಾದ ನಾವು ಅನಗತ್ಯ ಖರ್ಚುಗಳನ್ನು ಮಾಡಬಾರದೆಂದು ನಾವೇ ತಿಳಿಸಿ, ಮತ್ತೆ ನಾವೇ ಅನಗತ್ಯ ಖರ್ಚು ಮಾಡುವುದಕ್ಕೆ ಅವಕಾಶ ಕೊಡಬಾರದು. ನಾನು ವಕೀಲನಾಗಿರುವುದರಿಂದ ನನಗೂ ಸಮಯಾವಕಾಶ ನೀಡಿದರೆ ನ್ಯಾಯಾಧೀಶರುಗಳ ಹೆಸರನ್ನು ನೀಡಬಹುದು. ಆದರೆ ಹೆಚ್ಚು ಸಮಯಾವಕಾಶ ಇಲ್ಲದಿರುವುದರಿಂದ, ಹಾಗೂ ಡಾ. ಹೆಚ್.ಎಸ್. ದೇವರಾಜೇಗೌಡರವರಿಗೂ ಕಡ್ಡಾಯ ರಜೆ ಮೇಲೆ ಕಳುಹಿಸಿರುವುದರಿಂದ ಅವರಿಗೂ ಅಸಮಾಧಾನವಿದೆ. ಆದ್ದರಿಂದ ಬೇಗ ವಿಚಾರಣೆ ನಡೆಯಬೇಕಾದರೆ ಅಧ್ಯಕ್ಷರು ಸೂಚಿಸಿರುವಂತಹ ಶ್ರೀ ವೆಂಕಟೇಶ್, ನಿವೃತ್ತ ನ್ಯಾಯಾಧೀಶರನ್ನು ನೇಮಿಸುವುದು ಒಳಿತು ಎಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ಶ್ರೀ ಗೋಕುಲ್ ಗೋವರ್ಧನ್ ಅವರು ಮಾತಾಡಿದ ವಿಷಯಕ್ಕೆ ತಮ್ಮ ಸಮ್ಮತಿಯನ್ನು ಸೂಚಿಸುತ್ತಾ, ಬೇಕಾದರೆ 2-3 ಲೆಕ್ಕಾಧಿಕಾರಿಗಳನ್ನು ಸೇರಿಸಬಹುದು, ಜೊತೆಗೆ ದಾಖಲೆಗಳನ್ನು ಯಾರು ಬದಲಾಯಿಸಲು ಸಾಧ್ಯವಿಲ್ಲವೆಂದು ತಿಳಿಸಿದರು. ಈ ವಿಷಯಕ್ಕೆ ಶ್ರೀ ಮಹಾದೇಶು ಅವರು ದನಿಗೂಡಿಸಿದರು.

ಶ್ರೀ ನಟರಾಜು ಹೆಚ್.ಎಸ್. ಅವರು ಮಾತನಾಡಿ ಶ್ರೀ ಶಿವಕುಮಾರ್ ಜೆ., ಪ್ರಥಮ ದರ್ಜೆ ಸಹಾಯಕ, ಯುವರಾಜ ಕಾಲೇಜು ಇವರ ಮೇಲೆ ಅತ್ಯಾಚಾರದ ಪ್ರಕರಣವಿದೆ. ಅವರು ಹದಿನೈದು ದಿನಗಳ ಕಾಲ ಜೈಲಿನಲ್ಲಿದ್ದರು ಎಂಬ ಮಾಹಿತಿಯು ಇದೆ. ಈ ವಿಷಯದಲ್ಲಿ ಸತ್ಯಾಂಶವಿದ್ದರೆ ಕೋರ್ಟಿನ ದಾಖಲೆಯಿರುವುದರಿಂದ ವಿಶ್ವವಿದ್ಯಾನಿಲಯವು ಏಕೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬಾರದು ಎಂದು ಕೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ ಈ ವಿಷಯವು ವಿಶ್ವವಿದ್ಯಾನಿಲಯಕ್ಕೆ ಸಂಬಂಧಿಸಿಲ್ಲದಿರುವುದರಿಂದ, ಹಾಗೂ ಬೆಳಕಿಗೆ ಬಂದಿಲ್ಲದಿರುವುದರಿಂದ ಕ್ರಮತೆಗೆದುಕೊಳ್ಳಲಾಗಿಲ್ಲವೆಂದು ತಿಳಿಸಿದರು.

ಡಾ. ಸಿ. ಬಸವರಾಜು ಅವರು ಮಾತನಾಡಿ, ವಿಚಾರಣೆ ಕೈಗೊಂಡಾಗ ಎಲ್ಲಾ ವಿಚಾರಗಳು ಹೊರಗೆ ಬರುತ್ತದೆ ಎಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ಶ್ರೀ ಶಿವಕುಮಾರ್ ಜೆ. ಅವರಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ವಿಚಾರಣೆಗೆ ನೀಡಬೇಕೆಂದು ಸಂಬಂಧಪಟ್ಟ ಅಧಿಕಾರಿಗೆ ಸೂಚಿಸುವಂತೆ ಮಾನ್ಯ ಕುಲಪತಿಗಳಲ್ಲಿ ಮನವಿ ಮಾಡಿದರು.

ಕುಲಸಚಿವರು ಮಾತನಾಡಿ ಸಂಬಂಧಿತ ಎಲ್ಲಾ ಸ್ವೀಕೃತ ದಾಖಲಾತಿಗಳನ್ನು ವಿಚಾರಣಾ ಸಮಿತಿಗೆ ಒದಗಿಸಲಾಗುವುದೆಂದರು.

ಕುಲಸಚಿವರು ಸಭೆಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಸೂಕ್ತ ನಿರ್ಣಯಗಳನ್ನು ತೆಗೆದುಕೊಳ್ಳಲು ಸಹಕರಿಸಿದ ಅಧ್ಯಕ್ಷರು ಮತ್ತು ಸಿಂಡಿಕೇಟ್‌ನ ಎಲ್ಲಾ ಸದಸ್ಯರುಗಳಿಗೆ ವಂದನೆಗಳನ್ನರ್ಪಿಸುವ ಮೂಲಕ ಸಭೆಯು ಮುಕ್ತಾಯವಾಯಿತು.

ಸದಸ್ಯ ಕಾರ್ಯದರ್ಶಿ ಹಾಗೂ ಕುಲಸಚಿವರು

ಅಧ್ಯಕ್ಷರು ಹಾಗೂ ಕುಲಪತಿಗಳು